TIGHT BINDING BOOK

Osmania University Library

Call No. K82 5486

Name of Book [illegible]

Name of Author [illegible]

UNIVERSAL LIBRARY

OU_198939

UNIVERSAL LIBRARY

# ಗರ್ಭಗುಡಿ

ಶಿವರಾಮ ಕಾರಂತ

ರಾಮಮೋಹನ ಕಂಪೆನಿ, ಬೆಂಗಳೂರು ಸಿಟಿ.

PRINTED AT THE DHARMA PRAKASH PRESS, MANGALORE.

ನಮ್ಮ ನಾಡಿನ ಎಲ್ಲ ಮಠಾಧಿಕಾರಿಗಳಿಗೆ
ಇದನ್ನು
ಅರ್ಪಿಸಿರುತ್ತೇನೆ.

(ಅನುಮತಿಯಿಲ್ಲದೆ)

# ಮುನ್ನುಡಿ.

ಈ ನಾಟಕಕ್ಕೆ ನಾಲ್ಕು ಮಾತುಗಳನ್ನು ಮುನ್ನುಡಿಯಾಗಿ ಬರೆಯುವುದು ಅವಶ್ಯವೆಂದು ನನಗನಿಸುವುದು. ಕಾರಣ, ಇದರ ಸ್ವರೂಪವು ಇತರ ಕನ್ನಡ ನಾಟಕಗಳಿಗಿಂತ ಸ್ವಲ್ಪ ವಿಜಾತೀಯವಾಗಿದೆ. ದೃಶ್ಯಾವಳಿಯನ್ನು ಯೋಜಿಸುವಾಗ, ಆಂಗ್ಲ ಪದ್ಧತಿಯಂತೆ ಒಂದಂಕ-ಒಂದು ದೃಶ್ಯ-ಎಂಬ ಹಾದಿಯನ್ನು ಹಿಡಿದಿದ್ದೇನೆ. ಆದರಿಂದ ವಿಷಯವು ಸರಳವಾಗಿ, ತೀಕ್ಷ್ಣವಾಗಿ ಹರಿಯಲು ಅನುಕೂಲವೆಂದು ನನ್ನ ಮತ.

ನಾಟಕದ ಕಥಾವಸ್ತುವು, ದೇಗುಲದ ಗರ್ಭಗುಡಿಯನ್ನು ಬಹಿರಂಗ ಪಡಿಸಿದಂತೆ, ಧರ್ಮದ ಅಂತರ್ಯವನ್ನು ತಿಳಿಯಲು ಯತ್ನಿಸುವುದು. ಇದು ಅಪಹಾಸ್ಯವಾಗಿ (Satirically) ಚಿತ್ರಿತವಾಗಿರುವುದರಿಂದ—'ಧರ್ಮವಲ್ಲದ್ದು' ಏನು—ಎಂಬುದನ್ನು ತೋರಿಸಲು ಯತ್ನಿಸಿರುತ್ತೇನೆ ಗರ್ಭಗುಡಿಯಲ್ಲಿ ಅಂತರಂಗದ, ಮತ್ತು ಬಹಿರಂಗದ · ಎರಡು ವಿಗ್ರಹಗಳನ್ನು ಕಾಣಿಸಿದೆ. ಒಂದು ಇರಬೇಕಾದ, ಅಂದರೆ ನಿಜವಾದ ಶಿಲ್ಪಿಯು ತಪೋಬಲದಿಂದ ಕಂಡು ಅನುಭವಿಸಿ ಕೆತ್ತಿದ ಮೂರ್ತಿ; ಇನ್ನೊಂದು, ಪ್ರತಿಮೆಯ ನಿಜ ಪರಿಚಯವಿಲ್ಲದವರು, ಕಾಂಚನಕ್ಕೆ ಮರುಳಾಗಿ, ಬರೀ ಚಿನ್ನ ಬೆಳ್ಳಿ ಮುತ್ತು ರತ್ನಾದಿಗಳಿಂದ ನಿರ್ಮಿಸಿ, ಕಲಾದೃಷ್ಟಿಯಿಂದ ಅಸಹ್ಯವಾಗಿ ಕಾಣಿಸುವಂತೆ ಮಾಡಿದ ಗೊಂಬೆ! ಇಂದು ನಮ್ಮ ಗುಡಿ ದೇವಾಲಯಗಳಲ್ಲಿ ಶಿಲ್ಪಿಯು ಸೊಗಸಾಗಿ ನಿರ್ಮಿಸಿರುವ ವಿಗ್ರಹಗಳ ಚೆಲುವನ್ನು, ಹೇಗೆ ತಮ್ಮ ಮೂರ್ಖತೆಯಿಂದ, ಪೂಜಾರಿಯರು ಕೆಡಿಸುತ್ತಿರುವರೆಂದು ಇಲ್ಲಿ ತೋರಿಸಿದೆ. ಅಂತೆಯೇ ಧಾರ್ಮಿಕ ಜೀವನದ ಸ್ಥಿತಿ.

ಈ ಕಥಾನಿರ್ದೇಶನದಲ್ಲಿ ಕಾಶ್ಯಪನ ಪಾತ್ರವು ತಾದ್ರೂಪಿಕವಾಗಿ (Realistic) ಕಾಣಿಸಲಿಕ್ಕಿಲ್ಲ. ಕಾಶ್ಯಪ ಋಷಿಯು ಕಲಿಯುಗ ದಲ್ಲಿ ಅವತರಿಸುವುದುಂಟೆ? — ಎಂದು ಕೆಲವರು ಬೆಚ್ಚಿಬೀಳಬಹುದು. ಆದರೆ ಕಲಾವಿಧಾನದಲ್ಲಿ ತಾದ್ರೂಪಿಕತೆಗಿಂತ ತದಾತ್ಮಿಕತೆಗೆ ಪ್ರಾಧಾ ನ್ಯವಿದೆ ಅಂಥ ಸತ್ಯವನ್ನು ಇದು ತೋರಿಸುವುದು. ಕಾಶ್ಯಪನನ್ನೇ ಆರಿಸಲು ಕಾರಣವೆಂದರೆ, ಅವನು ಶಿಲ್ಪಶಾಸ್ತ್ರವನ್ನು ರಚಿಸಿದವ ನೆಂಬುದರಿಂದ. ತನ್ನ ಉದ್ದೇಶವನ್ನು ಈಗಿನ ಪೂಜಾರ್ಯರು ಎಷ್ಟು ಕೆಡಿಸಿರುವರೆಂದು ತಿಳಿದು ಮರುಗಲು ಅವನಿಗಿಂತ ಮಿಗಿಲಾದ ಇನ್ನೊಂದು ಪಾತ್ರವಿಲ್ಲ. ಅದಕ್ಕಾಗಿ ಶಿಲ್ಪಾಚಾರ್ಯನಾದ ಅವನನ್ನೇ ತಂದಿರುತ್ತೇನೆ ಮಿಕ್ಕುಳಿದ ಪಾತ್ರಗಳೂ, ದೃಶ್ಯಗಳೂ ಹೆಜ್ಜೆ ಹೆಜ್ಜೆಗೆ ನಮ್ಮ ಸಮಾಜದಲ್ಲಿ ಕಾಣುವ ಚಿತ್ರಗಳೇ.

ಇಂಥದೊಂದು ನವೀನ ಕೃತಿಯನ್ನು ಕನ್ನಡಿಗರು ಆದರದಿಂದ ಸ್ವೀಕರಿಸುವರಷ್ಟೆ.

ತಾ. 12 – 5 – 1932,<br>ಮಂಗಳೂರು.

ಶಿವರಾಮ ಕಾರಂತ.

---

# ಪಾತ್ರವರ್ಗ

ಕಾಶ್ಯಪ — ಪ್ರಾಚೀನಯುಗದ ಋಷಿಯು. ಭರತಖಂಡಕ್ಕೆ ಪುನರಾಗಮಿಸುವವನು. ಶಿಲ್ಪಾಚಾರ್ಯನು.

ಶ್ರೀಪಾದಂಗಳು — ಶುದ್ಧಾಂಬರ ಮಠದ ಸನ್ಯಾಸಿಯರು.

ಭಾನುಕೋಟಿ — ಇದೇ ಮಠದ ಪಾರುಪತ್ಯಗಾರರು.

ಏಕಾಕ್ಷಿ — ಅನಾಥಸ್ವಾಮಿ ಕ್ಷೇತ್ರದ ಪಂಡನು. ಭಾನುಕೋಟಿ ಆಚಾರ್ಯರ ಅನುಯಾಯಿ. ಅಚ್ಚ ವೈಷ್ಣವ.

ಮಾಣೇಶ — ಇದೇ ಕ್ಷೇತ್ರದ ಪಂಡ. ಕಡು ಶೈವ.

ಅಶ್ವತ್ಥ — ಇನ್ನೊಬ್ಬ ಪಂಡ ವೈಷ್ಣವ.


ಸಣ್ಣಪ್ಪ — ಪಂಡ. (ಕ್ಷೇತ್ರವಾಸಿ.)

ಗುಂಡಪ್ಪ — ಯಾತ್ರಿಕನಾಗಿ ಬಂದವನು.

ಚಂದ್ರಿ — ವೇಶ್ಯೆ.

ಚಿದಾನಂದ, ಸರ್. ಸದಾಶಿವ ರಾವ್, ಶಾರದೆ, ಮಠದ ಶಿಷ್ಯವರ್ಗ, ಮುದಿ ಹೊಲೆಯ, ಅವನ ಮಗ, ಮೂಂಕು, ಬಾಂಕು–ಮೊದಲಾದ ಹೊಲೆಯರು.

ಬೀದಿಯಲ್ಲಿ ಹಣ್ಣುಹಂಪಲು ಮೊದಲಾದುವನ್ನು ವಿಕ್ರಯಿಸುವ ವ್ಯಾಪಾರಿಗಳು.



ಕಾಶ್ಯಪ – "ದೇವರಿಲ್ಲ!"

# ಗರ್ಭಗುಡಿ

## ಅಂಕ ೧.

(ಶ್ರೀಕ್ಷೇತ್ರ – ಅನಾಥಪುರಿ. ಅನಾಥೇಶ್ವರನ ಗುಡಿಯ ಬಳಿ. ಒಂದು ಕಡೆ ಗುಡಿಯ ಎತ್ತರವಾದ ಪ್ರಾಕಾರ ಮಂಟಪಾದಿಗಳು; ಇನ್ನೊಂದೆಡೆ ಮಂದವಾಗಿ ಹರಿಯುತ್ತಿರುವ ಪತಿತಪಾವನೀ ನದಿ. ನದಿಯಾಚೆಗೆ ಭೂಕೈಲಾಸವೆಂಬ ಪರ್ವತ. ಹಾದಿಯಲ್ಲಿ ಹಣ್ಣುಹಂಪಲು, ಬೀಡಿಸಿಗರೇಟು, ಚಾ, ಕಾಫಿ ಮೊದಲಾದುವನ್ನು ಮಾರುತ್ತ ಅಡ್ಡಾಡುತ್ತಿರುವ ಚಿಲ್ಲರೆ ವ್ಯಾಪಾರಿಗಳು. ಆಗಾಗ "ಬೋಲೋ ಅನಾಥಸ್ವಾಮಿಕಿ ಜೈ, ಆನಂದಪುರುಷ ಕಿ ಜೈ" ಎಂದು ಕೇಳಿಬರುತ್ತಿರುವ ಜಯಘೋಷ.)

**ವ್ಯಾಪಾರಿ ೧:**— ಕಾಯಿ, ಕಾಯಿ, ಕಾಯಿ . . . . . ಕದಳೀಫಲ, ಕದಳೀಫಲ, ಕದಳೀಫಲ.

**ವ್ಯಾಪಾರಿ ೨:**— ಮುಕ್ತಿದಾರ, ಮುಕ್ತಿದಾರ . . . . . . ಎರಡು ಪಾವಾಣೆ . . . . ಮುಕ್ತಿದಾರ ಮುಕ್ತಿದಾರ . . . ಎರಡೆರಡು ಪಾವಾಣೆ . . . ಮುಕ್ತಿದಾರ . . . ಮುಕ್ತಿದಾರ ಎರಡೆರಡು ಪಾವಾಣೆ . . .

**ವ್ಯಾಪಾರಿ ೩:**— ಗಂಧಪ್ರಸಾದ, ಗಂಧಪ್ರಸಾದ . . . . ಒಂದಾಣೆ. ಗಂಧಪ್ರಸಾದ ಒಂದಾಣೆ, ಬರೇ ಒಂದಾಣೆ. ಹೋಗುತ್ತದೆ, ಹೋಗುತ್ತದೆ. ಈಹೊತ್ತಿನ ಪ್ರಸಾದ ಹೋಗುತ್ತದೆ. ಅನಾಥೇಶ್ವರನ ಪ್ರಸಾದ ಹೋಗುತ್ತದೆ. ಬರೇ ಒಂದಾಣೆ . . . . . . . ಶ್ರೀಮುಡಿ ಗಂಧಪ್ರಸಾದ ಒಂದೊಂದಾಣೆ.

**ವ್ಯಾಪಾರಿ ೧:**-- ಬಾಳೇ ಹಣ್ಣು, ಬಾಳೇ ಹಣ್ಣು, ಪಾವಾಣೆಗೊಂದು;
ತೆಂಗಿನಕಾಯಿ ಆಣೆಗೊಂದು . . . .

**ವ್ಯಾಪಾರಿ ೪:** – ಬಾಳೇಹಣ್ಣು, ಮಾವಿನಹಣ್ಣು, ಸೀಬೆಹಣ್ಣು, ಅನಾನಾಸು ಬಾಳೇಹಣ್ಣು, ಮಾವಿನಹಣ್ಣು, ಸೀಬೆಹಣ್ಣು, ಅನಾನಾಸು. ಸುರಗೀ ಹೂವು, ಸಂಪಿಗೇ ಹೂವು, ಮಲ್ಲಿಗೇ ಹೂವು. ಸುರಗೀ ಹೂವು, ಸಂಪಿಗೇ ಹೂವು, ಮಲ್ಲಿಗೇ ಹೂವು. ಬೀಡಾ ಬೀಡಿ ಸಿಗರೇಟು; ಬೀಡಾಬೀಡಿ ಸಿಗರೇಟು, ಬೀಡಾಬೀಡಿ ಸಿಗರೇಟು, ಬೀಡಾಬೀಡಿ ಸಿಗರೇಟು.

**ವ್ಯಾಪಾರಿ ೫:**— ಚಾ ಮುಸಲ್ಮೀನ್, ಚಾ ಮುಸಲ್ಮೀನ್.

**ವ್ಯಾಪಾರಿ ೬:**— ಚಾಯಾ ಹಿಂದು, ಚಾಯಾ ಹಿಂದು. ಗರಮಾ ಗರಮ್ ಹಿಂದು ಚಾಯಾ. ಗರಮಾಗರಮ್ ಚಾಯಾ ಏಕ್ ಆಣಾ, ಏಕ್ ಏಕ್ ಆಣಾ . . .

ಮದ್ರಾಸೀ ಕಾಫೀ, ಮದ್ರಾಸೀ ಕಾಫೀ ದೇಡ್ ಆಣಾ, ಮದ್ರಾಸೀ ಕಾಫೀ ದೇಡ್ ದೇಡ್ ಆಣಾ . . . .

ಛೇ ಇವತ್ತು ಬರಿದೆ ಗಂಟಲು ಒಡೆದುಕೊಳ್ಳುವುದು ಸರಿಯೆಂದು ಕಾಣುತ್ತದೆ. ಒಂದು ಬಿಲ್ಲೆಯ ವ್ಯಾಪಾರವೂ ಆಗುವುದಿಲ್ಲ. ಈ ಜನರೆಲ್ಲ ಯಾವ ಕರ್ಮಕ್ಕೆ ಇಲ್ಲಿಗೆ ಬರುವುದೋ ದೇವರಿಗೇ ಗೊತ್ತು. ಒಂದು ಕಾಸನ್ನೂ ಬಿಚ್ಚುವ ಮಕ್ಕಳಲ್ಲ . . ಇಂಥವರಿಗೆಲ್ಲ ಕ್ಷೇತ್ರಯಾತ್ರೆ!

**ವ್ಯಾಪಾರಿ ೧:**— ಹಣ್ಣುಕಾಯಿ, ಹಣ್ಣುಕಾಯಿ, ಹಣ್ಣುಕಾಯೀ . . . ಹೋಗುತ್ತೆ— ಹಣ್ಣುಕಾಯಿ, ಹಣ್ಣುಕಾಯಿ . . .
ಇಂದು ಇಲ್ಲಿಗೆ ಬರುವವರೆಲ್ಲ ಸತ್ತು ಮಣ್ಣುತಿಂದರೋ ಏನೋ . . . . ಒಂದು ಕಾಸಿನ ವ್ಯಾಪಾರವಾಗುವುದಿಲ್ಲ ಅಲ್ಲ, ದೇವ

ರಿಗೆ ಒಡೆಯದಿದ್ದರೆ ಅಷ್ಟೇ ಹೋಯಿತು; ಈ ಬಿಸಿಲಿಗೆ ತಾವಾದರೂ ನಾಲ್ಕು ಹಣ್ಣು ತಿನ್ನಬಾರದೇ?

**ವ್ಯಾಪಾರಿ ೪:**— ಬೀಡಾ, ಬೀಡಿ ಸಿಗರೇಟು. ಏ ಸಿದ್ಧಪ್ಪ (೩ನೇ ವ್ಯಾಪಾರಿ) ಬಾರಯ್ಯ, ಅಲ್ಲಿ ಯಾರೋ ಬಂಡಿ ಇಳಿದು ಬಂದರು. ಬಾರಯ್ಯ–

(ಎಲ್ಲರೂ ಧಾವಿಸುವರು. ಸಿದ್ಧಪ್ಪನು ಹತಾಶನಾಗಿ ಮರಳಿ ಬರುವನು.)

**ವ್ಯಾಪಾರಿ ೩:** - ಇಷ್ಟು ಹೊತ್ತಿನ ತನಕ ಒಂದು ಕಾಸಿನ ಪ್ರಸಾದ ಖರ್ಚಾಗಲಿಲ್ಲವೆಂದು ಓಡಿದರೆ . . . . . ಅದೂ ಅಷ್ಟಕ್ಕೆ ಬಂತು ಹಾಳಾದ ಬ್ರಾಹ್ಮಣರು ಎಂದು ಕಾಣುತ್ತದೆ ಅವರಿಗೆ ಯಾಕೆ ಪ್ರಸಾದ. ಗುಡಿಯ ಒಳಕ್ಕೆ ಹೋಗಿ ತೆಗೆದುಕೊಂಡು ಬರುತ್ತಾರೆ. ಅಯ್ಯೋ, ಈ ಚಾಂಡಾಲ ಮುಂಡೇಗಂಡರೆಲ್ಲ ಈ ವರುಷ ಸತ್ತುಹೋದರೇನು? ಬೆಳಗಾಗಿ ಜಾವ ಹೊತ್ತು ಕಳೆಯಿತು, ಇನ್ನೂ ನಾಲ್ಕು ಕಾಸುಗಳ ವ್ಯಾಪಾರವಿಲ್ಲ. ಹೀಗೆಯೇ ಆದರೆ ನನ್ನ ಪ್ರಸಾದ ಮಾರುವ ಕಂಟ್ರಾಕ್ಟು ಮಣ್ಣು ತಿಂದುಹೋಯಿತು

(ಅಷ್ಟರಲ್ಲಿ ಗುಂಡಪ್ಪನೆಂಬ ಯಾತ್ರಿಕ, ಅವನ ತಾಯಿ, ಚಿಕ್ಕ ಹುಡುಗ ಇಷ್ಟು ಜನರು ತಮ್ಮ ಗಂಟುಮೂಟೆಗಳ ಸಮೇತ ಬರುವರು. ಎರಡು ಕಡೆಯಿಂದ ವಿಶಾಕ್ಷಿ ಮತ್ತು ಮಾಣೇಶ ಎಂಬ ಪಂಡರು ಅವರನ್ನು ಎಳೆಯುತ್ತಿರುವರು. ವ್ಯಾಪಾರಿಗಳು ಓಡಿಹೋಗಿ ಅವರ ಸುತ್ತ ಕಲೆಯುವರು )

**ವ್ಯಾಪಾರಿ ೧:**— ಬಾಳೇ ಹಣ್ಣು, ಬಾಳೆ ಹಣ್ಣು, ತೆಂಗಿನಕಾಯಿ, ತೆಂಗಿನಕಾಯಿ.

**ವ್ಯಾಪಾರಿ ೨:**— ಮುಕ್ತಿದಾರ, ಮುಕ್ತಿದಾರ . . . . . ಎರಡೆರಡು ಪಾವಾಣೆ

**ವ್ಯಾಪಾರಿ ೬:** ಚಾಯಾ ಹಿಂದು, ಹಿಂದೂ ಚಾಯಾ ಒಂದಾಣೆ. ಮದ್ರಾಸೀ ಕಾಫೀ ದೇಡ್ ಆಣಾ . . . . .

**ವ್ಯಾಪಾರಿ ೪:**— ಬೀಡಾಬೀಡಿ ಸಿಗರೇಟು, ಬೀಡಾಬೀಡಿ ಸಿಗರೇಟು.

**ಗುಂಡಪ್ಪ:**— ಅಯ್ಯೋ, ದೂರ ಸರಿಯಿರಿ, ನನಗೊಂದೂ ಬೇಡ.

**ವ್ಯಾಪಾರಿ ೧:**— ಬಾಳೇ ಹಣ್ಣು, ತೆಂಗಿನ ಕಾಯಿ; ಅರ್ಧಾಣೆ, ಒಂದಾಣೆ.

**ಗುಂಡಪ್ಪ:**— ಅಯ್ಯೋ ದಮ್ಮಯ್ಯ, ದೂರ ಸರಿಯಿರಿ ಮೈಮೇಲೆ ಬಿದ್ದು ಈ ಮುದುಕಿಯ ಪ್ರಾಣವನ್ನು ತೆಗೆಯಬೇಡಿರಿ ನನಗೇನೂ ಬೇಡ . . . ನಿಮ್ಮ ತೆಂಗಿನಕಾಯಿ ಬೇಡ . . . ಏನೇನೂ ಬೇಡ.

**ಏಕಾಕ್ಷಿ:**— ದೂರ ಸರಿಯಿರಿ. ಏನು, ತೋಳಗಳ ಹಾಗೆ ಮಾಡುತ್ತೀರಿ? ಅವರು ಬಂಡಿಯಿಂದಿಳಿಯುವುದರೊಳಗೇನೆ ಜೀವ ತಿನ್ನಬೇಡಿರಿ ಮೊದಲು ಕ್ಷೇತ್ರವಿಧಿಗಳು ಆಗುವುದೇ, ಅಥವಾ ನಿಮ್ಮ ಬೀಡಾ ಸಿಗರೇಟು ನೋಡುವುದೇ? . . . ಹೀಗೆ ಬನ್ನಿ ಸ್ವಾಮಿ; ಹೀಗೆ ಹೆಜ್ಜೆಯಿಡಿ ತಾಯಿ ಹುಡುಗಾ, ಗಂಟು ಜಾಗ್ರತೆಯಿರಲಿ . .

**ಮಾಣೇಶ:**— ಎಲ್ಲಿಗೈಯ್ಯ ಅವರನ್ನು ಒಯ್ಯುವುದು? ಅವರನ್ನು ಗಾಡಿಯ ಮೇಲೆ ಕುಳ್ಳಿರಿಸಿಕೊಂಡು ಕರೆದುತರಲಿಕ್ಕೆ ನಾನು; ಈಗ ಕರೆದುಕೊಂಡು ಹೋಗಲಿಕ್ಕೆ ನೀನೇನು? ಹೂಂ, ನಡಿ . . ಪ್ರತಿಸಾರಿಯೂ ನಡುವೆ ಬಂದು ಬಾಯಿ ಹಾಕಬೇಡ.

**ಏಕಾಕ್ಷಿ:**— ಮಾಣೇಶ, ನಿನಗೆ ಕೊಬ್ಬು ಮೀರಿದೆ ಎಂದು ಕಾಣುತ್ತದೆ. ಗಾಡಿಯವನನ್ನು ಕರೆದದ್ದು ಯಾರು? ನಾನೋ, ನೀನೋ? ಹೀಗೆ ಬನ್ನಿ ಸ್ವಾಮಿ. ಇದು ಕ್ಷೇತ್ರ . . . ಯಾರಾರ ಮನೆಯಲ್ಲಿ ಹೋಗಿ ಇಳಿದುಕೊಂಡರೆ ನಿಮ್ಮ ನಾಮಾನು ಜೋಪಾಸನವಾಗಿ ಉಳಿಯಲಿಕ್ಕಿಲ್ಲ.

**ಮಾಣೇಶ:** - ಯಾರಾರ ಮನೆಯೆಂದರೇನೋ? ನಿನಗೆ ಒಂದು ಕಣ್ಣಿದ್ದೇ ಇಷ್ಟು ಮಾತನಾಡುತ್ತೀ!

**ಏಕಾಕ್ಷಿ:**—ನನ್ನ ಕಣ್ಣಿನ ಸುದ್ದಿ ಎತ್ತಿದರೆ ನಿನ್ನ ಹಲ್ಲು ಒಂದೂ ಉಳಿಯಲಿಕ್ಕಿಲ್ಲ ತಿಳಿಯಿತೇ?

**ಗುಂಡಪ್ಪ:**— ಹೋಗಲಿ ಸ್ವಾಮಿ, ನಿಮ್ಮ ನಿಮ್ಮಲ್ಲಿ ಏತಕ್ಕೆ ಜಗಳ?

**ಏಕಾಕ್ಷಿ:**—ಅದೇ ನಾನೆನ್ನುವುದು. ಬನ್ನಿ ಸ್ವಾಮಿ, ಹೀಗೆ ಬನ್ನಿ. ಅಲ್ಲೇ ಕಾಣಿಸುತ್ತಿದೆಯಲ್ಲ ನಮ್ಮ ಮನೆ. ಹವಾಗಿವಾ ನೀರು ಗೀರಿಗೆ ಏನೇನೂ ಕೊರತೆಯಿಲ್ಲ.

**ಮಾಣೇಶ:**— ಸ್ವಾಮಿ, ನಮ್ಮ ಮನೆ ಆದರ ಅಪ್ಪನ ಹಾಗಿದೆ. ಹೀಗೆ ಬನ್ನಿ ತಾಯಿ (ಎಂದು ಗುಂಡಪ್ಪನ ತಾಯಿಯನ್ನು ಒಡಿದೆಳೆಯುವನು).

**ಗುಂಡಪ್ಪ:**— ಏನು ಸ್ವಾಮಿ, ತಾಯಿ ಮಕ್ಕಳನ್ನು ಹಂಚಿ ತಿನ್ನುತ್ತೀರೇನು ನೀವು? ನಮಗೆ ಯಾರ ತಂಟೆಯೂ ಬೇಡ.

**ಏಕಾಕ್ಷಿ:**— ಸ್ವಲ್ಪ ಸುಮ್ಮನಿರೋ ಮಾಣೇಶ. ಇನ್ನೊಂದು ಸಾರಿ ಅವರು ನಿನ್ನಲ್ಲಿಗೇ ಬರುತ್ತಾರೆ

**ಮಾಣೇಶ:**— ಇನ್ನೊಂದು ಜನ್ಮಕ್ಕೆ! . . . ಸ್ವಾಮಿ . . . ಇರಲಿ, ನಿಮ್ಮ ಹೆಸರೇನು?

**ಗುಂಡಪ್ಪ:**— ಗುಂಡಪ್ಪ, ಸ್ವಾಮಿ.

**ಮಾಣೇಶ:**— ಸರಿಯಾಯಿತು . . ಗುಂಡಪ್ಪ ಎಂದಲ್ಲವೇ! ಬನ್ನಿ ಸ್ವಾಮಿ, ನಮ್ಮ ಮನೆಗೆ ಹೋಗುವ. ನೀವು ಸ್ಮಾರ್ಥರು. ಅವನು ಕಡು ವೈಷ್ಣವ ಸ್ವಾಮಿ. ನಿಮಗೆ ಅಲ್ಲಿ ಹೇಗೆ ಸರಿ ಹೋದೀತು? ಅನಾಥೇಶ್ವರನ ಕ್ಷೇತ್ರಕ್ಕೆ ಬಂದು ವೈಷ್ಣವರ ಮನೆಯಲ್ಲಿರುವುದೇ?

**ಏಕಾಕ್ಷಿ:**— ಸ್ವಾಮಿ, ಗರುಡಪ್ಪ ಎಂದಿರಲ್ಲವೆ! ಹಾಗಾದರೆ ನೀವು ವೈಷ್ಣವರು. ಆ ಶೈವನ ಮನೆಯಲ್ಲಿ ನೀರು, ನೀರು ಮುಟ್ಟಬಾರದು. ಈ ಅನಾಥ ಸ್ವಾಮಿಯ ಸ್ಥಳಕ್ಕೆ ಬಂದು . . . . !

**ಮಾಣೀಶ:**— ಏಕಾ, ಸುಳ್ಳು ಹೇಳಿದರೆ ನೋಡಿಕೋ. ಇದು ಅನಾಥೇಶ್ವರನ ಗುಡಿಯೇ? ಅನಾಥಸ್ವಾಮಿ ಗುಡಿಯೇ? ಈಶ್ವರನನ್ನು ತೆಗೆದು ವಿಷ್ಣುವನ್ನು ಮಾಡುತ್ತೀಯಾ? ಬನ್ನಿ ಸ್ವಾಮಿ.

**ಏಕಾಕ್ಷಿ:**— ಬನ್ನಿ ಸ್ವಾಮಿ, ಅವನ ಜತೆಯಲ್ಲಿ ಹೋಗಬೇಡಿ. . . . ನೋಡಿ, ಹೋದರೆ ಅನಾಥಸ್ವಾಮಿಯ ಆಣೆಯಿದೆ.

**ಗುಂಡಪ್ಪ:**— ದೇವರೇ, ಇದು ಎಂಥ ಧರ್ಮ ಸಂಕಟ . . . . ಎಲ್ಲಿ ಹೋಗಲಿಕ್ಕೂ ನೀವು ಬಿಡಬೇಕಲ್ಲ !

**ಮಾಣೀಶ:**— ಸ್ವಾಮಿ, ನೀವು ಅವನ ಮನೆಗೆ ಹೋದರೆ ಅನಾಥೇಶ್ವರನ ಆಣೆಯಿದೆ

**ಗುಂಡಪ್ಪ:**— ನಾನು, ಸ್ವಾಮಿ, ಯಾರ ಮನೆಗೂ ಬರುವುದಿಲ್ಲ ಇಲ್ಲಿಂದಲೇ . . . .

**ಮಾಣೀಶ:**— ಸ್ವಾಮಿ, ಅನ್ನುತ್ತೇನೆ: ನನ್ನೊಟ್ಟಿಗೆ ಬನ್ನಿ. ಎಲ್ಲವನ್ನು ಸುಲಭದಲ್ಲಿ ಮುಗಿಸಿ ರೈಲಿಗೆ ಮುಟ್ಟಿಸುವ ಭಾರ ನನ್ನದು. ಅವನ ಮನೆಗೆ ಹೋಗಬೇಡಿ ಕಳೆದ ವರುಷವಷ್ಟೆ, ಕಳವುಮಾಡಿದನೆಂದು ಅವನಿಗೆ ಆರು ತಿಂಗಳ ಸಜಾ ಆದದ್ದು . . !

**ಏಕಾಕ್ಷಿ:**— ಮಾಣೀಶ, ನಿನ್ನ ಸೊಕ್ಕನ್ನು ಮುರಿಯದಿದ್ದರೆ ನಾನು ಏಕಾಕ್ಷಿಯೇ ಅಲ್ಲ. ನಾಳೆ ಶ್ರೀಪಾದಂಗಳವರು ಬರುತ್ತಾರಲ್ಲ. ಅವರಿಂದ ನಿನಗೆ ಅಡ್ಡಪಂಕ್ತಿ ಕೊಡಿಸದಿದ್ದರೆ ನಾನೇಕೆ? ಸ್ವಾಮಿ . . . . . . ಹೊಲತಿಯನ್ನು ಮನೆಯಲ್ಲಿರಿಸಿಕೊಂಡು ನನ್ನನ್ನು ದೂರುತ್ತಾನೆ! ಇದನ್ನೆಲ್ಲ ನಂಬಬೇಡಿ, ನಂಬಬೇಡಿ . . .

**ಗುಂಡಪ್ಪ:**— ಸ್ವಾಮಿ, ದಯವಿಟ್ಟು ನನ್ನನ್ನು ಬಿಡಿ.

**ಏಕಾಕ್ಷಿ:**— ಏನೂ ಆಗಲಿ, ನಾನು ನಿಮ್ಮನ್ನು ನಮ್ಮ ಮನೆಗೆ ಕರೆದು ಕೊಂಡು ಹೋಗುವುದೇ ನಿಶ್ಚಯ. ಸ್ವಾಮಿ, ನನಗೊಂದು ಕಾಸನ್ನೂ ಕೊಡಬೇಡಿ.

**ಮಾಣಿಕ್ಯೇಶ:**— ಸ್ವಾಮಿ, ನಿಮ್ಮ ಊಟದ ಖರ್ಚೂ ಸಹ ನನ್ನದು

(ಇಕ್ಕಡೆಯಿಂದಲೂ ಗುಂಡಪ್ಪನನ್ನು ಎಳೆದು ಹಿಂಸಿಸುವರು)

**ಗುಂಡಪ್ಪ:**— ಅಯ್ಯೋ, ದಮ್ಮಯ್ಯ ನನ್ನನ್ನು ಬಿಡಿರಿ.

(ದೂರದಲ್ಲಿ ಕಾಷಾಯವೇಶಧಾರಿಯಾದ ಕಾಶ್ಯಪನು ಬರುವನು. ಗಡ್ಡಮೀಸೆಗಳುಳ್ಳ, ಅವನನ್ನು ಕಂಡು ಅವನಾರೆಂದು ತಿಳಿಯಲಾರದ ಹಿಂದುಮುಸಲ್ಮಾನ ಚಾ-ವಿಕ್ರಯಗಾರರು ಅವನಲ್ಲಿಗೆ ಧಾವಿಸುವರು)

**ವ್ಯಾಪಾರಿ ೧:**— ಚಾಯಾ, ಚಾಯಾ. ಗರಮಾಗರಮ್ ಚಾಯಾ! ಚಾಯಾ ಮುಸಲ್ಮೀನ್.

**ವ್ಯಾಪಾರಿ ೨:**— ಚಾಯಾ ಹಿಂದು. ಹಿಂದೂ ಚಾಯಾ, ಒಂದಾಣೆ.

**ಮಾಣಿಕ್ಯೇಶ:**— (ಕರಕರೆಯನ್ನು ಸಹಿಸಲಾರದೆ) ಹೋಗಯ್ಯ, ಯಾರಿಗೆ ಬೇಕು ನಿನ್ನ ಚಾಯಾ?

**ವ್ಯಾಪಾರಿ ೧:**— ನಿನ್ನನ್ನು ಯಾರು ಕೇಳಿದರಯ್ಯ? (ಕಾಶ್ಯಪನನ್ನು ಕುರಿತು) ಜೀ, ಗರಮ್ ಚಾಯಾ. ಚಾಯಾ ಮುಸಲ್ಮೀನ್ . . . ಒಂದಾಣೆ.

**ವ್ಯಾಪಾರಿ ೨:**— ಸ್ವಾಮಿ, ಅವನು ಮುಸಲ್ಮಾನ ನಾನು ಹಿಂದು. ಹಿಂದೂ ಚಾ ಒಂದಾಣೆ.

**ವ್ಯಾಪಾರಿ ೧:**— ಫಕೀರಜೀ, ಅವನು ಹಿಂದು ನಾನೂ ತಾಜಾ ಮುಸಲ್ಮೀನ್ ಮುಸಲ್ಮೀನ್ ಚಾಯಾ ಒಂದಾಣೆ.

**ಕಾಶ್ಯಪ:**— ನೀವನ್ನುವುದೇನು? ನನಗೆ ನಿಮ್ಮೊಂದೂ ಉಪಚಾರವು ಬೇಕಿಲ್ಲ ನನ್ನಷ್ಟಕ್ಕೆ ನಾನು ಹೋಗುತ್ತೇನೆ

**ವ್ಯಾಪಾರಿ ೫:**— ಸ್ವಾಮಿ, ಗರಮ್ ಚಾಯಾ . . .

**ವ್ಯಾಪಾರಿ ೬:**— ಜೀ, ಲಿಪ್‌ಟನ್ ಚಾಯಾ . . . .

**ಕಾಶ್ಯಪ:**— ನನಗೇನೂ ಬೇಡ. ಹೋಗಿರಿ.

**ವ್ಯಾಪಾರಿ ೬:**— ಒಂದು ಕಪ್ ಚಾ ಕುಡಿಯುವ ಯೋಗ್ಯತೆಯಿಲ್ಲದವರು ಈ ಯಾತ್ರಾಸ್ಥಳಕ್ಕೆ ಏಕೆ ಬರಬೇಕೋ? (ತೆರಳುವರು.)

**ಏಕಾಕ್ಷಿ:**— (ಆ) ಈ ಮಾಣೇಶನ ಕಾಟದಿಂದ, ಈ ಗುಂಡಪ್ಪ ನನಗೆ ಸಿಗುವ ಹಾಗಿಲ್ಲ. ಇವನನ್ನಾದರೂ ಹಿಡಿಯುವ. (ಕಾಶ್ಯಪನ ಬಳಿಗೆ ಧಾವಿಸಿ) ಸ್ವಾಮಿ, ಬನ್ನಿ, ಬನ್ನಿ ನಮ್ಮ ಮನೆಗೆ ಹೋಗುವ. ಬೋಲೋ: ಅನಾಥಸ್ವಾಮಿಕಿ ಜೈ, ಆನಂದಪುರುಷ್‌ಕೀ ಜೈ.

**ಮಾಣೇಶ:**— ಓಹೋ, ಈ ಒಕ್ಕಣ್ಣ ಶುಕ್ರಾಚಾರಿ ಅಲ್ಲಿಗೆ ಹೋದನೇನು? ಸ್ವಾಮಿ, ಗುಂಡಪ್ಪನವರೇ, ಸ್ವಲ್ಪ ನಿಲ್ಲಿ; ಬಂದೆ. (ಕಾಶ್ಯಪನಲ್ಲಿಗೆ ಧಾವಿಸಿಹೋಗಿ) ಬಾವಾಜೀ, ನಮ್ಮ ಮನೆಗೆ ಬನ್ನಿ ಎಲ್ಲಾ ವಿಧಿಗಳೂ ಬಹು ಸುಲಭದಲ್ಲಿ ಆಗುತ್ತವೆ ಬೋಲೋ: ಅನಾಥೇಶ್ವರಕೀ ಜೈ; ಆನಂದಪುರುಷ್‌ಕೀ ಜೈ.

**ಕಾಶ್ಯಪ:**— ಅನಾಥಬಂಧುವಿನ ಗುಡಿಯೆಲ್ಲಿದೆ?

**ಮಾಣೇಶ:**— }<br>**ಏಕಾಕ್ಷಿ:**— } ಇಲ್ಲಿ, ಓ ಅಲ್ಲಿ.

**ಕಾಶ್ಯಪ:**— ಉಪಕಾರವಾಯಿತು. ನೀವು ಹೋಗಿರಿ. ನಾನಿನ್ನು ಗುಡಿಗೆ ಹೋಗುತ್ತೇನೆ.

**ಮಾಣೇಶ:**— ನಾನು ಬೇಡವೆ! ನದಿಸ್ನಾನವನ್ನು ಮಾಡಿಕೊಂಡು ಪೂಜೆಯ ಕಾಲಕ್ಕೆ ಸರಿಯಾಗಿ ಹೋದರಾಯಿತು. ಪತಿತ ಪಾವನೀ ನದಿಯನ್ನು ನೋಡಿ: ಅಲ್ಲೇ ಹರಿಯುತ್ತಿರುವುದು. ಏಳಿ, ಸ್ನಾನಘಟ್ಟಕ್ಕೆ ಹೋಗುವ.



ಏಕಾಕ್ಷಿ

**ಏಕಾಕ್ಷಿ:**— ಏ ಮಾಣೇಶ, ನೀನು ಪ್ರತಿ ಸಾರಿಯೂ ನಾನು ಬಂದ ಲ್ಲಿಗೆ ಬಂದರೆ . . . .

**ಮಾಣೀಶ.** — ಹೋಗಯ್ಯ, ನೀನು ಬಂದಲ್ಲಿಗೆ ಬರುವುದಂತೆ!

**ಏಕಾಕ್ಷಿ:**— ನಾನು ಮೊದಲು ಅವರನ್ನು ಕಂಡದ್ದು.

**ಮಾಣೀಶ:**— ನಿನ್ನ ಒಕ್ಕಣ್ಣಿನಿಂದ ಕಾಣುವುದೇನು ಮಣ್ಣು?

**ಏಕಾಕ್ಷಿ:**—ಒಕ್ಕಣ್ಣನೆಂದು ಯಾರಿಗೆಂದೆ? (ಸಿಟ್ಟಾಗಿ ಮಾಣೇಶನಿಗೊಂದೇಟನ್ನು ಏರಿಸುವನು.)

**ಮಾಣೀಶ:**—ಏ ಕಳ್ಳಶುಕ್ರಾಚಾರಿ ನನ್ನನ್ನು ಹೊಡೆಯುತ್ತೀಯೋ?

(ಅವರಲ್ಲಿ ಜಗಳವಾಗುವುದು. ಕಾಶ್ಯಪನು ಸಮಾಧಾನಪಡಿಸಲು ಯತ್ನಿಸುವನು.

ಇನ್ನೊಂದೆಡೆಯಿಂದ ಅಶ್ವತ್ಥನೆಂಬ ಮೂರನೆಯ ಪಂಡನ ಸವಾರಿ ಬರುವುದು.)

**ಅಶ್ವತ್ಥ:**— ಅಯ್ಯಪ್ಪ. ಎಲ್ಲೆಲ್ಲಿ ಹುಡುಕಿದರೂ ಒಬ್ಬನೂ ಯಾತ್ರಿಕ ಸಿಗಲಿಲ್ಲ. ಏನು ಬರಗಾಲ ಬಂದಿತೋ ಈ ಊರಿಗೆ! ಅನಾಥ ಸ್ವಾಮಿಯೇ ಬಲ್ಲ. ಓಹೋ, ಅಲ್ಲಾರೋ ಮೂವರು ನಿಂತಿದ್ದಾರೆ . . . . ನಿಶ್ಚಯಕ್ಕೂ ಪರವೂರವರು. ಈ ಹಾಳುಕ್ಷೇತ್ರದ ಪಂಡರ ಕಣ್ಣು ಬೀಳುವುದರೊಳಗಾಗಿ ಅವರನ್ನು ಕರೆದುಕೊಂಡು ಹೋಗುತ್ತೇನೆ . . . . (ಮುಂದರಿಸಿ ಗುಂಡಪ್ಪನ ಬಳಿಗೆ ಹೋಗುವನು.)

**ಕಾಶ್ಯಪ:**— ನೀವು ಯಾಕೆ ಜಗಳಮಾಡುತ್ತೀರಿ?

**ಏಕಾಕ್ಷಿ:**— ಸ್ವಾಮಿ, ನೀವೇ ನೋಡಿ. ಈಗಷ್ಟೆ, ಒಬ್ಬ ಮುದುಕಿಯನ್ನೂ ಅವಳ ಮಗನನ್ನೂ ಕರೆದುತಂದೆ. ಇವನು ತನ್ನ ಮನೆಗೆ ಅವರನ್ನು ಎಳೆಯಲು ತೊಡಗಿದನು.

**ಮಾಣೀಶ:**— ಏನಯ್ಯಾ, ನಾನು ಎಳೆಯಲು ಬಂದವನೋ, ನೀನೊ?

**ಕಾಶ್ಯಪ:**— ಇರಲಿ, ಅವರನ್ನು ನೀವು ಎಳೆಯುವುದಾದರೂ ಏಕೆ? ಅವರವರ ಇಷ್ಟವಿದ್ದಲ್ಲಿಗೆ ಹೋಗಲಿ

**ಮೂಣಾಕ್ಷೀಶ:**— ಅದು ಹೇಗಾಗುತ್ತದೆ? ಇದು ಕ್ಷೇತ್ರ. ಪಂಡರ ಸಹಾಯವಿಲ್ಲದೆ ಅವರು ಏನುಮಾಡಲಿಕ್ಕೂ ಬರಲಿಕ್ಕಿಲ್ಲ ಒಂದು ತಾಯಿ ಶ್ರಾದ್ಧಮಾಡಬೇಕಾಯಿತು . . . .

**ಏಕಾಕ್ಷಿ:**— ಹೋಗಯ್ಯ, 'ತಾಯಿಯ ಶ್ರಾದ್ಧಮಾಡುವುದಂತೆ!' ಕೇಳಿದರೆ ಹಲ್ಲು ಮುರಿದುಬಿಟ್ಟಾನು. ಅವನ ತಾಯಿ ಬಂದಿದ್ದಾಳೆ. ಪಾಪದ ಮುದುಕಿ!

**ಮುಣಾಕ್ಷೀಶ:**— ಹೋಗಯ್ಯ, ತಾಯಿ ಅಲ್ಲದಿದ್ದರೆ ತಂದೆ.

**ಏಕಾಕ್ಷಿ:**— ತಂದೆಯಂತೆ! ಆ ಹೆಂಗುಸಿನ ಹಣೆಯ ಮೇಲೆ ಕುಂಕುಮವಿದೆ.

**ಮೂಣಾಕ್ಷೀಶ:**— ತಂದೆಯೂ ಇದ್ದರೆ ಅಜ್ಜ ಅವನೂ ಇದ್ದರೆ ಪಿಜ್ಜ. ಅದು ನಿನಗೇಕೆ? ಅಂತು ಯಾರದ್ದಾದರೂ ಶ್ರಾದ್ಧಮಾಡದೆ ಉಪಾಯವುಂಟೇ? ಅದಕ್ಕೆ ಸ್ವಾಮಿ, ನಾವು ಬೇಕು. ಅವರಿಗೆ ನಂಟರಿದ್ದಾರೆಯೇ ಇಲ್ಲಿ.

**ಕಾಶ್ಯಪ:**— ಹಾಗೆ! ನೀವು ಅವರನ್ನು ಆತಿಥ್ಯಕ್ಕಾಗಿ ಕರೆಯುವುದು.

**ಮೂಣಾಕ್ಷೀಶ:**— ಅಹುದು. ಅದಕ್ಕೆ ಇವನ ಅಡ್ಡಿ . . . .

**ಏಕಾಕ್ಷಿ:**— ಏನು ಆತಿಥ್ಯವೋ ಸ್ವಾಮಿ, ಅವರ ಕೈಯಲ್ಲಿನ ಕಾಸನ್ನೆಲ್ಲಾ ಸುಳ್ಳುಸುಳ್ಳು ಹೇಳಿ ಸೆಳೆಯುತ್ತಾನೆ ಮಗ . . . .

**ಮೂಣಾಕ್ಷೀಶ:**— ನೀನೇನು ಸಂಭಾವಿತನೇ?

**ಅಶ್ವತ್ಥ:**— (ಗುಂಡಪ್ಪನೊಂದಿಗೆ) ಸ್ವಾಮಿ, ಇನ್ನೂ ಏಕೆ ನಿಂತಿದ್ದೀರಿ? ಹೋಗುವ ನಮ್ಮ ಮನೆಗೆ. ನೀವು ವೈಷ್ಣವರೇ. . . .?

**ಗುಂಡಪ್ಪ:**— ಅಲ್ಲ, ನಾವು ಶೈವರು

**ಅಶ್ವತ್ಥ** :— ನಾನೂ ಶೈವಸೇ. ಬನ್ನಿ ಹೋಗುವ. ನಿಮಗೆ ಅವಸರ ವಿದ್ದರೆ ಎರಡು ಗಳಿಗೆಗಳಲ್ಲಿ ಕ್ಷೇತ್ರವಿಧಿಯನ್ನು ಮುಗಿಸಿ ಕಳು ಹಿಸುತ್ತೇನೆ. ಉಳಿದವರಂತೆ ನನ್ನ ಚಾಜರ್ೂ ಮಿತಿಮೀರಿ ಇಲ್ಲ. ನಿಮ್ಮ ಹೆಸರೇನು ಸ್ವಾಮಿ? ಯಾವ ಊರು ತಮ್ಮದು? ಯಾವ ಗಾಡಿಗೆ ಬಂದಿರಿ? ಮನೆಯಲ್ಲಿ ಸ್ವಲ್ಪ ತೊಂದರೆಯಿತ್ತು, ಹಾಗಾಗಿ ಸ್ಟೇಶನಿಗೆ ಬರಲು ಹೊತ್ತಾಯಿತು

**ಗುಂಡಪ್ಪ** :— ಸ್ವಾಮಿ, ನನಗೆ ಚಿಕ್ಕಣ್ಣನೂರಾಯಿತು. ನನ್ನ ಹೆಸರು ಗುಂಡಪ್ಪ ಎಂದು

**ಅಶ್ವತ್ಥ** :— ಚಿಕ್ಕಣ್ಣನೂರು ಅಲ್ಲವೇ . . . ನನಗೂ ಗೊತ್ತಾಯಿತು. ನಿಮ್ಮ ಮುಖದ ಛಾಯೆ ನನಗೆ ಹೊಸತಲ್ಲ. ನಿಮ್ಮ ತಂದೆ ಯವರ ಹೆಸರು . . . ಸುಬ್ಬಪ್ಪ ಎಂದಲ್ಲವೆ?

**ಗುಂಡಪ್ಪ** :— ಅಲ್ಲ.

**ಅಶ್ವತ್ಥ** :— ಅಜ್ಜನದೇ?

**ಗುಂಡಪ್ಪ** :— ಅಲ್ಲ.

**ಅಶ್ವತ್ಥ** :— ಅಲ್ಲ, ಆ ಹೆಸರಿನವರು ಯಾರೋ ಇರಬೇಕು.

**ಗುಂಡಪ್ಪ** :— ಅದು ನಮ್ಮ ದೊಡ್ಡಪ್ಪ.

**ಅಶ್ವತ್ಥ** :— (ತಾನು ಬರುವಾಗ ತಂದ ಉದ್ದವಾದ ಒಂದು ಪುಸ್ತಕದ ಹಾಳೆ ಗಳನ್ನು ಎಂಜಲು ಬೆರಳುಗಳಿಂದ ತಿರುವಿಹಾಕುತ್ತ) ಇಲ್ಲಿ ನೋಡಿ. ಈ ಪುಸ್ತಕ ನೋಡಿ. 'ನಾನೂ, ನಮ್ಮ ಮಕ್ಕಳೂ, ಕುಟುಂಬದವರೂ ಇಲ್ಲಿಗೇ ಬಂದೇವು'— ಎಂದು ಬರೆದುಕೊಟ್ಟದ್ದು. ಹಿರಿಯರ ವಾಕ್ಯ ಸತ್ಯವಾಯಿತು ಇಂದಿಗೆ. ಮಕ್ಕಳಾಗಿ ಹುಟ್ಟಿದ್ದಕ್ಕೆ ಋಣ ಸಂದಾಯಮಾಡಿದ ಹಾಗಾಯಿತು.

**ಗುಂಡಪ್ಪ** :— ನಮ್ಮ ದೊಡ್ಡಪ್ಪನಿಗೆ ಬರಹ ಇಲ್ಲವಲ್ಲ.

**ಅಶ್ವತ್ಥ**:— ಹೌದಪ್ಪ, ಅವರ ಜತೆಯುವರೊಬ್ಬರಿಂದ ಬರೆಸಿದ್ದು. ಹೋಗುವ; ಬಿಸಿಲಾಯಿತು. ಪೂಜೆಯ ವೇಳೆಯಾಯಿತು.

**ಗುಂಡಪ್ಪ**:— ಅವರು ಬರುವುದರೊಳಗೆ ತಪ್ಪಿದರೆ ಅದೇ ಒಂದು ಲಾಭ. ಆಯಿತು ಸ್ವಾಮಿ, ಹೋಗುವ. ನನ್ನಲ್ಲೇನು ಹಣ ಕಾಸು ಹೆಚ್ಚಿಲ್ಲ ನಾವು ಅಂದರೆ ತೀರ ಬಡವರು. ಸುಲಭದಿಂದ ಎಲ್ಲಾ ಮಾಡಿಸಿ . . .

**ಅಶ್ವತ್ಥ**:— ಅದು ನಮಗೆ ಹೇಳಬೇಕೆ? ಎಲ್ಲಾ ಚುಟುಕಿನಲ್ಲಿ ಮುಗಿಸಿ ಕಳುಹಿಸುವ. ಹೆಚ್ಚೆಂದರೆ ನೂರೈವತ್ತು ರೂಪಾಯಿ ಹಿಡಿದೀತು. ಅಷ್ಟರಲ್ಲಿ ನಿಮ್ಮ ಶ್ರಾದ್ಧ, ಮಹಾಪೂಜೆ, ಪಂಚಾಮೃತ—ಎಲ್ಲಾ ಬಂತು.

**ಗುಂಡಪ್ಪ**:— ಅಷ್ಟು ನನ್ನಲ್ಲಿ ಇಲ್ಲ ಸ್ವಾಮಿ. ನಾನು ತೀರ ಬಡವ ಎಂದೆನಲ್ಲ. ದಾರಿಖರ್ಚಿಗೇ ಹರಹರ.

**ಅಶ್ವತ್ಥ**:— ಇಲ್ಲ ಎಂದರೆ ಕೈಬಿಡುವುದೇ? ದಾರಿಖರ್ಚಿಗೆ ನಾವು ಕೊಡುತ್ತೇವೆ ಊರಿಗೆ ಹೋಗಿ ಕಳುಹಿಸಿದರಾಯಿತು.

**ಗುಂಡಪ್ಪ**:— ಆದರೂ ನೂರೈವತ್ತು ರೂಪಾಯಿಗಳೆಂದರೆ . . . .

**ಅಶ್ವತ್ಥ**:— ಅದನ್ನು ಹೇಗೂ ಹೆಚ್ಚುಕಡಿಮೆ ಮಾಡುವ ನಾವೇನು ಮನುಷ್ಯರನ್ನು ತಿನ್ನುವವರೇ?

**ಗುಂಡಪ್ಪ**:— ಅಲ್ಲ, ಯಾರೋ ಇಬ್ಬರು—ಅಗೊಳ್ಳಿ—ಅಲ್ಲೇ ನಿಂತು ಮಾತನಾಡುತ್ತಿದ್ದಾರಲ್ಲ— (ವಿಶಾಕ್ಷಿ ಮಾಣೇಶರ ಕಡೆಗೆ ತೋರಿಸಿ) ಅವರೆಂದರು: ಹೀಗೆಯೇ ಮಾಡಿ ಕಳುಹಿಸುತ್ತೇವೆಂದು

**ಅಶ್ವತ್ಥ**:— ಅದು ಬರಿ ಬಾಯಿಮಾತಲ್ಲವೆ! ಹೀಗೆಯೇ ನಾನೂ ಮಾಡುವುದಿಲ್ಲವೆ? ಆದರೆ ಕ್ಷೇತ್ರವಾಸಿಗಳ ದುಡ್ಡು ನೀವು ತಿನ್ನಲಿಕ್ಕಿಲ್ಲವೆಂದು ಅವರಿಗೆ ಗೊತ್ತು. ಅದಕ್ಕೆ ಅಷ್ಟು ಚಂದ

ಮಾತನಾಡುತ್ತಾರೆ ಬನ್ನಿ . . . . ಹೇಗೂ ಹೆಚ್ಚುಕಡಿಮೆ ಮಾಡುವ

**ಗುಂಡಪ್ಪ** :– ಒಟ್ಟಾರೆ, ಇಲ್ಲಿ ಸಾಲಮಾಡುವ ಹಾಗೆ ಮಾಡಿ ಊರಿಗೆ ಕಳುಹಿಸಬೇಡಿ ನಮ್ಮನ್ನು.

**ಅಶ್ವತ್ಥ** :— ಆಯಿತಪ್ಪ ಬನ್ನಿ. (ಅವರನ್ನು ಕರೆದೊಯ್ಯುವನು)

**ಮಾಣೇಶ** :– (ಇತ್ತ ಅವರು ಹೊರಟುದನ್ನು ಕಂಡು) ಅಯ್ಯೋ, ಅವರೆಲ್ಲಿಗೆ ಹೋದರಪ್ಪ! ಇವನನ್ನು ಹಿಡಿಯಲು ಬಂದು ಅವರೂ ಹೊರಟು ಹೋದರಲ್ಲ. ಆ ಮನುಷ್ಯನ ಹತ್ತಿರ ನೂರು ರೂಪಾಯಿಯ ಎರಡು ನೋಟುಗಳನ್ನು ಕಂಡಿದ್ದೆ. ಇಲ್ಲ . . . . . ಅಲ್ಲೇ ಹೋಗುತ್ತಿದ್ದಾರೆ . . . . ಯಾರದು ಅಶ್ವತ್ಥನೇ! ಅವನ ಕೈಗೆ ಸಿಕ್ಕಿದ ಮೇಲೆ ಬಾಯಿಗೆ ಬೂದಿಯೇ ಸರಿ. ಅವನ ಕುಲ ಹಾಳಾಗಿ ಹೋಗಲಿ

ಇಲ್ಲ, ಅವರಲ್ಲಿಗೇ ಹೋಗುತ್ತೇನೆ ಈ ಬಾವಾಜಿಯ ಹತ್ತಿರ ಒಂದು ಕಾಸೂ ಇರುವ ಹಾಗೆ ಕಾಣುವುದಿಲ್ಲ. ಇವನನ್ನು ಈ ಶುಕ್ರಾಚಾರಿಯೇ ಗಂಟುಹಾಕಿಕೊಳ್ಳಲಿ. (ಹೊರಡುವನು.)

**ಕಾಶ್ಯಪ** :— ಸ್ವಾಮಿ, ಹೋಗುತ್ತೀರಾ?

**ಮಾಣೇಶ** :—ಅಹುದು, ಮತ್ತೇನು ಮಾಡಲಿ!

**ಏಕಾಕ್ಷಿ** :—ಸ್ವಾಮಿ, ಅವನು ಹೋದರೆ ಹೋಗಲಿ. ಅವನಿಗೇನು ಗೊತ್ತಿದೆಯೆಂದು ಕರೆಯುತ್ತೀರಿ. ಘಟ್ಟ ನಾಲ್ಕು ಮಂತ್ರ ಬರುವುದಿಲ್ಲ. ನಾನಾದರೆ ಋಗ್ವೇದವನ್ನು ಎಂಟು ವರುಷ ಕುಳಿತು ಬಾಯಿಪಾಠ ಮಾಡಿದ್ದೇನೆ. ಎಂಟು ವರುಷ ಬರೇ ವೇಧ . . . . ಕೇಳುತ್ತೀರಾ . . . . (ಹೀಗೆಂದು ಅಲ್ಲೇ, ವೇದವ ಋಕ್ಕೊಂದನ್ನು ಘಟ್ಟಿಯಾಗಿ ಹೇಳತೊಡಗುವನು)

**ಕಾಶ್ಯಪ:**— ಇದೇನು, ಈ ಮನುಷ್ಯನು ತನ್ನ ಪಾಂಡಿತ್ಯವನ್ನು ತೋರಿಸಲು ನಡು ಬೀದಿಯಲ್ಲೇ ವೇದಘೋಷವನ್ನು ತೊಡಗಿದನು. ಒಕ್ಕಣ್ಣನಾದರೂ ವೇದಪಾರಂಗತನಿರಬೇಕು ಇರಲಿ ಸ್ವಾಮಿ, ತಮ್ಮ ಹೆಸರೇನು?

**ಏಕಾಕ್ಷಿ:**— ಏಕಾಕ್ಷಿ ಶಾಸ್ತ್ರಿ, ಎಂತ

**ಕಾಶ್ಯಪ:**— ತಾವು ಹೇಳಿದ ಋಕ್ಕಿನ ಅರ್ಥವನ್ನು ಹೇಳುವಿರಾ?

**ಏಕಾಕ್ಷಿ:**— ಇದೇನು ಸ್ವಾಮಿ, ಹೀಗೆನ್ನುತ್ತೀರಿ? ವೇದಕ್ಕೆ ಅರ್ಥ ಮಾಡಿದವರುಂಟೆ?

**ಕಾಶ್ಯಪ:**— ಏನು ಅದಕ್ಕೆ ಅರ್ಥವೇ ಇಲ್ಲವೆ?

**ಏಕಾಕ್ಷಿ:**— ಅರ್ಥವಿದೆ; ಮಾಡಿದವರಿಲ್ಲ

**ಕಾಶ್ಯಪ:**— ಅಂದರೆ . . . .

**ಏಕಾಕ್ಷಿ:**— ನಾನು ಅಂದದ್ದೆ

**ಕಾಶ್ಯಪ:** — ತಾವು ಯಾವ ವರ್ಣದವರು?

**ಏಕಾಕ್ಷಿ:**— ಅಂದರೆ?

**ಕಾಶ್ಯಪ:**— ಬ್ರಾಹ್ಮ, ಕ್ಷತ್ರಿಯ, ವೈಶ್ಯ ಶೂದ್ರರಲ್ಲಿ . . .

**ಏಕಾಕ್ಷಿ:**— ಹಾಗೆಂದಿರೋ, ನಾನು ಶುದ್ಧ ವೈಷ್ಣವ ಬ್ರಾಹ್ಮಣನು. ನಮ್ಮದು ಇದೇ ಶುದ್ಧಾಂಬರ ಮಠ. ನಮ್ಮ ಸ್ವಾಮಿಗಳೂ ನಾಳೆಗೆ ಬರುತ್ತಾರೆ ತಮಗೂ ಅವರ ದರ್ಶನಮಾಡಿಸುವ. ಬಹಳ ಯೋಗ್ಯರು ಸ್ವಾಮಿ, ಬಹಳ ಯೋಗ್ಯರು. ಇವತ್ತಿನ ವರೆಗೆ, ನನ್ನಂಥ ವೈದಿಕರಿಗೆ ಎಂಟು ಆಣೆಗಿಂತ ಕಡಿಮೆ ದಕ್ಷಿಣೆ ಕೊಟ್ಟವರಲ್ಲ. ಎರಡು ಮೂರು ರೂಪಾಯಿಗಳನ್ನು ಕೊಟ್ಟದ್ದೂ ಉಂಟು. ಅವರಿಗೆ ಇಂದಿನ ಅನಾಚಾರವೊಂದೂ ಕಂಡರಾಗದು. ನಾಳೆಗೆ ನಿಮಗೇ ತಿಳಿದೀತು: ಎಷ್ಟೆಲ್ಲ ಜನರನ್ನು ಜಾತಿಯಿಂದ

ಹೊರಕ್ಕೆ ಇರಿಸುತ್ತಾರೆಂದು. ಅಲ್ಲದಿದ್ದರೆ ಏನಿದು? ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿ, ಎಲ್ಲೆಲ್ಲಿ ಉಣ್ಣುವುದು, ಎಲ್ಲೆಲ್ಲಿ ತಿನ್ನುವುದು, ಯಾರನ್ನೆಲ್ಲ ಮುಟ್ಟುವುದು! ಮೊನ್ನೆ ಒಬ್ಬ ಸ್ವಾಮಿ, ಹೊಲೆಯರ ಮಕ್ಕಳನ್ನು ಹಾದುಕೊಂಡೇ ಹೋದನು . . . . . ಇವನ ಜಾತಿಯಾವುದು? ಅವರ ಜಾತಿಯಾವುದು?

**ಕಾಶ್ಯಪ:**— ಅಂದರೆ ಅವನು ಮನುಷ್ಯಜಾತಿಯವನಲ್ಲವೇ?

**ಏಕಾಕ್ಷಿ:**— ಏನಿದು, ನೀವೂ ಹೀಗೆ ಮಾತನಾಡುತ್ತೀರಿ? ತಿಳಿಯಿತು. ನೀವು ಆರ್ಯಸಮಾಜದವರೆಂದು ಕಾಣುತ್ತದೆ ನಿಮಗೇನು? ಎಲ್ಲಾ ಜಾತಿಯವರನ್ನು ಒಂದುಗೂಡಿಸಲು ಬಂದವರು ನೀವು!

**ಕಾಶ್ಯಪ:**— ನೀವನ್ನುವುದೇ ನನಗೆ ತಿಳಿಯುವುದಿಲ್ಲ.

**ಏಕಾಕ್ಷಿ:**— ತಿಳಿಯದಿದ್ದರೆ ಅಷ್ಟೇ ಹೋಯಿತು. ನಿಮ್ಮಂಥವರಿಂದಲೇ ಈಗೀಗ ಸಿಗುವ ದಕ್ಷಿಣೆ ಕಡಿಮೆಯಾಗುತ್ತ ಬಂದಿದೆ ನಿಮಗೆ ಕ್ಷೇತ್ರ ಬೇಡ; ತೀರ್ಥ ಬೇಡ; ಮನೆ ಬೇಡ; ಮಠ ಬೇಡ . . . ಖಂಡಿತಕ್ಕೂ ನೀವು ಹಿಂದೂ ಜಾತಿ ಕೆಡಿಸಲು ಬಂದ ಕಿರಿಸ್ತಾನರು. ಎದುರಿಗೆ ಮಾತ್ರ ಹಿಂದುಗಳ ಸೋಗು ಪ್ರಿಂಟು ಮಾಡಿದ ವೇದವನ್ನು ಶೂದ್ರರಿಗೆ ಓದಲಿಕ್ಕೆ ಕೊಟ್ಟಾಯಿತು; ಹೊಲೆಯರಿಗೆ ಯಜ್ಞೋಪವೀತ ಹಾಕಿಸಿಯಾಯಿತು. ಎಲ್ಲಾ ಆಯಿತು; ಇನ್ನು ಹೆಣ್ಣನ್ನು ಗಂಡು ಮಾಡುವುದೊಂದೇ ಉಳಿದಿದೆ. ಕೈಯ್ಯಲ್ಲಾಗಿದ್ದರೆ ಅದನ್ನೂ ಮಾಡುತ್ತಿದ್ದಿರಿ! 'ಸ್ವಾಮಿ ದಯಾನಂದರು ಅಂದಿದ್ದಾರೆ' ಎಂದರಾಯಿತಲ್ಲ.

**ಕಾಶ್ಯಪ:**— ಸ್ವಾಮಿ, ಸ್ವಲ್ಪ ತಿಳಿಯುವ ಹಾಗೆ ಮಾತನಾಡಿರಿ. ಆರ್ಯಸಮಾಜದವರಂತೆ— ದಯಾನಂದರಂತೆ—ಶೂದ್ರರಂತೆ—

ವೇದಗಳಂತೆ. ಒಂದೂ ನನಗೆ ತಿಳಿಯದು. ನಾನು ಈ ಕ್ಷೇತ್ರ ವನ್ನು ನೋಡಲು ಬಂದವನು.

**ಏಕಾಕ್ಷಿ:**— ನೀವು ಯಾವ ಜಾತಿಯವರು?

**ಕಾಶ್ಯಪ:**— ಮನುಷ್ಯ.

**ಏಕಾಕ್ಷಿ:**— ಅದೇ, ತೆಗೆದ ಬಾಯಿಗೆ ಉರುಟ ಮಾತೇ!

**ಕಾಶ್ಯಪ:**— ಅಂದರೆ?

**ಏಕಾಕ್ಷಿ:**— ತಲೆಬುರುಡೆ ನಿಮ್ಮ ಕುಲಗೋತ್ರ ಯಾವುದೆಂದರೆ..

**ಕಾಶ್ಯಪ:**— ಕುಲಗೋತ್ರವೇ! ನಾನು ಆರ್ಯಕುಲದವನು ಅನಾರ್ಯನಲ್ಲ ನೀವಾರು? ದ್ರಾವಿಡರಾಗಿ ಕಾಣಿಸುವಿರಿ?

**ಏಕಾಕ್ಷಿ:**— ಆರ್ಯಕುಲವೇ? ಆರ್ಯಸಮಾಜವೇ. ಇತ್ತ ನನ್ನನ್ನು ದ್ರಾವಿಡನೆನ್ನುವನು ಅದೂ ಸರಿಯೆ. ತಿರುಗಿ ಕೇಳುವೆನು: ಇರಲಿ, ನಿಮ್ಮದು ಆರ್ಯಕುಲವೆಂದು ಒಪ್ಪುವ. ಗೋತ್ರವಾವುದು? ಸೂತ್ರವಾವುದು?

**ಕಾಶ್ಯಪ:**— ಗೋತ್ರವೆಂದರೆ? ಸೂತ್ರವೆಂದರೆ?

**ಏಕಾಕ್ಷಿ:**— ನಾನೀಗ ಕಾಶ್ಯಪನ ಗೋತ್ರದವನು. ಅಂದರೆ ನನ್ನ ಕುಲಪಿತಾಮಹನು ಕಾಶ್ಯಪ ಋಷಿಯು.

**ಕಾಶ್ಯಪ:**— ನಾನೇ? ನೀವು ನನ್ನ ಕುಲದವರೇ? ನಾನು ಬ್ರಹ್ಮನ ಕುಲದವನು.

**ಏಕಾಕ್ಷಿ:**— ಏನು ತಲೆತುಂಬ ಮಾತನಾಡುತ್ತೀರಿ. ನನ್ನ ಮುತ್ತಜ್ಜನು ನೀವು—ಎನ್ನುತ್ತೀರಾ? ನಿಮ್ಮದು ಬ್ರಹ್ಮನ ಕುಲವಂತೆ! ಎಲ್ಲರೂ ಬ್ರಹ್ಮನ ಮಕ್ಕಳೇ.

**ಕಾಶ್ಯಪ:**— ಸರಿಯಾಯಿತು. ಹಾಗೆಯೇ ನಾನು. ತಾವು ಅಷ್ಟಕ್ಕೇ ಸಿಟ್ಟಾದರೆ?

**ವಿಶಾಕ್ಷಿ**:–(ಆ) ಇವನ ವಿನಯವನ್ನು ಕಂಡರೆ ಮಾತನಾಡಲು ಮನಸ್ಸಾಗುವುದು. ಅಸಂಬದ್ಧ ಪ್ರಲಾಪವನ್ನು ಕೇಳಿದರೆ ಎಲ್ಲಿಲ್ಲದ ಸಿಟ್ಟು ಬರುವುದು ಇರಲಿ, ಇನ್ನೂ ಪರೀಕ್ಷೆಮಾಡುವ. (ಪ್ರ) ಸ್ವಾಮಿ ನೀವು ಭಸ್ಮದವರೇ ಮುದ್ರೆಯವರೇ?– ಎಂದು ಕೇಳಿದೆ.

**ಕಾಶ್ಯಪ**:– ಭಸ್ಮವೆ? ಸತ್ತಬಳಿಕ ಎಲ್ಲರೂ ಭಸ್ಮವೆ.

**ವಿಶಾಕ್ಷಿ**:– ಸ್ವಾಮಿ, ಏನು ಮಾತಿದು? ಸಿಟ್ಟಾಗಬಾರದೆನ್ನುವವರೂ ನೀವೆ, ಸಿಟ್ಟಾಗುವಂತೆ ಮಾಡುವವರೂ ನೀವೆ

**ಕಾಶ್ಯಪ**:— ನಾನೇನು ನಿಮ್ಮನ್ನು ಸಿಟ್ಟುಗೊಳಿಸುತ್ತಲಿಲ್ಲ. ಪ್ರಾಯಶಃ ನನ್ನ ಮಾತಿನ ಅರ್ಥವು ನಿಮಗಾಗದೆ . . . .

**ವಿಶಾಕ್ಷಿ**:–(ಆ) ಹಾಗೂ ಇದ್ದೀತೇ? ಇವನಾವ ಊರಿನವನು? ಇವರಲ್ಲಿ ಗೋಪಿ, ಭಸ್ಮಗಳ ರೂಢಿಯೇ ಇದ್ದಿರಲಿಕ್ಕಿಲ್ಲವೆ? (ಪ್ರ) ಸ್ವಾಮಿ, ನೀವು ಸಿಟ್ಟಾಗಬಾರದು. ನೀವು ಯಾವ ಊರಿನವರು? ಎಲ್ಲಿಂದ ಬಂದಿರಿ? ಏಕೆ ಬಂದಿರಿ? ನನ್ನಿಂದ ನಿಮಗೇನಾಗಬೇಕು? ಅನಾಥಸ್ವಾಮಿಯ ದರುಶನವಾಗಬೇಕಾದರೆ ಹೇಳಿರಿ. ಅದನ್ನು ನೀವು ಮಾಡುವವರಲ್ಲವಾದರೆ ನಾನು ಸುಮ್ಮನೆ ನಿಮ್ಮ ಬಳಿಯಲ್ಲಿ ಸಮಯವನ್ನು ಕಳೆಯಲಾರೆ.

**ಕಾಶ್ಯಪ**:— ನನ್ನೂರು ಯಾವುದೆನ್ನಲಿ? ನಾನು ಸರ್ವಸಂಗ ಪರಿತ್ಯಾಗಿಯು. ಮೂರು ಲೋಕವೇ ನನ್ನದು. ನಾನಿಲ್ಲಿಗೆ ಬಂದುದು ಅನಾಥಬಂಧುವನ್ನು ಕಾಣಲು. ಆ ಮೂರ್ತಿಯನ್ನು ಕೆತ್ತಿ ಸ್ಥಾಪಿಸಿದವನು ನಾನು. ಅದನ್ನು ಕಾಣಲು ಬಂದಿರುವೆ. ಆ ವಿಗ್ರಹವನ್ನು ನಾನು ಬಿಟ್ಟುಹೋಗಿ ಎಷ್ಟೋ ಕಾಲವಾಯಿತು. ನಾನು ಇಲ್ಲಿದ್ದಾಗ ಈ ಗುಡಿಗೋಪುರಗಳಾಗಲಿ, ಬೀದಿಸಂದಣಿಗಳಾಗಲಿ ಇದ್ದಿರಲಿಲ್ಲ. ಈಗ ಎಲ್ಲವೂ ನವೀನವಾಗಿ ಕಾಣಿಸುವುವು.

2

ಅದರಿಂದ ನನ್ನ ವಿಗ್ರಹವೆಲ್ಲಿದೆಯೆಂದು ನನಗೇ ತಿಳಿಯು ದಾಗಿದೆ.

**ಏಕಾಕ್ಷಿ**:—ಸ್ವಾಮಿ, ಅನಾಥಸ್ವಾಮಿಯ ಗುಡಿ ಇದೇ ಬನ್ನಿ ಹೋಗುವ. ಪತಿತಪಾವನಿಯಲ್ಲಿ ಸ್ನಾನಮಾಡಿ ಪಾಪವನ್ನು ತೊಳೆದುಕೊಂಡು ಬನ್ನಿರಿ. ಗುಡಿಯೊಳಕ್ಕೆ ಕಾಲಿರಿಸುವ ಮೊದಲು ನಿಮ್ಮ ಪಾಪ ಸರ್ವಸ್ವ ಧ್ವಂಸವಾಗಬೇಕು. ಬನ್ನಿ ಹೋಗುವ . . . . ಹೂಂ . . . . ಒಂದೂಕಾಲು ರೂಪಾಯಿ ಯನ್ನು ತೆಗೆಯಿರಿ. ಸಂಕಲ್ಪಗಿಂಕಲ್ಪ ಆಗಬೇಕಷ್ಟೆ.

**ಕಾಶ್ಯಪ**:—ಸ್ವಾಮಿ, ಅವಸರವೇನು ಮಾಡುತ್ತೀರಿ? "ಅನಾಥ ಬಂಧುವಿನ ಗುಡಿ ಇದೆಯೇ?" ಎಂದು ಕೇಳಿದರೆ "ಅನಾಥ ಸ್ವಾಮಿ ಗುಡಿ ಇದು" ಎನ್ನುತ್ತೀರಿ. "ಸ್ನಾನಮಾಡಿರಿ" ಎನ್ನು ತ್ತೀರಿ. "ಸ್ನಾನದಿಂದ ಪಾಪವೇ ನಾಶವಾಗುವುದು" ಎನ್ನುತ್ತೀರಿ. "ರೂಪಾಯಿ" ಎನ್ನುತ್ತೀರಿ. ಒಂದೂ ತಿಳಿಯುವುದಿಲ್ಲವಲ್ಲ.

**ಏಕಾಕ್ಷಿ**:—ಇಲ್ಲಿರುವುದು ಅನಾಥ ಸ್ವಾಮಿಯ ಗುಡಿಯೊಂದೇ. ಶೈವರು ಮಾತ್ರ ಅಸೂಯೆಗೆ ಅದನ್ನೇ ಅನಾಥೇಶ್ವರನ ಗುಡಿ ಎನ್ನುತ್ತಾರೆ.

**ಕಾಶ್ಯಪ**:—ಅನಾಥಬಂಧುವಿನ ಗುಡಿ?

**ಏಕಾಕ್ಷಿ**:—ಅದೇ ಅಲ್ಲವೆ ನಾನೆಂದದ್ದು.

**ಕಾಶ್ಯಪ**:—ಸ್ವಾಮಿ, 'ಈಶ್ವರ'ನಿಗೂ, 'ಬಂಧು'ವಿಗೂ ವ್ಯತ್ಯಾಸ ವಿಲ್ಲವೆ! ನಾನು ಈಶ್ವರನೆಂದು ಶರಣುಹೋಗಿ ಆ ವಿಗ್ರಹವನ್ನು ಕೆತ್ತಲಿಲ್ಲ. ಭಗವಂತನು ನನ್ನ ಬಂಧುವೆಂದು ತಿಳಿದು ವಿಗ್ರಹವನ್ನು ಕೆತ್ತಿದೆ

**ಏಕಾಕ್ಷಿ**:—ಏನು, ವಿಗ್ರಹವನ್ನು ಕೆತ್ತಿದವರು ನೀವೇ?

**ಕಾಶ್ಯಪ:**— ಅನಾಥಬಂಧು ವಿಗ್ರಹವು ನನ್ನ ಕನಸು.

**ಏಕಾಕ್ಷಿ:**— ಛೀ, ನಾನೆಂಥ ಮರುಳ! ಇವನು ಅದನ್ನು ಕನಸಿನಲ್ಲಿ ಕೆತ್ತಿದನಂತೆ. ಇವನೆಲ್ಲಿಯೋ ಒಬ್ಬ ಹುಚ್ಚನಿರಬೇಕು. ಅದಕ್ಕಾಗಿಯೇ ಅವನ ಮಾತಿಗೆ ತುದಿಮೊದಲಾಗುವುದಿಲ್ಲ. ಹಾಳಾಗಿ ಹೋಗಲಿ . . . . (ಎಂದು ಸಿಟ್ಟಾಗಿ ಹೊರಡುವನು)

**ಕಾಶ್ಯಪ:**— ಸ್ವಾಮಿ, ಇದು ಅನಾಧಬಂಧುವಿನ ಗುಡಿಯಲ್ಲವೆ!

**ಏಕಾಕ್ಷಿ:**— (ಆ) ಇವನು ದಕಿಣೆಯನ್ನು ಕೊಡುವುದಾದರೆ ಇದೇ ಅನಾಥಬಂಧುವಿನ ಗುಡಿಯೆಂದು ಕರೆದುಕೊಂಡು ಹೋದರಾಯಿತು. (ಪ್ರ) ಹೌದು ಸ್ವಾಮಿ, ಇದೇ ನೀವು ಕನಸಿನಲ್ಲಿ ಕೆತ್ತಿದ ಗುಡಿ. ಬನ್ನಿ ಸ್ನಾನಮಾಡಿರಿ. ಪೂಜೆಯ ಕಾಲ ಸರಿಯುತ್ತಿದೆ. ದಕ್ಷಿಣೆ ತೆಗಿಯಿರಿ. ಒಂದೂಕಾಲು ರೂಪಾಯಿ ಮಾತ್ರ. ತೀರ್ಥ ದಕ್ಷಿಣೆ. ಹೂಂ, ತ್ವರೆಮಾಡಿ ಬಳಿಕ ದೇವಾಲಯದ ಕದಮುಚ್ಚುತ್ತಾರೆ. ಇವತ್ತಿಗೆ ದರುಶನವಾಗಲಿಕ್ಕಿಲ್ಲ.

**ಕಾಶ್ಯಪ:**— ದಕ್ಷಿಣೆಯೇ? ನಾನೆಲ್ಲಿಂದ ಕೊಡುವುದು? ನಾನೂ ಬ್ರಾಹ್ಮಣನು.

**ಏಕಾಕ್ಷಿ:**— ಬ್ರಾಹ್ಮಣನಾದರೆ ತೀರ್ಥದಕ್ಷಿಣೆ ಕೊಡುವುದು ಬೇಡವೇ?

**ಕಾಶ್ಯಪ:**— ನೀವು ಕೊಡುತ್ತೀರೇನು? ನನ್ನಲ್ಲಿ ಕಾಂಚನವೆಲ್ಲಿ?

**ಏಕಾಕ್ಷಿ:**— ನಾನು ಕೊಡಬೇಕೇನು? ಇದು ನಮ್ಮ ಗುಡಿಯಲ್ಲವೆ? ಇಲ್ಲಿನ ಪಂಡರು ನಾವಲ್ಲವೇ? ನಮಗೆ ದಕ್ಷಿಣೆಯನ್ನು ಕೊಡದೆ ಯಾವ ಮಗನೂ ಹೊಸ್ತಿಲು ದಾಟಲಿಕ್ಕೆ ಸಾಧ್ಯವಿಲ್ಲ.

**ಕಾಶ್ಯಪ:**— ಏನು! ದೇವರ ಗುಡಿಗೆ, ಅದೂ, ನನ್ನ ಅನಾಥಬಂಧುವಿನ ಗುಡಿಗೆ ನಿಮ್ಮ ಪಹರೆಯೇ? ಎಂಥ ಅವಿಚಾರವಿದು!

2*

**ಏಕಾಕ್ಷಿ:**— ಏನು, ನಮಗೆ ಬುದ್ಧಿ ಹೇಳುವಿರಾ? ನೀವು ಆರ್ಯ ಸಮಾಜದವರೇ ನಿಜ. ಹಾಳಾಗಿಹೋಗಲಿ ನಿಮ್ಮ ಕುಲ

(ಸಿಟ್ಟಾಗಿ ತೆರಳುವನು.)

**ಕಾಶ್ಯಪ:**— ಏನಿದು! ನನ್ನ ದೇವರ ಗುಡಿಗೆ ಪಹರೆಯೆ? ಅದೂ ಬ್ರಾಹ್ಮಣರ ಪಹರೆಯೇ? ದೇವರ ದರ್ಶನವನ್ನು ಇತರರಿಗೆ ಸಿಗ ದಂತೆ ಕಾದಿರುವ ಇವರು ಬ್ರಾಹ್ಮಣರೇ? ಗುಡಿಯ ಬಾಗಿಲಿನಲ್ಲಿ ಸುಂಕ ಸುಲಿಯಲು ಕುಳಿತ ಇವರು ಬ್ರಾಹ್ಮಣರೆ? ಏನಿದು? ನಾನು ಮರಳಿ ಬರುವುದರಲ್ಲಿ ಎಷ್ಟೆಲ್ಲ ಅನರ್ಥವಾಯಿತು! ನನ್ನ ಇಷ್ಟದೇವನ ಮೂರ್ತಿಯನ್ನು ಶ್ರದ್ಧೆಯಿಂದ ರಚಿಸಿ, ಸ್ಥಾಪಿಸಿ ಹೋದರೆ, ಈಗ ಅದೆಲ್ಲಿರುವುದೆಂದೇ ತಿಳಿಯದಂತೆ ಮಾಡಿ, ಗುಡಿಯ ಮುಂದೆ ಸುಂಕದ ಕಟ್ಟೆಯನ್ನಿಟ್ಟಿರುವರೇ?

ನಾನು ಹೊರಡುವಾಗ ಈ ಸ್ಥಳವು ಹೀಗಿದ್ದಿರಲಿಲ್ಲ. ಈ ನದೀತಟವು ಹೀಗಿರಲಿಲ್ಲ ಗುಡಿಯ ಮುಂದೆ ಈ ಸಂಸಾರದ ಬೀದಿಯೂ ಇದ್ದಿರಲಿಲ್ಲ.

ಅವನೇನೆಂದನು! ತಾನು ಕಾಶ್ಯಪನ ಕುಲದವನೆಂದೆ? ಅದೂ ವಂಚನೆಯಿರಬಹುದೇ? ನನ್ನ ಕುಲದವರೇ ನನ್ನನ್ನು ವಂಚಿಸತೊಡ ಗಿದರೇನು? ನನ್ನ ಗುಡಿಯನ್ನು ನನಗೆ ಇಲ್ಲದಂತೆ ಮಾಡಿರುವರೇ!

ಇಲ್ಲ, ಈ ಮಂದಿರವೇ ನನ್ನ ಇಷ್ಟನ ಮಂದಿರವಾಗಿರ ಲಾರದು. ಅವನೇನೆಂದನು? ಅನಾಥ ಸ್ವಾಮಿಯೆಂದೆ? ಅನಾ ಥೇಶ್ವರನೆಂದೇ? ವೈಷ್ಣವರೆಂದೇ? ಶೈವರೆಂದೆ? ಏನು ವೈಷ್ಣವ ರಿವರು? ಏನು ಶೈವರು? ಹರಿಹರರಿಗೆ ಇವರಿಂದಾಗಿ ಜಗಳ ವಾಯಿತೇನು? ಭಗವಂತನ ಪಾಲಕನಾಶಕ ಸ್ವರೂಪಗಳನ್ನು ತಿಳಿಯಲಾರದ ಆ ಮನುಷ್ಯನು ಬ್ರಾಹ್ಮಣನೇ?

ಅವನೇನೆಂದನು? ಸ್ನಾನಮಾಡಿ ನನ್ನ ಪಾಪವನ್ನು ತೊಳೆದು ಕೊಂಡು ಬರಬೇಕೆಂದೇ? ನನ್ನ ಪಾಪವೇ! ದೇವಾ, ನನಗೆಲ್ಲಿಯ ಪಾಪ? ನನಗೆಲ್ಲಿಯ ಪುಣ್ಯ? ನನ್ನ ಕರ್ಮ ಫಲವನ್ನು ನಿನ್ನ ಅಡಿದಾವರೆಗಳಿಗರ್ಪಿಸಿರುವಾಗ ಪಾಪಪುಣ್ಯವೆಲ್ಲಿಂದ ಬಂತು? ಒಮ್ಮೆ ಅದಿದ್ದರೂ ನದಿಯ ಸ್ನಾನದಿಂದ ನಾನು ಪಾಪವಿರಹಿತ ನಾಗುವೆನೆ? ಪಾಪವೆಂಬುದು ಮೈಗೆ ಅಂಟದ ಕೊಳೆಯೆ? ಮನಸ್ಸಿಗೆ ಅಂಟದ ಮಾಲಿನ್ಯವೆ? ಸುಳ್ಳು ಸುಳ್ಳು—ದೊಡ್ಡ ವಂಚನೆ ದಕ್ಷಿಣೆಯ ಆಸೆಗಾಗಿ ಜಗತ್ತನ್ನೇ ವಂಚಿಸುತ್ತಿರು ವರು ಈ ಜನರು. ದೇವರಿಗಾಗಿ ಸ್ನಾನ—ಸ್ನಾನಕ್ಕಾಗಿ ದಕ್ಷಿಣೆ- ದಕ್ಷಿಣೆಗಾಗಿ ತಾನು! ಅಲ್ಲಲ್ಲ. ತನಗಾಗಿ ದಕ್ಷಿಣೆ; ದಕ್ಷಿಣೆ ಗಾಗಿ ಸ್ನಾನ; ಸ್ನಾನಕ್ಕಾಗಿ ದೇವರು. ಎಂಥ ವಿಪರ್ಯಾಸ! ಇಲ್ಲ ಇದರ ನಿಶ್ಚಯವಾಗಲೇ ಬೇಕು

(ಹೀಗೆಂದು ಆವೇಶಭರಿತನಾಗಿ ಗುಡಿಯ ಪ್ರವೇಶಕ್ಕೆಂದು ತೆರಳುವನು. ಆ ಬಳಿಕ ಗುಂಡಪ್ಪನು ತಾಯಿ ಮಗನೊಂದಿಗೆ ದುಃಖಿತನಾಗಿ ಬರು ವನು.)

**ಗುಂಡಪ್ಪ:**—ಅಯ್ಯೋ ದೇವರೇ! ಇಂಥ ಪುಣ್ಯಕ್ಷೇತ್ರಕ್ಕೆ ಬಂದು ನನ್ನ ಅವಸ್ಥೆ ಹೀಗಾಗಬೇಕೆ? ಅನಾಥಸ್ವಾಮಿ, ನಿನ್ನನ್ನು ನಂಬಿ ಬಂದೆನು ದೊರೆಯೇ. ಕೊನೆಗೆ ನಿನ್ನ ದರುಶನ ಸಹ ಆಗದೆ ಹೋಯಿತು. ಇಲ್ಲಿಯ ತನಕ ಬಂದು ನಿನ್ನನ್ನು ಕಾಣದೆ ಹೋಗುವುದೇ? ನಿನ್ನ ದರುಶನಕ್ಕೆ ಇನ್ನೂ ಹತ್ತು ರೂಪಾಯಿ ಗಳು ಬೇಕಂತೆ! ಹತ್ತು ರೂಪಾಯಿಗಳ ಬದಲು ಹತ್ತು ಕಾಸಿಲ್ಲ. ಎಲ್ಲವನ್ನೂ ಸುಲಿದರು; ಉಬ್ಬಿಸಿ, ಅಂಜಿಸಿ, ವಂಚಿಸಿ ಸುಲಿ ದರು. ನದಿಯಲ್ಲಿ ಮುಣುಗಿಸಿ, ಪಿತೃಶ್ರಾದ್ಧವೆಂದು ರಕಾಯಿಸಿ,

ಒಂದೆರಡು ಗಿಡಮರಗಳನ್ನು ಸುತ್ತಿಸಿ, ಇನ್ನೂರು ರೂಪಾಯಿ ಗಳನ್ನು ಸುಲಿದರು. ಇನ್ನು ಊರಿಗೆ ಬೇಡುತ್ತ ಹಿಂದಿರುಗಿದ ರಾಯಿತು.

**ತಾಯಿ:**— ಗುಂಡು, ಯಾಕೆ ಅಳುತ್ತೀ? ಅವನ ಸ್ಥಳಕ್ಕೆ ಬಂದು ಇಷ್ಟು ಕಣ್ಣೀರು ಅವನೇ ತರಿಸಿದಮೇಲೆ ಮತ್ತಾರು ನಮಗೆ ಗತಿ?

**ಗುಂಡಪ್ಪ:**— ಸುಮ್ಮನಿರು ಅಮ್ಮ. ಆಗ ಹಾಗೆ ಹೇಳಿದೆ; ಈಗ ಹೀಗೆ ಹೇಳುತ್ತೀ ಅವರು ಕೇಳಿದಷ್ಟು ಕೊಡು - ಎಂದವಳೂ ನೀನೆ . . . . .

**ತಾಯಿ:**— ಹೌದು, ಕ್ಷೇತ್ರವಾಸಿಗಳ ಮನಸ್ಸನ್ನು ಸಂತೋಷಗೊಳಿಸ ದಿದ್ದರೆ ಪಿತೃಗಳಿಗೆ ಮುಕ್ತಿ ಸಿಗಬೇಕಲ್ಲ.

**ಗುಂಡಪ್ಪ:**— ಹಾಳಾಯಿತು ಮುಕ್ತಿ ಮುಕ್ತಿ! ಮುಕ್ತಿದ್ವಾರದ ಬೀಗದ ಕೈ ಈ ಕರ್ಮಚಾಂಡಾಲರ ಕೈಯ್ಯಲ್ಲಿದೆಯೆ? ಇವರಿದ್ದ ಊರಲ್ಲಿ ದೇವರಿರಲಿಕ್ಕಿಲ್ಲ.

**ತಾಯಿ:**— ಅಯ್ಯೋ ಹುಚ್ಚ. ಏನೇನೆಲ್ಲ ಬೊಗಳುತ್ತೀಯೆ? ಬ್ರಾಹ್ಮ ಣರಿಗೆ ಹಾಗೆಲ್ಲ ಬೈಯ್ಯಬೇಡ. ನಿನ್ನ ಕುಲ ಹಾಳಾದೀತು. ಅವರೆಂಥವರೇ ಇರಲಿ. ಕ್ಷೇತ್ರದಲ್ಲಿರುವವರು. ನಿತ್ಯ ಮೂರು ಹೊತ್ತು ಪತಿತಪಾವನೆಯಲ್ಲಿ ಸ್ನಾನಮಾಡುವುದಿಲ್ಲವೆ? ಇನ್ನೇ ನಾಗಬೇಕು ಅವರಿಗೆ?

**ಗುಂಡಪ್ಪ:**— ಹಾಗಿದ್ದರೆ ಹೀಗೆ ಸುಲಿಗೆ ಮಾಡುವುದು ಯಾವು ದಕ್ಕೆ? ಆ ಒಕ್ಕಣ್ಣಿನವನು ಕಾಣುತ್ತ ಇದ್ದಂತೆ ನನ್ನ ಕಿಸೆ ಯಿಂದ ಒಂದು ನೋಟನ್ನು ಜಾರಿಸಿದನಲ್ಲ; ಏನು ಮಾಡುವು ದೀಗ?

**ತಾಯಿ:**— ನಮ್ಮ ಅದೃಷ್ಟ.

**ಗುಂಡಪ್ಪ**:— ಅದೃಷ್ಟ ಮಣ್ಣು ತಿಂದು ಹೋಯಿತು. ಈಗ ಊರಿಗೆ ಹೋಗುವುದು ಹೇಗೆ ಹೇಳಮ್ಮ? ಒಂದೇ ಒಂದು ಬಿಡುಗಾಸಿಲ್ಲ. ಒಂದೇ ಒಂದು ಹಿಡಿ ಅಕ್ಕಿಗೆ ಗತಿಯಿಲ್ಲ.

**ತಾಯಿ**:—ಅಯ್ಯಯ್ಯೋ, ಅಷ್ಟು ಹೇಗಾಯಿತಪ್ಪಾ? ಹಾಗಾದರೆ ಇನ್ನೇನು ಗತಿ? ಬಂದವರು ದೇವರನ್ನು ಕಂಡು ಹೋಗುವ ಎಂದರೆ ಅದೂ ಇಲ್ಲ, ಇತ್ತ ಊಟಕ್ಕೂ ಇಲ್ಲ ಎಂದರೆ . . . . ?

**ಗುಂಡಪ್ಪ**:— ದೇವರಿಲ್ಲಮ್ಮ, ದೇವರಿಲ್ಲ. ಈ ಜನರಿರುವಲ್ಲಿ ದೇವರಿಲ್ಲ.

(ಕಾಶ್ಯಪನು ಬರುವನು.)

**ಕಾಶ್ಯಪ**:— ನಿಶ್ಚಯಕ್ಕೂ ದೇವರಿಲ್ಲ. ಯಾರದು? 'ದೇವರಿಲ್ಲ' ಎಂದವರು, ನೀವೆ? ಆಗ ಇಲ್ಲಿ ನಿಂತಿದ್ದವರು ನೀವೇ ಅಲ್ಲವೆ? ಯಾತ್ರಿಕರಾಗಿ ಬಂದಿದ್ದಿರಾ? ಏಕೆ ಬಂದಿರಿ? ಅನಾಥಬಂಧು ವಿನ ದರ್ಶನಕ್ಕೆ ಬಂದಿರಾ? ಅಯ್ಯೋ, ನಿಮಗೇನು ಮರುಳು! ಇಲ್ಲಿ ಅನಾಥಬಂಧುವು ಇಲ್ಲ; ಅವರು ಹೇಳಿದ ಅನಾಥಸ್ವಾಮಿ ಯೂ ಇಲ್ಲ. ಇಲ್ಲಿರುವುದು ಸುವರ್ಣೇಶ್ವರ, ಸುವರ್ಣಸ್ವಾಮಿ!

**ಗುಂಡಪ್ಪ**:— ನೀವು ಗುಡಿಯೊಳಕ್ಕೆ ಹೋಗಿ ಬಂದಿರಾ?

**ಕಾಶ್ಯಪ**:— ಗುಡಿಯೊಳಕ್ಕೇ? ಅಹುದು, ಹೋಗಿ ಬಂದೆ. ಅಲ್ಲೇ ನುಂಟೆಂದು ತಿಳಿದಿರಿ? ಕೆಲವು ಜನ ಸುಂಕದ ಸಿಪಾಯಿಗಳಿದ್ದಾರೆ. ನಿಂತರೆ ಸುಂಕ ಕೇಳುತ್ತಾರೆ; ಕುಳಿತರೆ ಸುಂಕ ಕೇಳುತ್ತಾರೆ.

ಭ್ರಾಂತರು! ಭ್ರಾಂತರು! ಅವರಾದರೂ ಏನು ಮಾಡು ವರು? ದೀಪ ಉರಿಸುತ್ತಾರೆ; ಆರತಿ ಬೆಳಗುತ್ತಾರೆ; ಘಂಟೆ ಬಾರಿಸುತ್ತಾರೆ. ಏತಕ್ಕೆ? ತಮ್ಮ ಕಣ್ಣು ತಮಗೇ ಕಾಣಿಸ ಬಾರದೆಂದು, ತಮ್ಮ ಕಿವಿಯು ತಮಗೇ ಕೇಳಿಸಬಾರದೆಂದು. ವಂಚನೆ, ಎಲ್ಲಾ ವಂಚನೆ.

ನನ್ನ ಅನಾಥಬಂಧುವಿನ ವಿಗ್ರಹ ಅಲ್ಲಿ ಇಲ್ಲ. ನಾನು ಕೆತ್ತಿದ ಗೊಂಬೆ, ನನ್ನ ಹೃದಯದ ಗೊಂಬೆ, ಅಲ್ಲಿಲ್ಲ. ಅಲ್ಲಿ ಅನಾಥರಿಗೆ ಗತಿಯಿಲ್ಲ. ಅದು ಕುಬೇರರ ಸಂತೆ. ಅಲ್ಲಿ ದೇವರಿಲ್ಲ.

**ಗುಂಡಪ್ಪ**:— ಏನು ದೇವರೇ ಇಲ್ಲವೆ?

**ಕಾಶ್ಯಪ**: – ದೇವರಿಲ್ಲ, ಅಲ್ಲಿರುವುದು ಒಂದು ಚಿನ್ನದ ಗೊಂಬೆ. ಅದಕ್ಕೆ ಮುತ್ತಿನಹಾರ, ವಜ್ರದಕಿರೀಟ, ಪಚ್ಚೆಯ ಕಣ್ಣುಗಳು. ಅಲ್ಲಿರುವುದು ನವರತ್ನದ ರಾಶಿ. ಅದು ಚಿನಿವಾರನ ಗೊಂಬೆ ಅವರು ಪೂಜೆಮಾಡುವುದು ದೇವರನ್ನಲ್ಲ; ವಿಗ್ರಹವನ್ನಲ್ಲ; ಮನಸ್ಸಿಗೆ ತಂಪೀವ ಪ್ರತಿಮೆಯನ್ನಲ್ಲ. ಅದು, ಹೊಟ್ಟೆಗಿಲ್ಲದ ದರಿದ್ರರನ್ನು ಮತ್ತಷ್ಟು ಕೊರಗಿಸುವ ಚಿನ್ನದ ಗೊಂಬೆಯನ್ನು. ಬಡವರನ್ನು ಮುಣುಗಿಸಿ, ಅವರ ಉಸಿರನ್ನು ಕಟ್ಟಿ, ಮುತ್ತು ರತ್ನ ಕೂಡಿಸಿ ಮಾಡಿಟ್ಟ ಮಾಟದ ಗೊಂಬೆಯನ್ನು. ಮಾಟದ ಗೊಂಬೆ! ನಿಶ್ಚಯಕ್ಕೂ ಮಾಟದ ಗೊಂಬೆ!

ಬೇಡ, ಹೋಗಬೇಡಿರಿ. ಅದನ್ನು ನೋಡಬೇಡಿರಿ. ನಿಮ್ಮ ಇದ್ದ ದೃಷ್ಟಿಯೂ ಮಂಕಾದೀತು. ಕಣ್ಣಿಲ್ಲದವರಿಗೆ ನನ್ನ ಅನಾಥ ಬಂಧುವು ಕಣ್ಣನ್ನು ಕೊಡುತ್ತಿದ್ದನು. ಇಲ್ಲಿ ಕಣ್ಣಿದ್ದವರ ಕಣ್ಣು ಹೋದೀತು. ಬೇಡ, ಹೋಗಬೇಡಿರಿ. (ತೆರಳುವನು.)

**ಗುಂಡಪ್ಪ**:— ಏನು, ಹೋದವರ ಕಣ್ಣು ಹೋದೀತೆ? ಹೋಗಲೂ ಬಹುದು. ಇಲ್ಲಿಗೆ ಬಂದು ನನ್ನ ಸರ್ವಸ್ವ ಹೋಯಿತು. ರಾತ್ರಿಯ ತುತ್ತೂ ಹೋಯಿತು. ಬೇಡ, ಆ ಗೊಂಬೆಯ ಮಾಟವೂ ಬೇಡ, ಈ ಬ್ರಾಹ್ಮಣರ ಕಾಟವೂ ಬೇಡ. ಬಾ, ಅಮ್ಮ, ಬಾ ಮಗು, ಹೋಗುವ. ಈ ಕ್ಷೇತ್ರದ ಹೆಸರನ್ನು ದಾರಿ

ಯುದ್ಧಕ್ಕೂ ಕೂಗುತ್ತ ಹೋಗುವ ಮಾಟದ ಗೊಂಬೆಯಂತೆ!
ಮಾಟದ ಗೊಂಬೆಯಂತೆ!

**ಏಕಾಕ್ಷಿ** :—(ಓಡಿಬಂದು) ಯಾರದು? ಮಾಟದ ಗೊಂಬೆಯೆಂದವರು?

**ಗುಂಡಪ್ಪ** :— ಯಾರೇ? ನಾನು, ನಾನು ಮಾಟಗಾರರು ನೀವು.

**ಏಕಾಕ್ಷಿ** — ಏ ಮಾಹೇಶ, ಅಶ್ವತ್ಥ, ಇಲ್ಲಿ ಬನ್ನಿರೋ ಇವನನ್ನು ನೋಡಿ. ಕ್ಷೇತ್ರಕ್ಕೆ ಬಂದು ಬ್ರಾಹ್ಮಣರನ್ನು ಬೈಯ್ಯುತ್ತಿದ್ದಾನೆ

(ಅವರೂ ಓಡಿಬರುವರು)

**ಗುಂಡಪ್ಪ** :— ಯಾರು ಬ್ರಾಹ್ಮಣರು? ಯಾರು ಬ್ರಾಹ್ಮಣರು ಹೇಳಿ. ಈ ಮಾಟದ ಊರಿನಲ್ಲಿ ಬ್ರಾಹ್ಮಣರಿದ್ದಾರೆಯೇ? ಇಲ್ಲಿರುವವರು ಮಾಟಗಾರರು. ಎಲ್ಲರೂ ಕಾಂಚನದ ಕಳ್ಳರು. ಕಾಂಚನದ ಕಳ್ಳರು ನೀವು.

**ಅಶ್ವತ್ಥ** :— ಯಾರು ನಾವೇ?

**ಗುಂಡಪ್ಪ** :— ಅಹುದು, ನೀವೇ, ನೀವೇ. ಇನ್ನಾರು?

**ಮಾಹೇಶ** :— ತೆಗೆದುಕೊಳ್ಳಿರೋ ಕಲ್ಲನ್ನು; ಮುರಿಯಿರಿ ಅವರ ಹಲ್ಲನ್ನು; ತೆಗೆಯಿರಿ ಅವರ ಪ್ರಾಣವನ್ನು . . . .

(ಎಂದು ಎಲ್ಲರೂ ಅವರ ಮೈಮೇಲೆ ಬಿದ್ದು ಹೊಡೆಯುವರು. ಮುದುಕಿಯೂ ಹುಡುಗನೂ ನೋವಿನಿಂದ ಕೂಗುವರು ಕೂಗನ್ನು ಕೇಳಿ ಕಾಶ್ಯಪನು ಬರುವನು)

**ಕಾಶ್ಯಪ** :— ಈಗ ಹೇಳಿರಿ: ನೀವು ಮಾಟಗಾರರು ಅಲ್ಲವೇ ಎಂದು. ಮನುಷ್ಯರನ್ನು ಸುಲಿಯುವವರು, ಮನುಷ್ಯರನ್ನು ಕೊಲ್ಲುವವರು ಮಾಟಗಾರರಲ್ಲವೇ? ನಿಮ್ಮ ಗುಡಿಯಲ್ಲಿರುವುದು ಮಾಟದ ಗೊಂಬೆಯಲ್ಲವೆ?

(ಕಾಶ್ಯಪನ ಉಗ್ರಸ್ವರೂಪವನ್ನು ಕಂಡು ಎಲ್ಲರೂ ಸರಿಯುವರು. ಗುಂಡಪ್ಪನೂ, ಆವನ ತಾಯಿಯೂ ಮಗನೂ ಅವನಿಗೆ ಶರಣುಹೋಗುವರು)

---

## ಅಂಕ ೨.

(ಊರಿನ ಹೊಲಗೇರಿಯ ಹಾದಿ. ಅಲ್ಲಲ್ಲಿ ಗುಡಿಸಲುಗಳು. ಹಾದಿಯಲ್ಲಿ ಕಸದ ರಾಶಿ. ದಾರಿದ್ರ್ಯ ಅಜ್ಞಾನಗಳನ್ನು ಪ್ರತಿಬಿಂಬಿಸುವ ಕರುಣಾಜನಕ ಚಿತ್ರ. ಬೇಸರದಿಂದ ಕಾಶ್ಯಪನು ಪ್ರವೇಶಿಸುವನು.)

**ಕಾಶ್ಯಪ:**— ಎಲ್ಲ ಬರಿಯ ಮಾಯೆಯೆಂದು ಕಾಣುವುದು. ನನ್ನ ನಿರ್ಮಾಣವು ಇಲ್ಲಿ ಮಸಣವಾಯಿತು. ನಿಶ್ಚಯಕ್ಕೂ ಇದು ನನ್ನ ಅನಾಥ ಬಂಧುವಿನ ಪ್ರತಿಷ್ಠಾಭೂಮಿಯಲ್ಲ. ಇಲ್ಲಿ ಹರಿಯುತ್ತಿರುವುದು ಅಂದಿನ ಪತಿತ ಪಾವನಿ ನದಿಯೂ ಅಲ್ಲ. ಇಲ್ಲಿರುವವರು ನನ್ನ ಶಿಷ್ಯರ ಪರಂಪರೆಯವರೂ ಅಲ್ಲ! ದೇವಾ, ಏನು ಸೋಜಿಗವಿದು! ಅನಾಥ ಬಂಧುವಿನ ವಿಗ್ರಹವೆಂದರೆ ನನ್ನ ಕೌಶಲ್ಯದ ಒಂದೇ ಒಂದು ಗಾನ; ನನ್ನ ಜೀವನದ ಒಂದೇ ಒಂದು ಸೃಷ್ಟಿ; ನನ್ನ ಭಕ್ತಿಯ ಒಂದೇ ಒಂದು ಬಿಂಬ. ಅದರೊಂದು ಕಲ್ಪನೆಯುಂಟಾಗಲು ಎಷ್ಟು ದಿನಗಳ ತಪಸ್ಸನ್ನು ಮಾಡಲಿಲ್ಲ. ಅನಾಥ ಬಂಧುವಿನ ಆ ದಿವ್ಯ ಮೂರ್ತಿಯನ್ನು ಹೃದಯ ಮಂದಿರದಲ್ಲಿ ಕಂಡಬಳಿಕ, ಅದನ್ನು ಕಲ್ಲಿನಲ್ಲಿ ಚೇತನಗೊಳಿಸಲು ನನ್ನ ಜಾಣ್ಮೆಯೆಲ್ಲವನ್ನು ವ್ಯಯಿಸಿದೆನಲ್ಲ; ಎಲ್ಲ ವ್ಯರ್ಥವಾಯಿತು. ಅದೊಂದು ವಿಗ್ರಹವನ್ನು ವಿರಚಿಸಿಯೇ ಶಿಲ್ಪಾಚಾರ್ಯನೆಂದು ಅನಿಸಿಕೊಂಡೆ! ನಿಶ್ಚಯಕ್ಕೂ ಅದು ನನ್ನ ಕೃತಿಯಾಗಿರದೆ ನಿನ್ನ ಕೆಲಸವೇ ಆಗಿತ್ತು. ವಿಶ್ವಕರ್ಮನಾದ ನೀನು ಅಂದಂತೆ ನನ್ನ ಕೈ ಉಳಿಗಳು ಚಲಿಸಿ ಆ ಗೊಂಬೆಯಾಯಿತು ಅದರ ನೆರಳಲ್ಲಿ ನಾನು ಎಷ್ಟು ರಾತ್ರಿ ಹಗಲುಗಳನ್ನು ಸುಖಸಂತಸದಿಂದ ಕಳೆಯಲಿಲ್ಲ. ದೇವಾ, ಸಂಸಾರದ ತಾಪ

ದಿಂದ ಬೇಯುತ್ತಿದ್ದ ಗಳಿಗೆಯಲ್ಲಿ ನಿನ್ನ ನೆರಳಿನಡಿಯಲ್ಲಿ ಕುಳಿತು ಆಶೀರ್ವಾದವನ್ನು ಕೇಳುತ್ತಿದ್ದೆ. ಎಂಥ ಮರುಳನು ನಾನು! ಅಂಥ ದಿವ್ಯ ಮೂರ್ತಿಯನ್ನು ಇಲ್ಲಿ ಬಿಟ್ಟು ಹೋಗಲು. ನನ್ನ ಶಿಷ್ಯರು ಅಷ್ಟು ಹೀನರು, ಅಂಥ ಅಲಸಿಗಳು ಎಂದು ನನಗೆ ತಿಳಿದಿರಲಿಲ್ಲ. ನನಗೆ ಅದರಿಂದ ದೊರೆತ ಶಾಂತಿ ಸಮಾಧಾನಗಳೂ, ಆನಂದ, ಇಷ್ಟ ಪ್ರಾಪ್ತಿಗಳೂ, ಇತರ ಯಾವತ್ತು ಮಾನವಕೋಟಿಗಾದರೂ ಆಗಲಿ, ಅವರೂ ನಿನ್ನ ಅನಾಥಬಂಧು ಸ್ವರೂಪವನ್ನು ತಿಳಿದು ಸುಖಿಗಳಾಗಲಿ ಎಂದರೆ ಎಲ್ಲವೂ ನೀರ ಮೇಲಣ ಗುಳ್ಳೆಯಾಯಿತು; ಮಂಗನ ಕೈಯ್ಯ ಮಾಣಿಕ್ಯವಾಯಿತು! ಛೀ, ಇಲ್ಲಿ ಇನ್ನು ಅದನ್ನು ಹುಡುಕಿ ಉಪಯೋಗವಿಲ್ಲ. ಈ ಕಾಂಚನದ ಭಕ್ತರಿಗೆ ಅದರ ಅರಿವು ಏನಿದ್ದೀತು?

ತಿರುಗಿ ಅದೇ ವಿಗ್ರಹವನ್ನು ಕೆತ್ತಲು ಬಂದೀತೆ? ಒಮ್ಮೆ ಹಾಡಿದ ಹಾಡನ್ನು ಅಷ್ಟೇ ಇಂಪಿನಿಂದ ಹಾಡಲು ಬಂದೀತೆ? ಎಂದೂ ಇಲ್ಲ. ಅಂದು ಹಾಡಿದುದು ಅಂದಿಗೆ; ಇಂದಿನದು ಇಂದಿಗೆ.

(ಬಾಂಕು, ಮಾಂಕು ಎಂಬಿಬ್ಬರು ಹೊಲೆಯರು ಆ ಹಾದಿಯಾಗಿ ಬರುವರು. ಕಾಶ್ಯಪನನ್ನು ಕಂಡು 'ದೂರ ಸರಿಯುವಿರಾ?' ಎಂದು ಕೇಳುವರು.)

ಯಾರದು? ದೂರ ಸರಿಯಿರಿ, ದೂರ ಸರಿಯಿರಿ—ಎಂದು ನನ್ನನ್ನು ಕೂಗುವವರು. ಅರೇ, ಇವರು ದ್ರಾವಿಡರೆ? ಇವರಾರು? ಇತರರಂತಿಲ್ಲ ಇವರು. ಇವರ ಉಡುಗೆತೊಡುಗೆಗಳು ತೀರ ಅನಾಗರಿಕವಾಗಿವೆ . . . . ಇವರು ಅಂದಿನ ಅರಣ್ಯವಾಸಿಗಳಾಗಿದ್ದಿರಬೇಕು.

(ಹೊಲೆಯರು ದೈನ್ಯದಿಂದ ಅಡ್ಡಬೀಳುವರು.)

**ಬಾಂಕು:**— ಬುದ್ಧಿ, ಅಡ್ಡಬಿದ್ದೆ . . . ಅತ್ತ ಹೋಗಬೇಕು.

**ಕಾಶ್ಯಪ:**— ಹೋಗಬಾರದೇನು ತಮ್ಮ—

**ಬಾಂಕು:**—ತಾವು ಸರಿಯದಿದ್ದರೆ?

**ಕಾಶ್ಯಪ:**— ಜಾಗ ಸಾಲದೇನು?

**ಬಾಂಕು:**—ಹೊಲೆಯರು ನಾವು.

**ಕಾಶ್ಯಪ:**—ಹೊಲೆಯರೆಂದರೆ?

**ಬಾಂಕು:**— ಹೊಲೆಯರು. ನಮ್ಮನ್ನು ಮುಟ್ಟಬಾರದು

**ಕಾಶ್ಯಪ:**— ಅಣ್ಣಾ . . .

**ಬಾಂಕು:**— ಅಯ್ಯೋ, 'ಅಣ್ಣಾ' ಎಂದು ನಮ್ಮ ಕುಲವೇ ಕೆಡುವಂತೆ ಮಾಡುತ್ತೀರಾ?

**ಕಾಶ್ಯಪ:**— 'ಅಣ್ಣಾ' ಎಂದರೆ ನಿಮ್ಮ ಕುಲವೇ ಕೆಟ್ಟತೇ?

**ಬಾಂಕು:**— ಉತ್ತಮರು ಹೀನರಿಗೆ ಹಾಗೆ ಹೇಳುವುದೇ?

**ಕಾಶ್ಯಪ:**— ಉತ್ತಮರಾರು? ನಾನೇ? ನಾನೆಲ್ಲಿಯ ಉತ್ತಮನು? ನಾನು ಹೀನರಲ್ಲಿ ಹೀನನು. ನನಗಿಂತ ಇನ್ನೊಂದು ಹೀನ ವಸ್ತುವು ಉಂಟೆಂದು ನಾನು ತಿಳಿಯುವುದಿಲ್ಲ.

**ಬಾಂಕು:**— ಬುದ್ಧಿ, ನಮಗೆ ವಾದಮಾಡಲು ಬಾರದು. ತಾವು ಸರಿಯದಿದ್ದರೆ ನಾವು ಹಾಗೆಯೇ ಮರಳುವೆವು.

**ಕಾಶ್ಯಪ:**— ಹಾಗಾದರೆ ನೀವು ಕೊಲೆಗಡುಕರೆ?

**ಬಾಂಕು:**— ಅಲ್ಲ ಬುದ್ಧಿ. ಇದುವರೆಗೆ ಯಾರನ್ನೂ ಕೊಲೆಮಾಡಿದವರಲ್ಲ.

**ಕಾಶ್ಯಪ:**— ವ್ಯಭಿಚಾರಿಗಳೇ?

**ಬಾಂಕು:**— ಅಲ್ಲ ಬುದ್ಧಿ, ಅಂಥ ಪಾಪವನ್ನು ಇಷ್ಟರತನಕ . . . . .

**ಕಾಶ್ಯಪ:**— ಹಾಗಾದರೇನು? ಇನ್ನಾವ ಅನ್ಯಾಯವನ್ನು ಮಾಡಿರುವಿರಿ?

**ಬಾಂಕು:**— ಬುದ್ಧಿ, ನಾವು ಅನ್ಯಾಯಗಾರರಲ್ಲ.

**ಕಾಶ್ಯಪ:**— ಹಾಗಾದರೇನು? ಬನ್ನಿರಿ, ಹೀಗೆಯೇ ಹೋಗಿರಿ.

**ಬಾಂಕು:** – ತಮ್ಮ, ನಮಗೆ ಇವರ ತಂಟೆಯೇ ಬೇಡ. ಇವರು ಪರದೇಶೀಯರಿರಬೇಕು. ಬಾ ಹೊತ್ತಾಯಿತು. ಆಚೆಂದಲಾದರೂ ಸುತ್ತಿ ಬರುವ. ತಡಮಾಡಿದರೆ ಸಿಗುವ ಎಲೆಗಳೂ ಹೋದಾವು.

(ಅವರು ತೆರಳುವರು)

**ಕಾಶ್ಯಪ:**— ಅರೇ, ಏನಿದು! ನಾನು ಮಾತನಾಡುವುದರಲ್ಲಿ ಸರಿದೇ ಹೋದರು. ಯಾರು ಅವರಿಗೆ ಈ ರೀತಿಯ ಅಂಜಿಕೆಯನ್ನು ಹುಟ್ಟಿಸಿದವರು? ಯಾರೆನ್ನಲಿ? ಅವರೆ, ಆ ಕಾಂಚನದ ದಾಸರು. ಗುಡಿಯನ್ನು ಸಂತೆಯಾಗಿ ಮಾಡಿದವರು, ದೇವರನ್ನು ಆಟದ ಗೊಂಬೆಯಾಗಿ ಮಾಡಿದವರು, ಮನುಷ್ಯರನ್ನು ಪಶುಗಳಿಗಿಂತಲೂ ಕಡೆಯಾಗಿ ಮಾಡಿದರು ಅನ್ಯಾಯ!

ಹಾ, ಬ್ರಾಹ್ಮಣ್ಯವು ಎಷ್ಟು ಅಗ್ಗದಲ್ಲಿ ಇವರಿಗೆ ದೊರೆಯಿತು! ಒಂದು ಕಾಲದಲ್ಲಿ ಪತಿತರನ್ನು ಉದ್ಧರಿಸಿ ಬ್ರಾಹ್ಮಣರಾದರೆ, ಇಂದು ಅವರನ್ನು ತುಳಿದು ಬ್ರಾಹ್ಮಣರಾದರು! ವಿಚಿತ್ರ.

(ಗಾಯಗೊಂಡ ಚಿಕ್ಕ ಪೋರನೊಬ್ಬನು ಆ ಕಡೆಯಾಗಿ ಓಡಿಬಂದು ಆಯಾಸದಿಂದ ಹಾದಿಯಲ್ಲೇ ಮೂರ್ಛೆಹೋಗುವನು.)

ಅರೇ! ಯಾರೀ ಬಾಲಕನು? ಮೂರ್ಛೆಹೋದನಲ್ಲ. ಈ ಹಸುಳೆಯನ್ನು ಗಾಯಗೊಳಿಸಿದವರಾರು? ಎಂಥ ರಕ್ತಸ್ರಾವ. ಹಣೆಯೇ ಒಡೆದಿರಬೇಕು. ಎಂಥಾ ನೋಟವಿದು! ಅಯ್ಯೋ ಇವನನ್ನು ಹೇಗೆ ಉಪಚರಿಸಲಿ? ಸ್ವಲ್ಪ ನೀರಾದರೂ ಬಳಿ

ಯಲ್ಲಿದ್ದರೆ ಬದುಕಿಕೊಳ್ಳುತ್ತಿದ್ದನಲ್ಲ. ನೀರು, ನೀರು. ಯಾರು? ಯಾರು ದಾರಿಯಲ್ಲಿ ಹೋಗುತ್ತಿರುವವರು.

(ಸಣ್ಣಪ್ಪ ಭಟ್ಟನೆಂಬ ಬ್ರಾಹ್ಮಣನೊಬ್ಬನು ಆ ಹಾದಿಯಾಗಿ ಬಿಂದಿಗೆ ತುಂಬ ನೀರನ್ನು ಹಿಡಿದುಕೊಂಡು ಹೋಗುತ್ತಿರುವನು.)

**ಸಣ್ಣಪ್ಪ:**—(ಕಾಶ್ಯಪನ ಕರೆಯನ್ನು ಕೇಳಿ) ಯಾರಿಗೆ, ನಿನಗೇನು ನೀರು? ನದಿಯ ವರೆಗೆ ಹೋದರೆ ಏನು ದಾಡಿ? ನಿನಗೇನು ಸಾವಿನ ಸಂಕಟ ಬಂದಿದೆ? ಏ ಮೈಸೊಕ್ಕಿನವನೆ!

**ಕಾಶ್ಯಪ:**—ದಯಾಳುವೆ, ನನಗೇನು ನೀರು ಬೇಡ. ಇಲ್ಲಿ ನೋಡಿರಿ. ಈ ಮಗುವಿನ ತಲೆಯೊಡೆದುಹೋಗಿದೆ. ಯಾರು ಹೊಡೆದರೋ ಏನೋ ಇವನ ಮುಖಕ್ಕೆ ಸ್ವಲ್ಪ ನೀರನ್ನು ಹಾಕಿರಿ, ಸ್ಮೃತಿಬರಲಿ.

**ಸಣ್ಣಪ್ಪ:**—ಯಾರಿಗೆ ಅವನಿಗೇನು? ಅಯ್ಯೋ, ಥೂ ನಿನ್ನ ಕುಲವು ಹಾಳಾಗಲಿ. ಹೊಲೆಯನ ಪಿಳ್ಳೆಯನ್ನು ಹಿಡಿದು ಕರೆಯುತ್ತಾನೆ ನನ್ನನ್ನು. ತಿರುಗಿ ಒಂದು ಸ್ನಾನಮಾಡುವಂತೆ ಮಾಡಿದನು.

**ಕಾಶ್ಯಪ:**—ಸ್ನಾನವೇಕೆ ಸ್ವಾಮಿ, ಅವನೂ ನಮ್ಮಂತೆ ಮನುಷ್ಯನಲ್ಲವೆ? ಸ್ವಲ್ಪ ನೀರನ್ನು ಬಾಯಿಗೆ ಹಾಕಿರಿ. ನಿಮ್ಮ ಕುಲವು ಉದ್ಧಾರವಾದೀತು.

**ಸಣ್ಣಪ್ಪ:**—ಕರ್ಮಚಂಡಾಲ, ನಿನ್ನಂತೆ ನಾನು ಹೊಲೆಯರನ್ನು ಮುಟ್ಟುತ್ತೇನೆ ಎಂದು ತಿಳಿದೆಯಾ?

**ಕಾಶ್ಯಪ:**— ಮುಟ್ಟಬೇಡಿರಿ, ದೂರದಿಂದಲೇ ಎಸೆಯಿರಿ.

**ಸಣ್ಣಪ್ಪ:**—ನೀನು ಬಹಳ ಸೊಕ್ಕಿರುವೆ. ಮೂರ್ಖ, ಅದು ಪತಿತಪಾವನಿ ತೀರ್ಥ. ಹೊಲೆಯರ ಮಕ್ಕಳನ್ನು ತೊಳೆಯುವ ಚರಂಡಿ ನೀರಲ್ಲ. ತೀರ್ಥ — ಏನು ತಿಳಿಯಿತೇ?

**ಕಾಶ್ಯಪ:**— ತೀರ್ಥವೆ? ಪತಿತಪಾವನಿ ತೀರ್ಥೋದಕವೆ? ಒಳಿತಾಯಿತು. ಪಾಪದ ಬಾಲಕನು ತೀರ್ಥಜಲದಿಂದ ಜೀವವನ್ನು ಹಿಡಿಯಲಿ.

**ಸಣ್ಣಪ್ಪ:**— ಹಾಳಾಗಿ ಹೋಗು; ಅಸಂಬದ್ಧ ಮಾತನಾಡುವವನೇ. ಅವನ ಬಾಯಿಗೆ ತೀರ್ಥವಂತೆ! ನಿನಗೆ ಹೇಳಲು ಸೊಕ್ಕಾದರೂ ಎಷ್ಟು ಬೇಕು? ತೀರ್ಥವನ್ನು ಹೊಲೆಯನ ಬಾಯಿಗೆ ಸುರಿಯಬೇಕೆ? ಅದೇನು, ತಾಳಿಹೆಂಡವೆಂದು ತಿಳಿದೆಯಾ? ನೀನಾರೆಂದು ತಿಳಿದು ನಾಳೆ ಶ್ರೀ ಪಾದಂಗಳವರಿಂದ ನಿನ್ನನ್ನು ದಂಡಿಸದಿದ್ದರೆ . . . . (ಸಿಟ್ಟಾಗಿ ಹೋಗುವನು.)

**ಕಾಶ್ಯಪ:**— ಹೇ ಉತ್ತಮನೆ, ನನಗೆ ಬೇಕಾದ್ದನ್ನು ಮಾಡಿಸು. ಆದರೆ ಈ ಸಾಯುವ ಮಗುವನ್ನು ಉಳಿಸಲಾರೆಯಾ? ಇಲ್ಲ, ಈ ಕಠಿಣಾತ್ಮನು ತೆರಳಿದನು. ಇವನಿಗೆ ದೀನರ ಮೇಲೆ ಎಂದೂ ಕರುಣೆ ಬಾರದು. . . ಯಾರನ್ನು ಕರೆಯಲಿ . . . ಇಲ್ಲ, ನಾನೇ ಹೋಗುವೆನು. (ತೆರಳುವನು)

(ಹುಡುಗನ ತಂದೆಯು ಹುಡುಕುತ್ತ ಬರುವನು. ತೀರ ಮುಪ್ಪಿನವನು. ಜೀರ್ಣವಾದ ದೇಹಕ್ಕೆ ಒಪ್ಪುವ ಜೀರ್ಣವಸ್ತ್ರಗಳು ಮೈ ಮೇಲಿವೆ.)

**ಮುದುಕ:**— ಅಯ್ಯೋ, ಬೆಳಗ್ಗೆ ಹೋದ ನನ್ನ ಮಗು ಮನೆಗೇ ಬರಲಿಲ್ಲ. ಮಧ್ಯಾಹ್ನವಾಗಿ ಎಷ್ಟು ಹೊತ್ತಾಯಿತು ಎಲ್ಲಿ ಹೋಯಿತೋ ಏನೊ . . ಏನು, ಊಟಕ್ಕೆ ಸಿಕ್ಕಿತೋ ಇಲ್ಲವೋ . . . ನನಗಂತು ಉಪವಾಸ. (ಬಿದ್ದಿರುವ ಹುಡುಗನನ್ನು ಕಂಡು) ಅರೆ! ಇಲ್ಲಾರು, ಮಲಗಿರುವುದು. ಅಯ್ಯೊ ನನ್ನ ಕೂಸು. ನನ್ನ ಕೂಸು. ಯಾರಪ್ಪ ಇದನ್ನು ಕೊಂದವರು? ಹಣೆಯೆಲ್ಲಾ

ಗಾಯವಾಗಿದೆ; ಮೈಯೆಲ್ಲಾ ರಕ್ತ ! ಕೂಸೇ, ಏನಾಯಿತು ನಿನಗೆ? ಹೇಳು, ಎಲ್ಲಿಗೆ ಹೋದೆ, ಏನಾಯಿತು? ಯಾರು ಹೊಡೆದರು? ಹಸಿವಾಯಿತೆಂದು ಯಾರ ಮನೆಗೆ ಹೋದೆ? ದೈವವೇ, ನನ್ನ ಕೂಸನ್ನು ಕೊಂಡುಹೋದೆಯಾ? ಅಯ್ಯೋ ಮಗು, ಕೂಸೇ, ಕೂಸೇ . . . ಹೋಯಿತು. ಇದ್ದೊಂದು ಕೂಸು, ಇದ್ದೊಂದು ಚಿನ್ನ ಹೋಯಿತು. ಈ ಮುದುಕನ ಬಾಳ್ವೆ ಮಣ್ಣುಗೂಡಿತು.

(ಕಾಶ್ಯಪನ ಪ್ರವೇಶ.)

**ಕಾಶ್ಯಪ:**— ಇವನಾರು, ಈ ಬಾಲಕನನ್ನು ಇಷ್ಟು ಪ್ರೀತಿಯಿಂದ ಆದರಿಸುತ್ತಿರುವನು? ಇವನಿಗಿರುವ ಕರುಣೆ ಅವನಿಗಿಲ್ಲದೆ ಹೋಯಿತು (ಬಾಲಕನ ಬಳಿಗೆ ಬಂದು ಉಪಚರಿಸುವನು )

**ಮುದುಕ:**— ಅಯ್ಯೋ ನೀವಾರು? ಬ್ರಾಹ್ಮಣರಂತೆ ಕಾಣುವಿರಿ. ನನ್ನ ಮಗನ ತಂಟೆಯೇಕೆ ನಿಮಗೆ?

**ಕಾಶ್ಯಪ:**— ಯಾರು ಅವನು ನಿನ್ನ ಮಗನೇ! ಅವನನ್ನು ನಾನು ಉಪಚರಿಸಿದುದು ತಪ್ಪಾಯಿತೇ?

**ಮುದುಕ:**— ಉಪಚಾರವು ಬೇಡವಿತ್ತು ನಮಗೆ. ನಿಮ್ಮಂಥ ಮೇಲು ಜಾತಿಯವರಿಂದ ಮುಟ್ಟಿಸಿಕೊಂಡು, ಸೇವೆಮಾಡಿಸಿಕೊಂಡರೆ ನಮ್ಮ ಕುಲವು ನಾಶವಾಗದಿದ್ದೀತೇ? ಹೀಗೆ ನೀವು ಇಲ್ಲಿ ಕುಳಿತಿರುವುದನ್ನು ಕಂಡರೆ ನನ್ನ ಜಾತಿಯವರು ನನಗೇನೆಂದಾರು? ನಿಮ್ಮ ಜಾತಿಯವರಂತು ನನ್ನನ್ನು ಊರಲ್ಲಿಯೇ ಇರಗೊಡಿಸಲಿಕ್ಕಿಲ್ಲ.

**ಕಾಶ್ಯಪ:**— ಎಂಥ ವಿಚಿತ್ರ ಸಮಾಜವೋ, ಎಂಥ ವಿಚಿತ್ರ ಜನರೋ ಇವರು. ತಾವು ಹೀನರೆಂಬ ಚಿತ್ತವೃತ್ತಿಯು ಇವರಲ್ಲಿ ಬೇರೂರಿ ಬೆಳೆದುಬಿಟ್ಟದೆ. ಹಾ, ಮಗುವು ಚೇತನಗೊಂಡು ಕಣ್ದೆರೆಯಿತು. ಇನ್ನು ನಾನಿಲ್ಲಿ ನಿಲ್ಲುವ ಅವಶ್ಯವಿಲ್ಲ. (ಎದ್ದು ನಿಲ್ಲುವನು )

**ಮುದುಕ:**— ಬಾ ಮಗು, ಗುಡಿಸಲಿಗೆ ಹೋಗುವ ಏನಾಯಿತು ಮಗು? ಯಾರು ನಿನ್ನನ್ನು ಹೊಡೆದರು?

**ಮಗು:**— ಯಾರೋ ಆ ಬೀದಿಯವರು. ಹೊಟ್ಟೆ ಹಸಿವಾಯಿತೆಂದು ಆ ಬೀದಿಗೆ ಹೋಗಿದ್ದೆ.

**ಮುದುಕ:**— ಯಾವ ಬೀದಿಗೆ? ಬ್ರಾಹ್ಮಣರ ಬೀದಿಗೇನು?

**ಮಗು:**— ಹೌದು, ಅಲ್ಲಿ ಅವರು ನನ್ನನ್ನು ಹೊಡೆದು ಓಡಿಸಿದರು.

**ಮುದುಕ:**— ಹಾಳಾಯಿತು ಮಗನೇ, ಹೊಟ್ಟೆಗಿಲ್ಲೆಂದು ಎಂಥ ಅನ್ಯಾಯವನ್ನು ಮಾಡಿದೆ! ಎಲ್ಲಿಂದಲಾದರೂ ಇಷ್ಟು ಗಡ್ಡೆಗೆಣಸನ್ನು ತರುತ್ತಿದ್ದೆನಲ್ಲ. ಏನಿಲ್ಲವಾದರೆ ಸುಮ್ಮನಿರಬಹುದಿತ್ತು... ಬಾ ಹೋಗುವ . . . (ತೆರಳುವನು)

**ಕಾಶ್ಯಪ:**— ಏನು ವಿಚಿತ್ರವಿದು? ಕೇವಲ ತಮ್ಮ ಬೀದಿಗೆ ಭಿಕ್ಷಾಟನೆಗೆ ಬಂದನೆಂದು ಈ ರೀತಿಯ ಶಿಕ್ಷೆಯೇ? ಕಷ್ಟ, ಕಷ್ಟ.

(ಅದೇ ಹಾದಿಯಾಗಿ ಮಾಂಕು ಬಾಂಕು ಮೊದಲಾದವರು ಬರುವರು.)

**ಮಾಂಕು:**— ಅಯ್ಯೋ, ಈ ಬ್ರಾಹ್ಮಣರು ಈ ಬೀದಿಯಲ್ಲೇ ಏಕೆ ಸುಳಿಯುತ್ತಿದ್ದಾರೆ? ಗುಡಿಸಲಿಗೆ ಹೋಗುವುದಕ್ಕಿಲ್ಲ. ಮಕ್ಕಳು ಹಸಿದು ಕಾದಿದ್ದಾರೆ ಅಯ್ಯಾ ಬುದ್ಧಿ, ಹಾದಿ ಬಿಡುವಿರಾ?

**ಕಾಶ್ಯಪ:**— ಯಾರಿವರು 'ಹಾದಿ ಬಿಡುವಿರಾ' ಎಂದು ಕೇಳುವವರು? ಓಹೋ— ಆಗ ಬಂದವರು; ಹಾದಿ, ಹಾದಿಯೆಂದು ಹಾಗೆಯೇ ಹೋದವರು. ನಾನಿದ್ದರೆ ಇವರಿಗೆ ತಿರುಗಿ ತೊಂದರೆಯಾದೀತು. ನನಗೇನು? . . . .

(ತುಸು ಸರಿಯುವಷ್ಟರಲ್ಲಿ ಚಿಕ್ಕೊಂದು ಹೊಲೆಯರ ಕೂಸು ಬರುವುದು. ಆಗ ಅವರು ತಾವು ತಂದ ಉಚ್ಛಿಷ್ಟವನ್ನು ಅಲ್ಲಿ ಹಂಚಿ ತಿನ್ನಲು ಕುಳಿತುಕೊಳ್ಳುವರು.)

3

ಏನಿದು? ಉಚ್ಛಿಷ್ಟವಲ್ಲವೇ? ಉಂಡೆಸದ ಎಲೆಗಳಂತಿವೆ. ಇದನ್ನು ಇವರು ತಿನ್ನಬೇಕೆ? ಯಾವ ಕಠಿಣ ಮನಸ್ಕರು ಇದನ್ನು ಇವರಿಗೆ ಕೊಟ್ಟರು? ಏನಿದು, ಹೆಜ್ಜೆಹೆಜ್ಜೆಗೂ ಅನ್ಯಾಯವನ್ನು ನೋಡುತ್ತೇನೆ . . . ಅಯ್ಯೋ, ಅದೇನು ನೀವು ತಿನ್ನುವುದು?

**ಮೂಂಕು:** — ಅಯ್ಯೋ, ಇವರೇಕೆ ತಿರುಗಿ ಬಂದರಪ್ಪ? . . . . .

ಅದೇ, ಎಂಜಲು ಅನ್ನ . . . ಆ ಪುಣ್ಯಾತ್ಮರ ಮನೆಯಲ್ಲೊಂದು ಸಂತರ್ಪಣೆಯಿತ್ತು.


**ಕಾಶ್ಯಪ:** — ಎಂಜಲನ್ನೇಕೆ ಕೊಟ್ಟರು? ಒಳಗೆ ಬೇರೆ ಅನ್ನವಿರಲಿಲ್ಲವೆ?

**ಮೂಂಕು:** — ಯಾರಪ್ಪ, ಹೊಲೆಯರಿಗೆ ಬೇರೆ ಅನ್ನವನ್ನು ಕೊಡುವವರು? ನಮಗೆ ಎಂಜಲನ್ನಲ್ಲದೆ ಬೇರೆ ಅನ್ನವನ್ನು ಕೊಟ್ಟಾರೆ? ಬೇಡ, ಇವರ ತಂಟೆಯೇ ಬೇಡ . . . . .

(ಅಲ್ಲಿಂದ ಸರಿಯುವರು)

**ಕಾಶ್ಯಪ:** — ಎಲ್ಲವೂ ವಿಚಿತ್ರವಾಗಿ ಕಾಣಿಸುವುದು. ನನ್ನ ಮೂರ್ತಿಯು ಕಣ್ಮರೆಯಾದಂತೆ ನನ್ನ ನಾಡಿನಲ್ಲಿ ಧರ್ಮವೆ ಕಣ್ಮರೆಯಾಯಿತೆ? ಇಂಥ ವಿಚಿತ್ರ ಊರಿನಲ್ಲಿ ನನ್ನ ಪ್ರತಿಮೆಯು ನನಗೆ ಸಿಕ್ಕೀತೆ? ಅದನ್ನು ಕಂಡು ಆನಂದಿಸುವೆನೆಂದರೆ, ಇಲ್ಲಿ ಅಳುವನ್ನು ಕರೆಯುವ ನೂರೆಂಟು ಪ್ರಸಂಗಗಳನ್ನು ಕಾಣುತ್ತೇನೆ . . . ಬೇಡ ಹೋಗುತ್ತೇನೆ.

(ಕಾಶ್ಯಪನು ತೆರಳುವನು. ಏಕಾಕ್ಷಿ, ಅಶ್ವತ್ಥರು ಭಾನುಕೋಟಿ ಆಚಾರ್ಯರೊಡನೆ ಬರುವರು. ಭಾನುಕೋಟಿ ಆಚಾರ್ಯರು ಶುದ್ಧಾಂಬರ ಮಠದ ಪಾರುಪತ್ಯಗಾರರು. ಅವರ ಸ್ಥೂಲ ಶರೀರ, ಜರತಾರಿ ಪಂಚೆ, ಮುಂದಗಮನಗಳು ಅವರ ಯೋಗ್ಯತೆಯನ್ನು ಹೆಜ್ಜೆಹೆಜ್ಜೆಗೂ ಸಾರುವಂತಿವೆ.)



ಪಾರುಪತ್ಯಗಾರರು

**ಭಾನು:**— ಅಶ್ವತ್ಥ, ನಾಳೆ ಶ್ರೀ ಪಾದಂಗವರು ಬರುತ್ತಾರಲ್ಲ. ಏನು ವ್ಯವಸ್ಥೆ ಮಾಡಿದೆ? ಬ್ರಾಹ್ಮಣರೆಲ್ಲರಿಗೆ ಊಟಕ್ಕೆ ಹೇಳಿದೆಯಾ? ಮನೆತಪ್ಪದೆ ಹೇಳಬೇಕೆಂದಿದ್ದೆನಲ್ಲ.

**ಅಶ್ವತ್ಥ:**— ಸಾಧಾರಣ ಅರ್ಧಮನೆಯಷ್ಟು ಹೇಳಿದ್ದೇನೆ. ಅಂತು ಖಾವಂದರು ಬರುವ ಸುದ್ದಿ ತುಂಬಾ ಹಬ್ಬಿದೆ ನಾಳೆದಿನ ಮರದ ಭೋಜನಕ್ಕೆ ಕಡಿಮೆ ಕಡಿಮೆ ನಾಲ್ಕು ಸಾವಿರ ಜನರಾಗ ಬಹುದು . . . .

**ಭಾನು:**— ಅದೇಕೋ ನಿನಗೆ ಅಧಿಕಪ್ರಸಂಗ? ಹೇಳಿಕೆಯನ್ನು ನೀನು ತಪ್ಪದೆ ಮಾಡಬೇಕು ಎಂದಿದ್ದೆನಲ್ಲ ಈ ಸಾರಿ ಸ್ವಾಮಿ ರಾಯರು ಬಲು ಸಿಟ್ಟನಿಂದ ಬರುತ್ತಾರೆ. ಎಲ್ಲಾ ಆಚಾರ ವಿಚಾರಗಳನ್ನು ತೆಗೆದುಕೊಳ್ಳುವುದಕ್ಕೆ ಬರುತ್ತಾರೆ . . . ಅವರ ಕಿವಿಗೆ ಯಾರೋ ಸುದ್ದಿಯನ್ನು ಮುಟ್ಟಿಸಿರಬೇಕು: ಅನಾಚಾರ ಹೆಚ್ಚುತ್ತಿದೆ; ಬ್ರಾಹ್ಮಣರು ಸಹ ಹೊಲೆಯರನ್ನು ಮುಟ್ಟು ತ್ತಾರ— ಎಂದು ಒಟ್ಟು, ಕಾಲಗತಿಯಲ್ಲದಿದ್ದರೆ ಇಂಥ ವಿಪ ರೀತವಾಗುವುದೇ? ನಾಳೆ ಖಂಡಿತವಾಗಿ ಒಂದು ನೂರು ಜನರಿ ಗಾದರೂ ದಂಡವಾಗದಿರದು. ಆ ಚಿದಾನಂದನಿಗಂತು ಜಾತಿ ಬಹಿಷ್ಕಾರವೇ ಆಗುತ್ತದೆ.

**ಏಕಾಕ್ಷಿ:**— ಆ ಮುಂಡೇಗಂಡನಿಗೆ ಅದೇ ಆಗಬೇಕು. ಅವನು ಇರುವುದೇ ಹೊಲೆಯರ ಬೀದಿಯಲ್ಲಿ ಅವರ ಮನೆಯಲ್ಲಿ ಊಟ ವನ್ನು ಮಾಡಲಿಕ್ಕೊ ಸಾಕು. ಅವನಿಂದಾಗಿ ನಮ್ಮ ಬ್ರಾಹ್ಮಣ್ಯದ ವರ್ಚಸ್ಸು ಅರ್ಧಕ್ಕರ್ಧ ಇಳಿಯಿತು.

**ಅಶ್ವತ್ಥ:**— ಸ್ವಾಮಿ, ಪಾರುಪತ್ಯಗಾರರೇ. ಆ ಚಿದಾನಂದನನ್ನು ಜಾತಿಯಿಂದಲೇ ಹೊರಗೆ ಇರಿಸಲು ಬರುವುದಿಲ್ಲವೇ? ಅವನು

3°

ಖಂಡಿತಕ್ಕೂ ಎಲ್ಲ ಜಾತಿಯನ್ನು ಒಟ್ಟು ಮಾಡಲು ಬಂದವನು. ಅವನಿಂದಾಗಿ, ಹೊಲೆಯರು ನಮಗೆ ಕಾಸನ್ನು ಕೊಡುವುದು ಸಹ ಇಲ್ಲ. 'ಹೊಟ್ಟೆಗಿಲ್ಲದಾಗ ಯಾರಾರಿಗೆ ದಕ್ಷಿಣೆಕೊಟ್ಟು ಕಂಗೆಡಬೇಡಿ' ಎಂದು ಇವನ ಉಪದೇಶವಂತೆ.

**ಏಕಾಕ್ಷಿ**:— ಇವನ ಉಪದೇಶ ಅವರಿಗೆ ನಾಟುತ್ತದೆ ಎಂದು ತಿಳಿದೆಯಾ? ನಾನು ಪೊಲೆಯರನ್ನು ಹೆದರಿಸಿ ಬಿಟ್ಟದ್ದೇನೆ: ನೀವು ಈ ಕ್ಷೇತ್ರದಲ್ಲಿ, ಬ್ರಾಹ್ಮಣರು ನಿಮ್ಮ ಬೀದಿಗೆ ಬರುವಂತೆ ಮಾಡಿ, ಧರ್ಮನಷ್ಟ ಮಾಡಿದರೆ ಮಾರಿರೋಗ ಬರುತ್ತದೆ ಎಂದು. ಮೊನ್ನೆ ಮೊನ್ನೆ ಇನ್ನೊಂದು ಅಸ್ತ್ರ ಹೊಡೆದಿದ್ದೇನೆ ಬ್ರಾಹ್ಮಣರಿಗೆ ಸಿಗುವ ಕಾಣಿಕೆ ಈಗಿನ ದಿವಸದಲ್ಲಿ ಸಿಗುವುದಿಲ್ಲ, ಅದರಿಂದಾಗಿ ಊರಿಂದೂರೇ ಸುಟ್ಟು ಹೋಗುವುದು ಎಂದಿದ್ದೆ.

**ಭಾನು**:— ಏ ಶಾಸ್ತ್ರಿ, ಆ ಹಾಳುಹರಟೆ ಈಗ ಬೇಡ. ಈಗ ಸ್ವಾಮಿಯವರು ಬಂದುದಕ್ಕೆ ಪಾದಕಾಣಿಕೆಯಾಗಿ ಎಂಟು ಸಾವಿರ ರೂಪಾಯಿಯಾದರೂ ಆಗದಿದ್ದರೆ ಖಂಡಿತವಾಗಿ ಅವರು ಶಾಪ ಕೊಟ್ಟು ಹೋಗುತ್ತಾರೆ. ಅದಕ್ಕಾಗಿ ಕೆಲವರನ್ನು ಹೆದರಿಸಿ ಪ್ರಾಯಶ್ಚಿತ್ತಗೀಯಶ್ಚಿತ್ತವೆಂದು ಅಪರಾಧವನ್ನು ಹೊರಿಸದಿದ್ದರೆ ಪ್ರಯೋಜನವಿಲ್ಲ ಅಲ್ಲಿ, ಮಠದಲ್ಲಿ ನಿತ್ಯದ ಮೃಷ್ಟಾನ್ನಕ್ಕೆ ಹರ ಹರ ಆಗಿದೆಯೆಂದು ಸುದ್ದಿ . . . ನೀನು ಓಡು, ಆ ಚಿದಾನಂದನ ಮನೆಗೆ ಹೋಗು

**ಏಕಾಕ್ಷಿ**:— ಆ ಕುಲಗೆಟ್ಟವನ ಮನೆಗೇನು?

**ಭಾನು**:—ಹೋಗಯ್ಯ, ತಿರುಗಿ ಬಂದಮೇಲೆ ಸ್ನಾನಮಾಡಿದರಾಗುವುದಿಲ್ಲವೆ? ಅವನ ತಾಯಿಗೆ ಹೇಳು: ಮುದುಕಿಯವಳು; ಅವಳಿಗೆ ನಮ್ಮ ಧರ್ಮದ ಮೇಲಿನ ಶ್ರದ್ಧೆ ಹೋಗಲಿಲ್ಲ; 'ಸ್ವಾಮಿಯವರು

ಸಿಟ್ಟಾಗಿದ್ದಾರೆ, ನಿಮ್ಮ ಮನೆಯುವರನ್ನು ತೆಗೆದಿರಿಸುತ್ತಾರೆ' — ಎಂದು. ಹಾಗೆಯೇ ಅಶ್ವತ್ಥ, ನೀನು ಸರ್ ಸದಾಶಿವರಾಯು ರಿದ್ದಾರಲ್ಲ, ಅವರ ಮನೆಗೆ ಹೋಗಿ ಅವರ ಹೆಂಡತಿಯು ಹತ್ತಿರ ಪಿಟಲು ಬಾರಿಸು. ಗಂಡನು ವಿಲಾಯತಿಗೆ ಪೋಗಿಬಂದು ದಕ್ಕೆ ಜಾತಿ ಕಟ್ಟಾಗುತ್ತದೆ–ಎಂದು. ನಾನೂ ಬಹಳ ಹೇಳಿದ್ದೆ ಅವರಿಗೆ. ಅವರೆಲ್ಲ ಲಕ್ಷ್ಯಮಾಡುವುದಿಲ್ಲ ಈಗ ಮನೆಯು ಹೆಂಗುಸರನ್ನು ಹಿಡಿದು ಬೀಗ ತಿರುಗಿಸಬೇಕು ಇವರು ಜಾತಿ ಗೀತಿ ಕಾಣುವಹಾಗಿಲ್ಲ ಮೊನ್ನೆ ಸ್ವತಃ ನಾನೇ ಅಂದೆ ಅವರಿಗೆ– ತಾವು ೫೦೦೦ದಷ್ಟಾದರೂ ದಂಡಕೊಡುವುದಾದರೆ ಪ್ರಸಾದ ಕೊಡಿಸುವ–ಎಂದು. ಅವರನ್ನುತ್ತಾರಂತೆ: "೫೦೦೦ ಕಾಸು ಸಹ ಸಿಗಲಾರದೆ"ಂದು.

**ಏಕಾಕ್ಷಿ**:— ಹೋಗಲಿ, ನಮಗೇನು? ಜಾತಿಯಿಂದ ಹೊರಗಿರಿಸಿದ ರಾಯಿತು.

**ಭಾನು**: —ಅವರಿಗೆ ಜಾತಿಯೇನು ಬೇಕು? ಅವರು ಈಗ ಹೊರಗೆ ಹೋಗುತ್ತಾರೆ. ಹಾಗೆ ಅಂಥವರನ್ನೆಲ್ಲ ಸಿಟ್ಟುಗೊಳಿಸಬಾರದು. ಮುಖ್ಯ, ನಾವು ಸಾಮದಿಂದಲೇ ಕೆಲಸಮಾಡಬೇಕು. ೮–೧೦,೦೦೦ ರೂಪಾಯಿಯಾಗಬೇಕಲ್ಲ ಮಹಾರಾಯ. ಆ ಪುಣ್ಯಾತ್ಮ ೫೦೦೦ ಕೊಡುತ್ತಿದ್ದರೆ . . .

**ಅಶ್ವತ್ಥ**:— ನಿನ್ನೆ ಒಬ್ಬ ಯಾತ್ರಿಕನು ನಮ್ಮಲ್ಲಿಗೆ ಬಂದಿದ್ದ. ಈಗಲೂ ಇಲ್ಲೇ ಹೊಲಗೇರಿಯ ಹತ್ತಿರ ತಿರುಗುತ್ತಿದ್ದಾನಂತೆ ಅವನು ನಮ್ಮೂರಿನವನಾಗಿದ್ದರೆ ಚೆನ್ನಾಗಿ ದಂಡಹಾಕಿಸಬಹುದಿತ್ತು. ಹೊಲೆಯರೊಂದಿಗೆ ಊಟಮಾಡಿದ್ದಾನೆ ಎಂದರೆ ಕೇಳುವವ ರಾರು?

**ಭಾನು:**— ಮುಖ್ಯ ಅಂಥವರು ಸಿಗಬೇಕು ಆದರೆ ಅವನು ನಮ್ಮೂರಿನವನೇ?

**ಅಶ್ವತ್ಥ:**— ಅಲ್ಲಪ್ಪ. ಅವನು ನಿನ್ನೆ ಬಂದ ಭಾವಾಜಿ. ಗಡ್ಡದವನು, ಯಾತ್ರಿಕ

**ಏಕಾಕ್ಷಿ:**— ಯಾರು? 'ದೇವರಿಲ್ಲ' - ಎಂದವನೇ? ಗುಡಿಯೊಳಕ್ಕಿರುವ ನಾವೆಲ್ಲರು ಕಳ್ಳರು, ಮೋಟಗಾರರು ಎಂದವನೇ?

**ಭಾನು:**— ಏನು, ಯಾರು ಹಾಗೆಂದವರು? ಅಯ್ಯೋ, ನನಗೆ ಹೇಳಲಿಲ್ಲವೇಕೆ? ಅವನಿಗೆ ದಂಡಹಾಕಿಸುವುದಿಷ್ಟೆ ಅಲ್ಲ, ಅವನ ಸೊಂಟದ ಕೀಲನ್ನು . . . .

**ಏಕಾಕ್ಷಿ:**— ಅಷ್ಟು ಮಾಡಬೇಕು. ಇನ್ನಾದರೂ ತೊಂದರೆಯಿಲ್ಲ. ಈಗಷ್ಟೆ ನನಗೆ ನಿಮ್ಮ ಸಣ್ಣಪ್ಪ ಭಟ್ಟ ಸಿಕ್ಕಿದ ಅವನು ಹೇಳಿದನು: ಈ ಗಡ್ಡದವನ ಕಥೆಯನ್ನು. ಸ್ವಲ್ಪ ಮೊದಲು ಒಬ್ಬ ಹೊಲೆಯರ ಹುಡುಗನನ್ನು ಎತ್ತಿಕೊಂಡು, ನದಿತೀರ್ಥ ಅವನಿಗೆ ಕುಡಿಸಿರಿ ಎಂದು ಚೇಷ್ಟೆಮಾಡುತ್ತಿದ್ದನಂತೆ. ಅವನನ್ನು ಕಲ್ಲಿಂದ ಹೊಡೆದೇ ಓಡಿಸಬೇಕಿತ್ತು.

**ಭಾನು:**— ಒಂದು ಒಳ್ಳೆಯ ಉಪಾಯವನ್ನು ಮಾಡುವ. ಅವನು ದೇವಾಲಯದ ಒಳಗೆ ಬಂದಿದ್ದನೇ?

**ಏಕಾಕ್ಷಿ:** - ನನಗೆ ದಕ್ಷಿಣೆ ಕೊಡುವುದಿಲ್ಲವೆಂದು ಹೇಳಿ, ಓಡಿಹೋಗಿ, ಅಲ್ಲಿ ನೋಡಿಕೊಂಡು ಬಂದು, ಇಷ್ಟು ಅಂದವನು ಅವನು.

**ಭಾನು:**— ಹಾಗಾದರೆ ಸಿಕ್ಕಿತಲ್ಲ ಒಂದು ನೆಪ. ನಾಳೆ ಸ್ವಾಮಿರಾಯರ ಎದುರಿಗೆ ತನಖಿಗೆ ಇರಿಸುವ. ಅವನು ಹೊಲೆಯರನ್ನು ಮುಟ್ಟಿಕೊಂಡು ಬಂದು ಗುಡಿಯನ್ನು ಭ್ರಷ್ಟಮಾಡಿದ, ಅದರ ಶುದ್ಧಿಗೆ ೫೦೦೦ ಬೇಕು ಎಂದು ಹೇಳುವ.

**ಅಶ್ವತ್ಥ**:— ಹಾಗೆಯೇ 'ತೀರ್ಥಕೊಡು' ಎಂದುದಕ್ಕೆ.

**ಭಾನು**:— ಯಾವ ಊರಿನವನೋ ಏನೋ. ಇದಾದರೆ ನಮ್ಮ ಕೈಯಲ್ಲಿದೆ. ಸಾಕ್ಷಿಗೆ ಆ ಸಣ್ಣಪ್ಪನಿಗೆ ಸಿದ್ಧನಿರು ಎನ್ನು.

**ಏಕಾಕ್ಷಿ**:— ಆದರೆ, ಅವನು ಗುಡಿಯೊಳಕ್ಕೆ ಬಂದದ್ದು ಬೆಳಿಗ್ಗೆ. ಇದಾದದ್ದು ಈಗ ಒಂದು ಗಳಿಗೆಯ ಹಿಂದೆ. ಇಲ್ಲೇ ಆಚೆ, ಆ ಮಾವಿನ ಮರದ ಬುಡದಲ್ಲಿ

**ಭಾನು**:— ಅದಕ್ಕೇನಾಗಬೇಕು? ಅವನು ಹೊಲೆಯರನ್ನು ಮುಟ್ಟಿದ್ದು ಹೌದಲ್ಲವೋ?

**ಏಕಾಕ್ಷಿ**:— ಹೌದಪ್ಪ, ನಮ್ಮ ಸಣ್ಣಪ್ಪ ಭಟ್ಟ ಸುಳ್ಳುಹೇಳುತ್ತಾನೆಯೇ, ಪಾರುಪತ್ಯಗಾರರೇ?

**ಭಾನು**:— ಹಾಗಾದರೆ ಅವನಿಂದೊಂದು ಸಾಕ್ಷಿಯನ್ನು ತಯಾರು ಮಾಡು. ಅವನು ಹೀಗೆಲ್ಲಾ ಮಾಡಿದುದು ಬೆಳಿಗ್ಗೆ ಎಂದು. ಅದರ ಮೇಲೆ ಸ್ನಾನ ಸಹ ಮಾಡದೆ ಗುಡಿಯೊಳಗೆ ಬಂದನೆಂದು. ಆ ಮನುಷ್ಯನು ಎಲ್ಲಿದ್ದಾನೆ? ಅವನನ್ನು ಹಿಡಿದು ಕಟ್ಟಿತನ್ನಿ. ಏನೂ ತೊಂದರೆಯಿಲ್ಲ. ನಾಳೆ ಖಾವಂದರೆದುರಿಗೆ ಚೆನ್ನಾಗಿ ವಿಚಾರಣೆಮಾಡಬೇಕು.

**ಅಶ್ವತ್ಥ**:— ಇಷ್ಟೆಲ್ಲ ಗದ್ದಲಮಾಡಿ, ಅವನ ಹತ್ತಿರ ಕಾಸಿಲ್ಲದಿದ್ದರೆ . . ?

**ಭಾನು**:— ಅದೊಂದು ನಿಜ. ಏ ಏಕಾಕ್ಷಿ, ಅವನು ಬಡವನೋ, ಶ್ರೀಮಂತನೋ? ಯಾವ ಜಾತಿಯವನು? ಏನಾದರೂ ತಿಳಿಯಿತೇ?

**ಏಕಾಕ್ಷಿ**:— ಅದು ಅರೆಸಮಾಜವಪ್ಪ. ತನಗೆ ಜಾತಿಯಿಲ್ಲವೆಂದನು. 'ತೀರ್ಥಸ್ನಾನ ಮಾಡುವುದಿಲ್ಲ' ಎಂದನು. ದಕ್ಷಿಣೆ 'ಊಹೂಂ' ಎಂದನು. ಅವನು 'ಆರ್ಯ'ನಾದರೆ ಅವನ ಹತ್ತಿರ ಹಣವಿರ

ಬೇಕು. ಇಲ್ಲವಾದರೆ, ಅವನ ಜಾತಿಯವರು ಬಿಡಿಸಿಕೊಂಡು ಹೋಗಲಿ ಏನೂ ಆಗದಿದ್ದರೆ ಈ ಜನರ ತಂಟೆಯಾದರೂ ನಿಂತೀತಲ್ಲ

**ಭಾನು:**— ಅದೂ ಸರಿಯೆ. ನೀನು ಹೋಗು. ಮೊದಲು—ಅವನು ಎಲ್ಲಿದ್ದಾನೆ? ಏನು ಹೆಸರು? ಅವನಿಗೆ ಯಾರೆಲ್ಲ ಅನ್ನಹಾಕುತ್ತಾರೆ?–ಎಂದು ತಿಳಿದು ಬಾ ಆಗ ಒಂದು ಉರುಳಿನಿಂದ ಎಲ್ಲರನ್ನು ಎಳೆಯಲಿಕ್ಕೆ ಬರುತ್ತದೆ ಮತ್ತಷ್ಟು ಅನುಕೂಲವಾಯಿತಲ್ಲ. ಅವನು ಈ ಕ್ಷೇತ್ರವನ್ನು ಬಿಡದಂತೆ ನೋಡಿಕೊ ತಿಳಿಯಿತೇ? ಸ್ವಲ್ಪ ಸಂಶಯಬಂದರೆ ನಾನು ಹೇಳಿದ್ದೇನೆಂದು ಪೋಲೀಸರಿಗೆ ತಿಳಿಸು . . . ನಡಿ ನಡಿ. (ಏಕಾಕ್ಷಿಯು ಹೋಗುವನು.)

**ಅಶ್ವತ್ಥ:**— ಅವನದು ಆರ್ಯಸಮಾಜವೋ ಅರೆಮರುಳಸಮಾಜವೋ ದೇವರೇ ಬಲ್ಲ ಅವನು ಹೇಳಿದ ಮಾತು ಕೇಳಿದರೆ ಅವನಿಗೆ ಮರುಳೆಂತಲೂ ಕಾಣುತ್ತದೆ. ಗುಡಿಯೊಳಗೆ ಹೋಗಿ— 'ಇಲ್ಲಿರುವುದು ಅನಾಥ ಬಂಧು ಅಲ್ಲ. ಅನಾಥ ಸ್ವಾಮಿ'— ಎಂದನು. ಇನ್ನೊಮ್ಮೆ ಬಂದು– "ಅನಾಥ ಸ್ವಾಮಿ ವಿಗ್ರಹ ಕೆತ್ತಿದ್ದವನು ನಾನು, ನಾನಿಲ್ಲಿಗೆ ಅದನ್ನು ಕಾಣುವುದಕ್ಕೆ ಬಂದಿದ್ದೇನೆ"—ಎಂದನು. ಮತ್ತೊಮ್ಮೆ—"ಇಲ್ಲಿರುವ ವಿಗ್ರಹ ಯಾವುದು ಏನು?" ಎಂದೆಲ್ಲ ಕೇಳಿದನು ಇದೇನು, ಆಶ್ಚರ್ಯ ಪಡುತ್ತೀರಿ? ಅವನಿಗೆ ಹುಚ್ಚೆಂಬುದಕ್ಕೆ ಸಂಶಯವಿದೆಯೇ? ಅವನು ಹುಚ್ಚನಾದರೆ ಬಿಟ್ಟುಬಿಡುವುದೇ ವಾಸಿಯಲ್ಲವೆ!

**ಭಾನು:**— ಏ ಅಶ್ವತ್ಥ, ನೀನೆನ್ನುವ ಸಂಗತಿಯನ್ನು ಕೇಳಿದರೆ, ನನಗೆ ಭಾರಿ ಸಂಶಯ ಬರುತ್ತದೆ.

**ಅಶ್ವತ್ಥ:**— ಅವನು ಹುಚ್ಚನೆಂತಲೇ?

**ಭಾನು:**— ಅಲ್ಲವಯ್ಯ, ನಮ್ಮ ಸ್ವಾಮಿರಾಯರಿಗೆ ಈ ಸುದ್ದಿಯನ್ನು ಮುಟ್ಟಿಸಬೇಕು. ಏನೋ ಆಪತ್ತು ಈ ಕ್ಷೇತ್ರಕ್ಕೆ ಬರುವ ಹಾಗಿದೆ. "ಅನಾಥ ಬಂಧುವಿನ ವಿಗ್ರಹ ಯಾವ ದಿವಸ ಇಲ್ಲಿ ಶೋಧೆ ಆಗುತ್ತದೋ ಆ ದಿನ ನಿಮ್ಮ ಆಟ ಮುಗಿಯಿತು—" ಎಂದು ಹಿರಿಯರಿಂದ ಬಂದೊಂದು ಶಾಪವಿದೆಯಂತೆ ಅದರ ಅರ್ಥ ತಮಗೂ ಗೊತ್ತಿಲ್ಲವೆನ್ನುತ್ತಿದ್ದರು. ಅಂತು ಕೇಳುವಾಗ...

**ಅಶ್ವತ್ಥ:**— ಮತ್ತೇನಿಲ್ಲವೇ? ದೇವರ ಪೂಜೆಮಾಡುವ ಭಕ್ತರಿಗೆ ಅವನ ಶಾಪವೇ? ಯಾರೋ ನಿಮ್ಮನ್ನು ಬೆದರಿಸಲಿಕ್ಕೆ ಹಾಗೆ ಹೇಳಿರಬೇಕು.

**ಭಾನು:**— ಅದು ಇಂದಿನ ಶಾಪವಲ್ಲವೋ. . . . . ಬಹಳ ಬಹಳ ವರುಷವಾಯಿತು. ಇದುವರೆಗೆ ಯಾರೂ ಹಾಗೆ ಬಂದವರಿಲ್ಲ.. ಅಂತು ಸಂಗತಿ ಮಾತ್ರ ಇಷ್ಟು ನಿಜ— ಪ್ರತಿ ಸ್ವಾಮಿರಾಯರಿಗೂ ಪಟ್ಟವಾಗುವಾಗ ಈ ಮಾತನ್ನು ಹೇಳಿಯೇ ಪಟ್ಟಕೊಡುತ್ತಿದ್ದಾರು. ಏನೂ ಇರಲಿ, ಅವನೆಂಥವನೇ ಇರಲಿ; ನೀವು ಅವನನ್ನು ಹಿಡಿದು, ತಿರುಗಿ ಅವನು ಅಂಥ ಮಾತೆತ್ತದ ಹಾಗೆ ಮಾಡಬೇಕು. ತಿಳಿಯಿತೇ? ಇಷ್ಟರ ವರೆಗೆ ಅವನು ಹುಚ್ಚನೆಂದು ತಿಳಿದಿದ್ದರೆ, ಈಗ ವೈರಿಯೆಂದು ತಿಳಿಯಬೇಕಾಯಿತು ಎಚ್ಚರ, ಏನು!

**ಅಶ್ವತ್ಥ:**— ನೋಡಿ ಸ್ವಾಮಿ. ಸಣ್ಣಪ್ಪ ಭಟ್ಟ ಅಲ್ಲೇ ಹೋಗುತ್ತಿದ್ದಾನೆ ಅವನನ್ನು ಕರೆಯಲೇ?

**ಭಾನು:**— ಏ ಸಣ್ಣಪ್ಪ, ಇಲ್ಲಿ ಬಾರಯ್ಯ

(ಸಣ್ಣಪ್ಪನು ಬಂದು ನಮಸ್ಕರಿಸುವನು.)

**ಭಾನು:**— ಏ ಸಣ್ಣಪ್ಪ, ನಾಳೆ ನಿನ್ನಿಂದೊಂದು ಕೆಲಸ ಆಗಬೇಕು. ನೀನೊಂದು ಸಾಕಿ ಹೇಳಬೇಕು ಏನು? ಸ್ವಾಮಿರಾಯರ ಮುಂದೆ

ಎಲ್ಲಾ ಆಚಾರವಿಚಾರವಾಗುವಾಗ, ನೀನು, ಆ ಭಾವಾಜಿ ಯುವನೋ, ಗಡ್ಡದವನೋ, ಅವನ ಮೇಲೆ ಒಂದು ಸಾಕ್ಷಿ ಹೇಳ ಬೇಕು — ತಿಳಿಯಿತೇ?

**ಸಣ್ಣಪ್ಪ:**— ಯಾರು? ಆ ಹೊಲೆಯ ಭಾವಾಜಿಯೋ? ಗಡ್ಡದವನೇ? ಹೊಲೆಯರ ಪಿಳ್ಳೆಗೆ ತೀರ್ಥಕೊಡು— ಎಂದು ನನ್ನನ್ನು ಅವ ಮಾನಿಸಿದವನೇ? ನಾನಾಗಿ ಈ ಸುದ್ದಿಯನ್ನು ನಿಮಗೆ ಹೇಳ ಬೇಕು ಎಂದಿದ್ದೆ. ನಿಮಗೂ ತಿಳಿಯಿತು. ಅಲ್ಲ, ಆ ಮುಂಡೇ ಗಂಡನ ಎದೆಧೈರ್ಯವೇ! ಹೊಲೆಯನ ಸೇವೆ ನಾನು ಮಾಡ ಬೇಕಂತೆ; ಗಾಳಿಹಾಕಬೇಕಂತೆ, ನೀರು ಕುಡಿಸಬೇಕಂತೆ! ಬೇರೆ ಸ್ಥಳವಾಗಿದ್ದರೆ ಅವನ ಹಲ್ಲನ್ನು ಮುರಿದಿಡುತ್ತಿದ್ದೆ. ಹಾಂ, ಕೊನೆಗೆ ನಿಮಗೂ ಸುದ್ದಿ ಮುಟ್ಟಿತು. ಏನು ಮಾಡಲಿ ಅವನನ್ನು . . . . . . ?

**ಅಶ್ವತ್ಥ:**— ಸಣ್ಣಪ್ಪ ಎಂದರೆ ಸಣ್ಣಪ್ಪ. ಥೇಟು ವಿಶ್ವಾಮಿತ್ರ. ಇವ ನೆದುರಿಗೆ ಅವನ ಆಟವೇ? ಸಣ್ಣಪ್ಪ, ಅವನ ವಿಷಯ ವನ್ನೇ ನಾವು ಮಾತನಾಡುತ್ತಿರುವುದು. ಹೇಗಾದರೂ ಮಾಡಿ ನಾಳೆ ಅವನನ್ನು ಸ್ವಾಮಿರಾಯರ ಮುಂದೆ ತರುತ್ತಾರೆ. ಆಗ ನೀನು . . . .

**ಸಣ್ಣಪ್ಪ:**— ಅವನು ಯಾವ ಊರಿನವನೋ ಏನೋ . . . . ಅವನಿಗೆ ಅದು ದಂಡನೆಯಲ್ಲ. ಕಲ್ಲಿಂದಲೇ ಹೊಡೆಯಬೇಕು.

**ಭಾನು:**—ಹಾಗಲ್ಲವೋ; ಅವನು ಗುಡಿಯೊಳಕ್ಕೆ ಬೆಳಿಗ್ಗೆ ಬಂದಿದ್ದ ನಂತೆ. ಹೊಲೆಯರನ್ನು ಮುಟ್ಟಿದುದನ್ನು ನೀನು ಕಂಡೆಯಷ್ಟೆ. ಕಂಡು ಎಷ್ಟು ಹೊತ್ತಾಯಿತು?

**ಸಣ್ಣಪ್ಪ:** — ಒಂದು ಗಳಿಗೆ ಪೂರ್ಣ ಆಗಿಲ್ಲ

**ಭಾನು:**— ಗುಟ್ಟು ಇಷ್ಟೆ— ಸ್ವಾಮಿರಾಯರ ಎದುರು ಹೇಳುವಾಗ, ಅವನು ಹೊಲೆಯರನ್ನು ಮುಟ್ಟಿ ಗುಡಿಯೊಳಕ್ಕೆ ಬಂದದ್ದು ಎನ್ನ ಬೇಕು. ಆಗ ದೇವಸ್ಥಾನ ಭ್ರಷ್ಟವಾಯಿತೆಂದು ಅವನನ್ನು ದಂಡಿ ಸಲಿಕ್ಕೆ ಬರುತ್ತದೆ. ಏನು ತಿಳಿಯಿತೇ? ನಿನ್ನದೇ ಸಾಕ್ಷಿ . . . ತಿಳಿಯಿತೇ?

**ಸಣ್ಣಪ್ಪ:**— ನನ್ನ ಆಸೆ ಬಿಡಿ ಸ್ವಾಮಿ. ಆ ಮುಂಡೇಗಂಡನು ಬೆಳಿಗ್ಗೆ ಅವರೊಟ್ಟಿಗೆ ಊಟಮಾಡಿದ್ದಾನೆ ಎಂದು ನಾನು ಸಾಕ್ಷಿ ಹೇಳಿದ ರಾಯಿತಲ್ಲ.

**ಭಾನು:**— ಅದಾದರೆ ಮತ್ತೂ ಒಳ್ಳೆಯದಾಯಿತು.

**ಸಣ್ಣಪ್ಪ:**— ಅದನ್ನು ನನಗೆ ಬಿಡಿ. ಬೇಕಾದರೆ, ನಾಲ್ಕು ಹೊಲೆ ಯರ ಪಿಳ್ಳೆಗಳನ್ನು ಹೆದರಿಸಿ, ಅವರಿಂದಲೂ ಸಾಕ್ಷಿಹೇಳಿಸುವ ಕೆಲಸ ನನ್ನದು

---

# ಅಂಕ ೩.

(ದೇವಾಲಯದ ಒಂದು ವಿಶಾಲವಾದ ಚಾವಡಿ. ಒಂದು ಕಡೆಯಲ್ಲಿ ಸ್ವಾಮಿರಾಯರ ನಿತ್ಯಪೂಜೆಯ ಮಂಟಪ. ಅದರ ಎದುರು ಚಿನ್ನ ಬೆಳ್ಳಿಯ, ಆಡಂಬರಪೂರಿತವಾದ ಪೂಜಾ ಸಾಮಗ್ರಿಗಳು. ಮಗ್ಗುಲಲ್ಲಿ ಸ್ವಾಮಿರಾಯರು ಕುಳಿತುಕೊಳ್ಳಲು ಕೃಷ್ಣಾಜಿನ . . . . . ಮಾತನಾಡುತ್ತ ಭಾನುಕೋಟಿ ಆಚಾರ್ಯರೂ ಏಕಾಕ್ಷಿಯೂ ಪ್ರವೇಶಿಸುವರು)

**ಏಕಾಕ್ಷಿ**:— ಸ್ವಾಮಿ, ಆಚಾರ್ಯರೇ, ಒಂದು ನಿಮಿಷದ ಮಾತಿಗೆ ನಿಮ್ಮನ್ನು ಕಾಣಲು ಬರಬಹುದೇ ಎಂದು ಚಂದ್ರಿ ಕೇಳಿದಳು.

**ಭಾನು**:— ಯಾರು, ಚಂದ್ರಿಯೇ? ಬರಲಿ, ಬರಲಿ. ಅವಳು ಬರಲು ಕೇಳಬೇಕೇನು?

**ಏಕಾಕ್ಷಿ**:— ಏನೋ, ಶ್ರೀಪಾದಂಗಳವರು ಬರುತ್ತಾರೆ ಎಂಬುದರಿಂದ ಅವಳು ಹಿಂಜರಿದಿರಬೇಕು.

**ಭಾನು**:— ಖಾವಂದರಿಗೆ ಸಲ್ಲದ್ದನ್ನು ನಾವೇನು ಮಾಡುತ್ತೇವೆ? ಆದರೂ ಏಕಾಕ್ಷಿ, ಚಂದ್ರಿಯನ್ನು ಕರೆದವನೇ ಹೊರಗಿನಿಂದ ಬಾಗಿಲು ಹಾಕಿದರೂ ಸರಿಯೆ, ಕಾದುನಿಂತರೂ ಸರಿಯೆ— ಏನು? ಹೇಗೂ ಸಭೆ ಸೇರಲಿಕ್ಕೂ, ಸ್ವಾಮಿಯವರು ಚಿತ್ತೈಸಲಿಕ್ಕೂ ತುಸು ಹೊತ್ತಾಗಬಹುದು.

**ಏಕಾಕ್ಷಿ**:— ಆಯಿತು, ಅವಳನ್ನು ಕಳುಹಿಸಿದರಾಯಿತಲ್ಲ. ನಾನು ಬರಬೇಕೆಂದಿದೆಯೇ?

**ಭಾನು**:— ನೀನು ಅಲ್ಲೇ ನಿಂತಿರು. ಎಲ್ಲಿಗೂ ಹೋಗಬೇಡ ಆ ಸಣ್ಣಪ್ಪ ಭಟ್ಟನು ಬಂದನೋ ನೋಡು ಅವನ ಜತೆಯಲ್ಲಿ ಇನ್ನೂ ಒಂದೆರಡು ಸಾಕ್ಷಿಗಳಿದ್ದರೆ ಒಳಿತು. ಇರಲಿ, ಸದಾಶಿವರಾವ್ ಮೊದಲಾದವರು ಬಂದರೆ ಸುದ್ದಿ ತಿಳಿಸಿಬಿಡು.

**ಏಕಾಕ್ಷಿ**:— ಏನು, ರಾಯರು ಒಪ್ಪಿದರೇ?

**ಭಾನು**:— ಅದರ ವಿಷಯ ಮತ್ತೆ ಹೇಳುತ್ತೇನೆ. ನೀನು ಚಂದ್ರಿಯನ್ನು ಬೇಗ ಕಳುಹಿಸು ವೇಳೆಯಾದರೆ ಸಿಟ್ಟುಗೊಂಡು ಹೊರಟೇಹೋದಾಳು.

**ಏಕಾಕ್ಷಿ**:— ಹೌದಪ್ಪ, ಅವಳೆಂದರೆ ಈಗೀಗ ಸಿಟ್ಟಿನ ಮೂರ್ತಿಯಾಗಿದ್ದಾಳೆ. ಆಚಾರ್ಯರೇ, ನೀವೇ ಸಲಿಗೆಕೊಟ್ಟು ಅವಳನ್ನು ಹಾಗೆ ಬೆಳೆಸಿದವರು

**ಭಾನು**·–ಸುಮ್ಮನಿರು ಮಂಕ ಚಂದ್ರಿಯ ಗುಣ ನಿನಗೇನು ಗೊತ್ತು? ಹೊರಗೆ ಬೆಂಕಿಯ ಹಾಗೆ ಇದ್ದರೆ, ಒಳಗೆ ಚಂದನದ ಕೊರಡು ಅವಳು. ಹೋಗು, ಹೋಗು . . . . (ತೆರಳುವನು.)

ಈ ಹುಡುಗಿಗೆ ನೂರು ಸಾರಿ ಹೇಳಿದರೂ ಕೇಳುವುದಿಲ್ಲ ದೇವರ ಚಿನ್ನವೆಲ್ಲ ತನಗೆ ಬೇಕು ಎಂದರೆ ಹೇಗೆ ನಡೆದೀತು! ಅವಳೆನ್ನುವ ಹಾಗೆ ದೇವರಿಗೆ ಏತಕ್ಕೆ ಚಿನ್ನ? ಅದೂ ನಿಜ; ಆದರೂ ಕಾಣುವವರು ಬರುವಾಗಲಾದರೂ ದೇವರ ಮೈತುಂಬಾ ಚಿನ್ನವಿಲ್ಲದಿದ್ದರೆ ನಾನು ಕಳ್ಳನಾದೇನಲ್ಲ. ಈ ಒಂದು ಹಟಕ್ಕಾಗಿ, ನನಗೆ ಚಂದ್ರಿಯನ್ನು ಕಂಡರೆ ಬೇಸರವಾಗುವುದು.

(ಚಂದ್ರಿಯು ವೇಶ್ಯೆ. ತನ್ನ ಕುಲವೃತ್ತಿಗೆ ಅನುಕೂಲವಾದ ವೇಷಭೂಷಣಗಳಿಂದಲೇ ಬರುವಳು ಮೋರೆಯು ಮಾತ್ರ ತೀರ ಸಿಟ್ಟಿನಿಂದ ಉರಿಯುವಂತಿದೆ.)

ಏನು? ಒಂದು ಗಳಿಗೆಯಾದರೂ ನಗಬಾರದೆಂದು ಪ್ರತಿಜ್ಞೆ ಇದೆಯೇನು? ಇನ್ನೂ ಹೊತ್ತು ಮೂಡಿ ಬಿಸಲು ಬೀಳಲಿಲ್ಲ. ಅಷ್ಟರೊಳಗೇ ಮುಖ ಉರಿಯತೊಡಗಿದೆ.

**ಚಂದ್ರಿ:**— ಹೌದು, ಮುಖ ಉರಿಯದೆ ಏನಾಗುತ್ತದೆ? ನಿಮ್ಮಂಥವರಿಗೆಲ್ಲ ನಾವು ದೂರಾದ ಮೇಲೆ. ಈಗಲೂ ಬರುವುದಕ್ಕೆ ರಾಯರ ಅನುಮತಿ ಸಿಗುತ್ತದೆಯೋ ಇಲ್ಲವೋ ಎಂದು ತಿಳಿದಿದ್ದೆ.

**ಭಾನು:** — ನೀನು ಬರಲಿಕ್ಕೆ ಅಪ್ಪಣೆ, ಅನುಮತಿ, ಪರವಾನಗಿ ಇಷ್ಟೆಲ್ಲಾ ಕೇಳಬೇಕೆ?

**ಚಂದ್ರಿ:** — ಮೊದಲಿನ ಕಾಲವಾದರೆ ಎಲ್ಲವೂ ಸರಿ. ಆದರೆ ಈಗ ನಿಮ್ಮ ಧೋರಣೆಯೇ ಬದಲಾಗಿದೆ.

**ಭಾನು:** — ಏನು ಬದಲಾಗಿದೆ?

**ಚಂದ್ರಿ:** — ಬದಲಾಗದಿದ್ದರೆ, ನೀವು ಎಂಟು ದಿವಸ ಹೀಗೆ ನಮ್ಮ ಮನೆಯ ಜಗುಲಿಯನ್ನು ಸಹ ಕಾಣದಿರುತ್ತಿದ್ದಿರೇ?

**ಭಾನು:** — ಅಲ್ಲ, ನೀನು ಹೇಗೂ ಇಲ್ಲಿಗೆ ಬರುತ್ತೀ.

**ಚಂದ್ರಿ:** — ಹಾಗೆಯೇ ನಿತ್ಯದ ಊಟಕ್ಕೂ ತೊಂದರೆ ಇಲ್ಲದಂತೆ ಕಳುಹಿಸಿ ಕೊಡುತ್ತೀರಿ. ಅಷ್ಟಿದ್ದ ಮೇಲೆ ಅಶನಾರ್ಥ ತಿಂದು ಸುಮ್ಮನಿರಬಹುದು. ಆ ಮಾತು ನಿಜ.

**ಭಾನು:** – ಅಯ್ಯೋ ದೇವರೆ, ಒಂದಕ್ಕೆ ಒಂದೂವರೆ ಮಾಡುತ್ತೀಯಲ್ಲ. ನಾಲ್ಕು ದಿನ ಬರಲಿಕ್ಕೆ ಆಗಲಿಲ್ಲ ಎಂಬುದಕ್ಕೆ ಇಷ್ಟೆಲ್ಲ ಸಿಟ್ಟೇ? ಖಾವಂದರು ಬರುತ್ತಾರೆ ಎಂಬುದು ನಿನಗೆ ಗೊತ್ತು, ಏನೆಲ್ಲಾ ಗಡಿಬಿಡಿಯಲ್ಲಿ ನಾನಿದ್ದೇನೆ ಎಂದೂ ಗೊತ್ತು ನಿತ್ಯವೂ ಮಠಕ್ಕೆ ಬರುತ್ತಿರುವೆ ಇವತ್ತು ಒಂದು ದಿವಸದೊಳಗೆ ೧೦,೦೦೦ಕ್ಕೆ ಕಡಿಮೆ ವರಮಾನವಾದರೆ ರಾಯರ ದೃಷ್ಟಿಯೇ ವಕ್ರವಾದೀತು ನನ್ನ ಮೇಲೆ. ನಾಳೆ ನನ್ನನ್ನು ಹೊರಡಿಸಿದರೆ ಏನು ಗತಿ! ಸಾಲದುದಕ್ಕೆ, ಈ ಭಾನುಕೋಟಿಯನ್ನು ಓಡಿಸಿ ತಾವು ದರ್ಬಾರು ನಡೆಸಬೇಕೆಂದು ಬೇಳೆಗೆ ನೀರು ಹಾಕಿ ಕುಳಿತವರು ಎಷ್ಟು ಜನ

ರಿದ್ದಾರೆ. ನೀನು ಸುಮ್ಮನೆ ಸಿಟ್ಟಾದರೆ ನಾನೇನು ಮಾಡಲಿ ಚಂದ್ರಿ? ಅಂತು, ನಾನು ಬರಲಿಲ್ಲವೆಂದು ತಿಳಿದು ನೀನಾದರೂ ಬಂದೆಯಲ್ಲ

**ಚಂದ್ರಿ:**— ಬರಬೇಕಾಯಿತು. ತಿರುಗಿ ನಿಮಗೆ ನೆನಪು ಹೆಚ್ಚುಕಡಿಮೆಯಾದರೆ?

**ಭಾನು:**— ಇದೇನು ಪ್ರಸಂಗ?

**ಚಂದ್ರಿ:**— ಹಾ, ಮರೆತುಹೋಯಿತೇ! ಸರಿಯಾಯಿತು.

**ಭಾನು:**— ಇಲ್ಲ, ನಿಜಕ್ಕೂ ನೆನಪಿಲ್ಲ ಸ್ವಲ್ಪ ಹೇಳಬಾರದೇ? ಈ ನೂರೊಂದು ತಾಪತ್ರಯದಲ್ಲಿ ಎಷ್ಟೆಲ್ಲ ನೆನಪಿರಿಸಿಕೊಳ್ಳುವುದು?

**ಚಂದ್ರಿ:**— ಆ ತಾಪತ್ರಯ ಕಳೆದಮೇಲೆ ಚಂದ್ರಿಯ ನೆನಪಾದೀತು. ಆಗಲಿ, ಹಾಗಾದರೆ ಈಗ ಹೊರಡುತ್ತೇನೆ.

**ಭಾನು:**—ಅಯ್ಯಯ್ಯೋ, ನೀನು ಸಿಟ್ಟಾದರೆ ಗತಿಯೇನು? ಏನು ಎಂದು ಹೇಳಬಾರದೇ? ನಿನ್ನ ಯಾವ ಮಾತನ್ನು ನಾನು ತೆಗೆದು ಹಾಕಿದ್ದೇನಂತೆ!

**ಚಂದ್ರಿ:**— ತೆಗೆದುಹಾಕಲೂ ಇಲ್ಲ; ಹೇಳಿದಂತೆ ಮಾಡಲೂ ಇಲ್ಲ ನೂರೊಂದು ಸಲವಾಯಿತು ನಾನೆಂದದ್ದು: ಸ್ವಾಮಿಯವರು ಬರುವ ಮೊದಲೇ ಆ ಮುತ್ತಿನ ಸರ ನನಗೆ ತೆಗೆದುಕೊಡಿರಿ ಎಂದು.

**ಭಾನು:**—ನನಗೆ ಅದರ ಯೋಚನೆಯೇ ಇಲ್ಲವೆಂದು ತಿಳಿದೆಯಾ? ಆದರೆ ಸ್ವಾಮಿರಾಯರಿಗೆ ಅದರ ನೆನಪು ಚೆನ್ನಾಗಿ ಉಳಿದಿದೆ. ಎಷ್ಟೆಂದರೂ ಮಠದ ಚಿನ್ನ . . . . ಅವರು ಈ ಸಾರಿ ಬಂದು ಹೋಗಲಿ. ಆ ಮೇಲೆ ಖಂಡಿತ ನಿನಗೆ ತೆಗೆದುಕೊಡುತ್ತೇನೆ.

**ಚಂದ್ರಿ**:—ಇನ್ನೊಂದು ಸಾರಿ ಬಂದಾಗಲಾದರೂ ಅದು ಅವರಿಗೆ ಗೊತ್ತಾಗಲಿಕ್ಕಿಲ್ಲವೆ?

**ಭಾನು**:—ಇನ್ನೊಂದು ಸಾರಿ ಬರುವುದೆಂದರೆ ಎಂದೋ ಏನೋ. ಅಷ್ಟರೊಳಗೆ ಏನಾದರೂ ಉಪಾಯಮಾಡಿದರಾಯಿತು.

**ಚಂದ್ರಿ**:—ಅದೆಲ್ಲ ಬೇಡ. ಈ ಸಾರಿ ಬಂದವರೇ, ಅವರು ನಿತ್ಯ ಕಟ್ಟಲೆ ಆಭರಣಗಳನ್ನು ಬಿಟ್ಟು ಉಳಿದುವನ್ನು ಒಯ್ಯುತ್ತಾರಂತೆ. ಆದುದರಿಂದ ಅದನ್ನು ಈಗಲೇ ತೆಗೆಯುವುದು ವಾಸಿ . . . . ಇಗೊಳ್ಳಿ, ಈ ಬನಾವಟ ಮುತ್ತಿನಹಾರ ಅಲ್ಲಿರಿಸಿ ಅದನ್ನು ತಂದುಕೊಡಿರಿ . . . . ಅಂದರೆ ಸ್ವಾಮಿಯವರಿಗಲ್ಲ, ಅವರಪ್ಪನಿಗೂ ಗೊತ್ತಾಗಲಿಕ್ಕಿಲ್ಲ.

(ಭಾನುಕೋಟಿಯು ಅಂಜಿಕೆಯನ್ನು ತೋರುವನು)

ಅಷ್ಟಕ್ಕೆ ಹೆದರಿಕೆಯೇ! ನಿಮ್ಮಿಂದ ಏನಾದೀತು? ಬೇಡ, ನನ್ನ ಪಾಡು ನನಗೆ, ನಿಮ್ಮ ಪಾಡು ನಿಮಗೆ

**ಭಾನು**:—ಅಯ್ಯೋ ಹೋಗಬೇಡ ಮಹಾರಾಯತಿ; ನಾಲ್ಕು ದಿನ ತಡೆ. ಸ್ವಲ್ಪ ಧೈರ್ಯಮಾಡಿಕೊಳ್ಳುತ್ತೇನೆ. ಏನೂ ಯೋಚನೆ ಮಾಡದೆ ಮುಂದರಿಯುವುದು ಒಳಿತಲ್ಲ.

**ಚಂದ್ರಿ**:—ನಿಮಗೆ ಧೈರ್ಯವಿಲ್ಲದಿದ್ದರೆ ಹೋಯಿತು. ನೀವು ಸುಮ್ಮನಿರಿ. ನಾನು ಬದಲಿಸಿತರುತ್ತೇನೆ. ನಿಮಗೇನು ಭಯ? ನೀವು ಬಾಯಿ ಬಿಡದಿದ್ದರಾಯಿತು. ಏನು—ಇದಕ್ಕಾದರೂ ತೊಂದರೆ ಇದೆಯೇ?

**ಭಾನು**:—ಆಯಿತು, ಮತ್ತೇನೆನ್ನಲಿ? ಬೇಗ ಜಾರಿಸಿ ತೆಗೆದುಕೋ. ಬೇಗ. ಬೇರೆಯಾರಾದರೂ ಕಂಡಾರು . . . ನಡಿ . . . ಇನ್ನಿಲ್ಲವಲ್ಲ ನಿನ್ನ ಸಿಟ್ಟು?

(ಚಂದ್ರಿಯು ಸರವನ್ನು ಕೊಂಡು ಆನಂದದಿಂದ ತೆರಳುವಳು.)

**ಭಾನು:**— ಮುಖ್ಯ ದೇವರಿಗೆ ಯಾವ ಮುತ್ತಾದರೇನು? ಇಮಿಟೇಶನೂ ಒಂದೇ, ತಾಜಾ ಮುತ್ತು ಒಂದೇ. ಚಿನ್ನವೆಂದರೆ ಅವನಿಗೆ ಮಣ್ಣಿಗೆ ಸಮನಲ್ಲವೆ? ನಾವಾದರೆ ಸಂಸಾರಿಗಳು, ನಮಗೆ ತಾಜಾ ಮುತ್ತು ದೊರೆತರೆ ಒಂದು ಸಂತೋಷ.

(ಚಂದ್ರಿಯು ಹಾರವನ್ನು ಬದಲಿಸಿತರುವಳು.)

**ಚಂದ್ರಿ:**— ಆಯಿತು, ಮನೆಗೆ ಹೋಗಿ ಇರಿಸಿಬರಲೇ?

**ಭಾನು:**— ಹೂಂ, ತ್ವರೆಮಾಡು ಬೇಗ ಬಂದುಬಿಡು. ಸ್ವಾಮಿಯವರ ಮುಂದೆ ನಿನ್ನ ನರ್ತನಸೇವೆಯಾಗಲಿ. ಚಂದ್ರಿ, ಬರುವಾಗ ಈ ಸೀರೆ ಬೇಡ; ಆ ನೀಲಸೀರೆಯನ್ನುಟ್ಟುಕೊಂಡು ಬಾ. ಅದನ್ನು ಉಟ್ಟು ಕುಣಿದರೆ ನೀನು ಥೇಟು ನವಿಲಿನ ಹಾಗೆ ಕಾಣಿಸುತ್ತೀ.

**ಚಂದ್ರಿ:**— ಅಲ್ಲವಾದರೂ ನಾನು ನವಿಲೇ ಅಲ್ಲವೆ?

**ಭಾನು:**— ನನ್ನ ಪಾಲಿಗೆ ನೀನು ನಿತ್ಯ ನವಿಲೇ.

(ಚಂದ್ರಿಯು ಹೋಗುವಳು. ಆ ಬಳಿಕ ಏಕಾಕ್ಷಿಯು ಕಾಲಿಂಸುವನು.)

**ಏಕಾಕ್ಷಿ:**-ಏನುಮಾಡಿದಿರಿ ಸ್ವಾಮಿ? ಚಂದ್ರಿ ಬರುವಾಗ ಮುಖಕ್ಕೆ ಗ್ರಹಣ ಹಿಡಿದಿತ್ತು. ಹೋಗುವಾಗ ನಕ್ಕುನಕ್ಕು ಹಾರುತ್ತಿದ್ದಳು. ಅಬ್ಬ— ನೀವೂ ಸಮ, ಅವಳೂ ಸಮ . . . .

**ಭಾನು:**— ಹೋಗಲಿ ಬಿಡು. ರಾಯರು ಬರುವ ಸುದ್ದಿ ಸಿಕ್ಕಿತೇನು?

**ಏಕಾಕ್ಷಿ:**— ಯಾರೋ ಬಂದವರು ಹೇಳಿದರು: ರಾಯರ ಮನೆಯ ಮುಂದೆ ಮೋಟಾರು ನಿಂತಿದೆಯೆಂದು. ಶ್ರೀಪಾದಂಗಳವರೂ ನದಿಸ್ನಾನ ಮುಗಿಸಿ ನಿಂತಿದ್ದಾರಂತೆ. ಬೆಟ್ಟಕ್ಕೆ ಹೋಗಿ ಬಂದರಾಯಿತು. ಆಚಾರ್ಯರೇ, ನೀವು ಈ ಸಾರಿ ಖಂಡಿತವಾಗಿಯೂ ಖಾವಂದರಿಗೆ ಹೇಳಿ ನನ್ನ ವೇತನ ಹೆಚ್ಚಿಸಬೇಕು.

4

**ಭಾನು:** — ಏಕಾ, ನಿನಗೆ ನಾನು ಏನು ಹೇಳಬೇಕು? ಅವರೆದುರಿಗೆ ಯಾವ ಪ್ರಸ್ತಾಪವೂ ಬೇಡ. ಅವರಿಗೆ ಕಾಸೆಂದರೆ ಪ್ರಾಣ. ಈಗ ೧೦,೦೦೦ ಸಿಗದಿದ್ದರೆ ಸಿಟ್ಟಿನಿಂದ ಉರಿದೇಹೋಗುತ್ತಾರೆ. ಅದು ಸಿಗುವ ತನಕ ಅವರ ಹತ್ತಿರ ಖರ್ಚಿನ ಸುದ್ದಿ ಮಾತನಾಡ ಲಿಕ್ಕೆ ಸಾಧ್ಯವಿಲ್ಲ ನಿನಗೆ ಅವರ ಹತ್ತಿರ ಕೇಳಿ ಆಗಬೇಕಾ ಸ್ವೇನು? ದುಡ್ಡೇ ಆಗಬೇಕೆಂದಿದೆಯೇ? ಮನೆಗೆ ಏನು ಸಾಮಾನು ಬೇಕೋ ನನ್ನ ಹತ್ತಿರ ಕೇಳಿ ಒಯ್ಯಬಹುದಲ್ಲ ಮರದ ಸಾಮಾನು ನಿನ್ನದೇ ಅಲ್ಲವೆ?

**ಏಕಾಕ್ಷಿ:** — ಅದು ಹೌದು, ಆದರೆ ಅಷ್ಟಕ್ಕಾದರೂ ನಿಮ್ಮ ಹುಕುಂ ಆಗದಿದ್ದರೆ

**ಭಾನು:** — ಈಗ ಹುಕುಂ ಆಯಿತಲ್ಲ ಅದಿರಲಿ ಆ ಗಡ್ಡದ ಬ್ರಾಹ್ಮ ಣನ ಅವಸ್ಥೆಯೇನಾಯಿತು? ಅವನನ್ನು ಹಿಡಿಯುವ ವ್ಯವಸ್ಥೆ ಮಾಡಿದೆಯೋ? ಅವನ ಹತ್ತಿರ ಹಣಕಾಸೇನಾದರೂ ಇದೆಯೇ? ಅವನು ಯಾವ ಪಂಗಡಕ್ಕೆ ಸೇರಿದವನು ಎಂಗೇನಾದರೂ ತಿಳಿಯಿತೇ? ಅಥವಾ, ಅವನನ್ನು ಯಾರಾರು ಕರೆದು ಅನ್ನ ಹಾಕಿದ್ದಾರೆ— ಇದಾದರೂ ತಿಳಿಯಿತೆ?

**ಏಕಾಕ್ಷಿ:** — ಅವನು, ಎಲ್ಲಿ ಊಟಮಾಡಿದುದೂ ಕಾಣಿಸಲಿಲ್ಲ ಸಣ್ಣಪ್ಪನ ಸಾಕ್ಷಿಯೊಂದು ಬಲವಾಗಿದ್ದರೆ ಸಾಲದೇ?

**ಭಾನು:** — ಅದು ಸಾಕು. ಆದರೆ ಅವನಲ್ಲಿ ಕಾಸಿಲ್ಲದಿದ್ದರೆ ಅವನ ಸ್ನೇಹಿತರಿಂದಾದರೂ ತೆಗೆದುಕೊಳ್ಳಬಹುದಲ್ಲ ದಂಡವನ್ನು.

**ಏಕಾಕ್ಷಿ:** — ಅವನಲ್ಲಿ ಹಣವಿಲ್ಲ ಎನ್ನುವ ಹಾಗಿಲ್ಲ; ಉಂಟೆನ್ನುವ ಹಾಗೂ ಇಲ್ಲ. ಹಣದ ವಿಷಯ ಮಾತನಾಡಿದರೇ ಅವನು ಉತ್ತರವನ್ನು ಕೊಡುವುದಿಲ್ಲ. ಅದನ್ನು ಎಣಿಸಿದರೆ ಗುಪ್ತ

ಧನವಿರಬೇಕು; ಭಾರಿ ಗುಟ್ಟಿನಲ್ಲಿ ಇರಿಸಿರಬೇಕು - ಎಂದು ಕಾಣುತ್ತದೆ.

**ಭಾನು:** — ಹಾಗಾದರೆ ಬರಮಾಡುವ ವಿಚಾರ ಏನು . . . ? ಅವನನ್ನು ಹಿಡಿದು ತರುವ ವ್ಯವಸ್ಥೆಯಾಗಿದೆಯೇ? ಎಲ್ಲಿದ್ದಾನೆ? ಏನು ಕಥೆ?

**ಏಕಾಕ್ಷಿ:** — ನಾನು ಅಷ್ಟಕ್ಕೆಲ್ಲ ಹೋಗಲಿಲ್ಲ. ಅವನಿದ್ದಲ್ಲಿಗೆ ಹೋಗಿ, ಸ್ವಲ್ಪ ಸ್ನೇಹಾಚಾರ ನಟಿಸಿ, ಸ್ವಾಮಿಯವರ ದರುಶನಕ್ಕೆ ಬರುವಂತೆ ಆಮಂತ್ರಿಸಿದ್ದೇನೆ ಸನ್ಯಾಸಿಗಳನ್ನು ಅವನು ಗೌರವಿಸುವ ಹಾಗೆ ಕಾಣುತ್ತದೆ.

ಅವನಿಗೆ ಹಗಲಿರುಳು ಒಂದೇ ಧ್ಯಾನ — 'ಅನಾಥ ಬಂಧು ವಿಗ್ರಹವು' ಬೇಕೆಂದು. ಅವನ ಕಥೆಯೋ ಏನೆಂದು ತಿಳಿಯುವುದಿಲ್ಲ. ಏನೇನೋ ಮಾತನಾಡುತ್ತಾನೆ ಮಾತು ಕೇಳಿದರೆ ವೇದಾಂತಿಯೆಂದು ಕಾಣುತ್ತದೆ. ಆದರೆ — 'ಇಲ್ಲಿ ಅನಾಥೇಶ್ವರನ ಬದಲು ಅನಾಥ ಬಂಧು ಇರಬೇಕು,' 'ನೀವೆಲ್ಲ ಸೇರಿ ನನ್ನ ಇಷ್ಟದೇವತೆಯನ್ನು ಕದ್ದಿರುವಿರಿ; ನನಗೆ ಮರಳಿ ಕೊಡದಿದ್ದರೆ ಹಾಳಾಗುತ್ತೀರಿ' ಎನ್ನುವುದನ್ನು ಕೇಳಿದರೆ ಮಾತ್ರ ಹುಚ್ಚು ಎಂತ ಅನಿಸುತ್ತದೆ. ನಾನು ಅವನಿಗೆ ಅಂದಿದ್ದೇನೆ: 'ಸ್ವಾಮಿಯವರಲ್ಲಿಗೆ ಬಂದರೆ, ಅವರು ಜ್ಞಾನಿಗಳು, ಎಲ್ಲಾ ವಿಷಯ ತಿಳಿದೀತು' — ಎಂದು.

**ಭಾನು:** — ಅದು ಸರಿಯೇ ಆಯಿತು ಎಲ್ಲಾದರೂ ಈ ವಿಚಾರಣೆ ಪ್ರಸ್ತಾಪ ತಿಳಿಸಲಿಲ್ಲವಲ್ಲ.

**ಏಕಾಕ್ಷಿ:** — ಹುಚ್ಚೇ! ಆಚಾರ್ಯರೇ, ಸರ ಸದಾಶಿವರಾಯರು ಬಂದಂತೆ ಕಾಣುತ್ತದೆ. ಮೋಟಾರು ಬಂದಿತು. ಹೋಗುವ, ಹೋಗುವ . . .

4°

(ಇಬ್ಬರೂ ಅವಸರದಿಂದ ಹೊರಡುವರು. ಸದಾಶಿವರಾಯ, ಚಿದಾನಂದರಾಯ, ಸಣ್ಣಪ್ಪ, ಅಶ್ವತ್ಥ ಮೊದಲಾದವರು ಸ್ವಾಮಿರಾಯರ ದರುಶನಕ್ಕಾಗಿ ಬರುವರು. ಆಚಾರ್ಯರು ಅವರನ್ನು ಸ್ವಾಗತ ಮಾಡುವರು.)

**ಭಾನು:**— ಬನ್ನಿ ಸ್ವಾಮಿ, ಸದಾಶಿವರಾಯರೇ, ಹೀಗೆ ಬನ್ನಿ. ಇಲ್ಲ, ಮೇಲಕ್ಕೆ ಬರಬಹುದು; ಏನೂ ಆಕ್ಷೇಪವಿಲ್ಲ ತಾವು ಮೇಲೆ ಬನ್ನಿ ಖಂಡಿತವಾಗಿಯೂ ಆಕ್ಷೇಪವಿಲ್ಲ. ನಾನು ಖಾವಂದರ ಹತ್ತಿರ ಮಾತನಾಡಿರುತ್ತೇನೆ. ಅವರೂ ಸಂತೋಷವನ್ನು ಸೂಚಿಸಿದರು. ಇವತ್ತೆ ತಮಗೆ ಸ್ವಾಮಿರಾಯರಿಂದ ಪ್ರಸಾದ ದೊರೆಯುತ್ತದೆ. (ಎಲ್ಲರೂ ಕುಳಿತುಕೊಳ್ಳುವರು.) ಏಕಾಕ್ಷಿ, ಆ ಮನುಷ್ಯ ಇನ್ನೂ ಬರಲಿಲ್ಲವೆ? ಅವನ ಹೆಸರೇನೆಂದೆ?

**ಏಕಾಕ್ಷಿ:**— ಹೆಸರನ್ನು ನಾನೂ ಮರೆತುಬಿಟ್ಟೆ. ಒಟ್ಟಾರೆ ಸಮಯಕ್ಕೆ ಸರಿಯಾಗಿ ಬಂದರಾಯಿತಲ್ಲ. ನಾನೇ ಹೋಗಿ ಕರೆದುತರುತ್ತೇನೆ. ನೀವು ಮಿಕ್ಕ ಕೆಲಸ ಮುಂದರಿಸಿರಿ. ಇಗೊಳ್ಳಿ, ಆ ಚಿದಾನಂದನ ಮೇಲೆ ಮಾತ್ರ ಕಣ್ಣಿರಲಿ ಹೊಲೆಯರ ನಂಟನವ. ಅವನನ್ನು ಖಂಡಿತಕ್ಕೂ ಜಾತಿಯಿಂದ ಹೊರಕ್ಕಿರಿಸಬೇಕು.

**ಭಾನು:**— ನೀನು ಹೊರಟುಹೋಗುತ್ತೀಯೋ ಇಲ್ಲವೋ. ನಾನಿಲ್ಲ ವೇನಯ್ಯ, ಅದನ್ನೆಲ್ಲ ಸರಿಮಾಡಲು? . . . . ಇರಲಿ, ಅವಳು ಬರಲಿಲ್ಲವೆ?

**ಏಕಾಕ್ಷಿ:**— ಯಾರು, ಚಂದ್ರಿಯೇ? ಬರುವುದಿಲ್ಲವೆಂತೇನು?

**ಭಾನು:**— ಸ್ವಲ್ಪ ಮೆಲ್ಲಗೆ ಮಾತನಾಡು ಚಂದ್ರಿಯಲ್ಲ, ಅವಳಿಗೇನು ಬುದ್ಧಿಯಿಲ್ಲವೆಂದು ತಿಳಿದೆಯಾ? ಅವಳಲ್ಲ ಇವಳು— ಆ ವಿಧವೆಯೋ – ಶಾರದೆ. ಶಾರದಾಂಬ. ನೀನು ಇನ್ನಾದರೂ ಅವಳ ತಂದೆಗೆ ಹೇಳು: ಸುಮ್ಮನೆ ಜಾತಿಯನ್ನು ಕಳೆದುಕೊಳ್ಳ



ಶ್ರೀಪಾದಂಗಳವರು

ಬೇಡಿರಿ— ಎಂದು. ಕನಿಷ್ಠ ೫೦೦ ರೂಪಾಯಿಗಳನ್ನಾದರೂ ಕೊಟ್ಟರೆ ಸ್ವಾಮಿಯವರಿಂದ ಪ್ರಾಯಶ್ಚಿತ್ತ ಕೊಡಿಸುವ ಎಂದು ಹೇಳು. ಹೂಂ, ನಡಿ ನಡಿ. ಬೇಗ ಕರೆದು ತಾ. ಖಾವಂದರು ಬಂದರು. ಎಲ್ಲರೂ ಸ್ವಲ್ಪ ಎದ್ದು ನಿಲ್ಲಿರಿ. ಖಾವಂದರು ಬಂದರು, ಖಾವಂದರು ಬಂದರು.

(ಶ್ರೀಪಾದಂಗಳವರ ಆಗಮನವು ಸಪರಿವಾರ ಸಮೇತವಾಗಿ ಆಗುವುದು.)

**ಅಶ್ವತ್ಥ:**— ಶ್ರೀಮತ್ ಪರಮಹಂಸ ಪರಿವ್ರಾಜಕಾಚಾರ್ಯ, ಸಕಲ ವೇದಸಂಪೂರ್ಣ, ಉಪನಿಷತ್ ವಿದ್ಯಾವಿನಯಪ್ರವೀಣ, ಯೋಗ ಶಾಸ್ತ್ರ ಪಾರಂಗತ, ಶ್ರೀಮತ್ ಪರಮಹಂಸ ಶ್ರೀ ದಿವ್ಯಮಠಾಧೀಶ, ಭಕ್ತೋದ್ಧಾರಕ ಶ್ರೀಮಾನ್ ವೈಷ್ಣವಕುಲ ಪ್ರದೀಪ ಶ್ರೀ ನಿಶ್ಚಲ ಹಂಸ ಶ್ರೀಪಾದವಾದವರೇಣ್ಯ ಜಯಪರಾಕು! ಜಯಪರಾಕು...

(ಶ್ರೀಪಾದಂಗಳವರು ಆಸೀನರಾಗುವರು. ಅವರ ಪಟ್ಟೆಪೀತಾಂಬರ ಗಳು, ತಲೆಯ ಮೇಲೆ ಧರಿಸಿರುವ ಕಿರೀಟಗಳು ಕಣ್ಣು ಕುಕ್ಕುವಂತಿರು ತ್ತದೆ. ಅವರು ಆಸೀನರಾದ ಬಳಿಕ ಉಳಿದವರು ತಮತಮಗೆ ಸರಿ ಯೆನಿಸಿದ ಸ್ಥಳದಲ್ಲಿ ಮಂಡಿತರಾಗುವರು.)

**ಶ್ರೀಪಾದಂಗಳು:**— ನಾರಾಯಣ, ನಾರಾಯಣ.

**ಸಭೆ:**— (ಅಸ್ತವ್ಯಸ್ತವಾಗಿ) ನಾರಾಯಣ, ನಾರಾಯಣ.

(ಭಾನುಕೋಟಿಯು ಉದ್ದಂಡ ನಮಸ್ಕರಿಸುವನು.)

**ಶ್ರೀಪಾದ:**—(ಆಶೀರ್ವದಿಸಿ) ಪಾರುಪತ್ಯಗಾರರೇ, ನಮ್ಮ ಶಿಷ್ಯ ಸಮ ಸ್ತರೂ ಬಂದಿದ್ದಾರೆಯೇ? ವಿಚಾರಿಸಿಯಾಯಿತೇ? ಕುಶಲವೇ!

**ಭಾನು:**— ಅಹುದು ಮಹಾಸ್ವಾಮಿ.

**ಶ್ರೀಪಾದ:**— ನಾರಾಯಣ, ನಾರಾಯಣ.

**ಸಭೆ:**— ನಾರಾಯಣ, ನಾರಾಯಣ.

**ಶ್ರೀಪಾದ:**— ಪಾರುಪತ್ಯಗಾರರೇ, ಶಿಷ್ಯವರ್ಗದ ಅರಿಕೆಯೇನಿದೆ ಎಂದು ವಿಚಾರಿಸಿರಿ. ನಮ್ಮ ಕುಲಧರ್ಮವೆಲ್ಲ ಕಾಲಕಾಲಕ್ಕೆ ಸರಿಯಾಗಿ ನಡೆಯುತ್ತಾ ಇದೆಯಷ್ಟೆ?

**ಭಾನು:**— ಅಂತು ಎಲ್ಲ ಸರಿಯಾಗಿ ಇದ್ದಹಾಗೆ ಇದೆಯೆಂದು ನನ್ನ ಅರಿಕೆ. ಆದರೆ ಒಂದೆರಡು ವಿಷಯಗಳಲ್ಲಿ ವಿಚಾರಣೆಮಾಡುವ ಅಂಶ ಉಳಿದಿದೆ. ಅದು ಯಾವಂದರ ಸನ್ನಿಧಿಯಲ್ಲೇ ಆಗಿದ್ದರೆ..

**ಶ್ರೀಪಾದ:**— ಯಥೋಚಿತ. ನಾರಾಯಣ, ನಾರಾಯಣ.

**ಸಭೆ:**— ನಾರಾಯಣ, ನಾರಾಯಣ.

**ಶ್ರೀಪಾದ:**— ಆ ಸಂಗತಿ ಮಧ್ಯೆಮಧ್ಯೆ ವಿಚಾರಿಸುತ್ತಾ ಇರುವ . . . ಈಗ ಸೇವೆ ನಡೆಯಲು ಆಕ್ಷೇಪವಿಲ್ಲ

(ಒಬ್ಬೊಬ್ಬರಾಗಿ ಶ್ರೀಪಾದಂಗಳವರ ಪಾದಗಳನ್ನು ಪರಿಮಾಣದಲ್ಲಿರಿಸಿ ಅಭಿಷೇಕವನ್ನು ಮಾಡಿ, ಆ ನೀರನ್ನೇ ತೀರ್ಥವೆಂದು ಸ್ವೀಕರಿಸಿ ಕಾಣಿಕೆ ಅರ್ಪಿಸುವರು. ಪಾರುಪತ್ಯಗಾರರು ಕಾಣಿಕೆಯ ಮೊಬಲಗನ್ನು ತೆಗೆದಿರಿಸುವನು. ಸ್ವಾಮಿರಾಯರು ಪ್ರಸಾದವನ್ನು ಅನುಗ್ರಹಿಸು ವರು. ಶಿಷ್ಯರು ಉದ್ದಂಡ ನಮಸ್ಕರಿಸುವರು.)

**ಭಾನು:**—(ಮೊದಲಿಗೆ ಉದ್ದಂಡ ನಮಸ್ಕರಿಸಿ ಕಾಣಿಕೆಯಿತ್ತು) ಏನೋ ಬಡವನ ಅಲ್ಪಸೇವೆ. ಅಳಿಲಭಕ್ತಿ ಮಳಲಸೇವೆಯೆಂಬ ಹಾಗೆ . .

(ವಿಶಾಕ್ಷಿ, ಸಣ್ಣಪ್ಪ, ಕಾಶ್ಯಪ ಶಾರದೆಯರೊಂದಿಗೆ ಪ್ರವೇಶಿಸುವನು.)

**ಕಾಶ್ಯಪ:** – ಇವರೇನು ಸನ್ಯಾಸಿಯವರು?

**ವಿಶಾಕ್ಷಿ:**— ಹೌದು ಸ್ವಾಮಿ ಯತೀಶ್ವರರು ಅವರೆ. ನೋಡಿ: ಏನು ಕಾಂತಿ! ಏನು ತೇಜಸ್ಸು! ಅಪ್ಪಾ, ಬ್ರಹ್ಮತೇಜವೇ ಅವ ತಾರ ರೂಪವಾಗಿ ನಿಂತಹಾಗೆ ಕಾಣುತ್ತದೆ!

**ಕಾಶ್ಯಪ:**— ಆ ಕಿರೀಟ ಪೀತಾಂಬರಗಳ ಕಾಂತಿಯಂತು ಅತಿಶಯ ವಾಗಿದೆ.

**ಏಕಾಕ್ಷಿ:**— ಹೌದಪ್ಪ, ಆ ಕಿರೀಟಕ್ಕೆ ೪೦೦೦ ರೂಪಾಯಿಗಳಿಗೆ ಮಿಕ್ಕಿ ಕ್ರಯ ತಗಲಿದೆ ಅವರು ೨೦೦ ರೂಪಾಯಿಗಳ ಕಡಿಮೆ ಬೆಲೆಯ ಪೀತಾಂಬರ ಉಟ್ಟದ್ದೇ ಇಲ್ಲ ಈ ವರೆಗೆ ಅಂದರೆ ದೊಡ್ಡ ಮಠ . . . ಸಾವಿರಾರು ಶಿಷ್ಯರು . . . ಏನು ಕಡಿಮೆ ಅವರಿಗೆ?

**ಕಾಶ್ಯಪ:**— ದೊಡ್ಡವರು!

**ಅಶ್ವತ್ಥ:**— (ಶ್ರೀಪಾದಂಗಳಿಗೆ ನಮಿಸಿ) ಮಹಾಸ್ವಾಮಿ, ಏನೋ ಬಡವ. ದಾರಿದ್ರ್ಯಾವಸ್ಥೆ. ಕೃಷ್ಣನಲ್ಲಿಗೆ ಸುಧಾಮ ಅವಲಕ್ಕಿ ತಂದ ಹಾಗೆ . . . (ಕಾಣಿಕೆ ಅರ್ಪಿಸುವನು.)

**ಶ್ರೀಪಾದ:**— ಎಷ್ಟಿದೆ ಭಾನು?

**ಭಾನು:** – ನೂರು

**ಶ್ರೀಪಾದ:**— ಅಷ್ಟೆಯೇ?

**ಭಾನು:**— ಪಾಪ. ಏನು ಕೊಟ್ಟಾನು? ಬರೇ ಯಾತ್ರಿಕರಿಂದ ನಾಲ್ಕು ಕಾಸು ಸಿಗಬೇಕು. ಬಡತನ ಮುಖ್ಯ; ಆದರೆ ಬಹಳ ಧರ್ಮಿಷ್ಠ ಕುಟುಂಬವೂ ದೊಡ್ಡದು. ಎರಡು ಹೆಂಡಿರು; ಆರೆಂಟು . . . ಎಷ್ಟೊ?

**ಅಶ್ವತ್ಥ:**— ಆರು ಒಂದು, ಎಂಟು ಒಂದು— ಒಟ್ಟು ಅಷ್ಟು ಮಕ್ಕಳು ಮಹಾಪ್ರಭು ತಮ್ಮ ಕೃಪೆಯಿಂದ

**ಶ್ರೀಪಾದ:**— ಪಾಪ, ಪಾಪ. ನಾರಾಯಣ; ನಾರಾಯಣ

**ಸಭೆ:**— ನಾರಾಯಣ, ನಾರಾಯಣ

**ಏಕಾಕ್ಷಿ:**— ಶ್ರೀಮನ್ನಾರಾಯಣ ನಮೋನ್ನಮಃ!

(ನಮಸ್ಕರಿಸಿ ಕಾಣಿಕೆಯಿರಿಸುವನು.)

**ಶ್ರೀಪಾದ:**— ಎಷ್ಟಿದೆ?

**ಭಾನು:**— ನೂರೈವತ್ತು. ಪಾಪ, ಕೈಯಲ್ಲಿಲ್ಲ. ಒಡಲು ಮಾತ್ರ ಧಾರಾಳವಾದದ್ದು, ಬಹಳ ಧಾರಾಳವಾದದ್ದು.

**ಸಣ್ಣಪ್ಪ:**—(ನಮಸ್ಕರಿಸಿ) ಅನುಗ್ರಹವಾಗಲಿ. ಪಾದಕ್ಕೆ ಬಿದ್ದಿದ್ದೇನೆ.

**ಶ್ರೀಪಾದ:**— ಭಾನು . . .

**ಭಾನು:**— ಅಷ್ಟೆ.

**ಶ್ರೀಪಾದ:**— ಹೇಗೆ . . .

**ಭಾನು:**— ಅವನ ಯೋಗ್ಯತೆಗೆ ಇದೇ ಹೆಚ್ಚು.

**ಶ್ರೀಪಾದ:**— ಎಲ್ಲಾ, ಒಂದೇ ನಮೂನೆ ಕಾಣುತ್ತದಲ್ಲ.

**ಭಾನು:**— ಇಲ್ಲಿಲ್ಲ. ಇನ್ನುಳಿದವರೆಲ್ಲ ಸ್ವಲ್ಪ ಅನುಕೂಲದವರೇ. ಮತ್ತೂ ಕೆಲವರು ಬರಬೇಕಿತ್ತು.

**ಸಣ್ಣಪ್ಪ:**— ಸ್ವಾಮಿ, ಸದಾಶಿವರಾಯರೇ ಹೀಗೆ ಚಿತ್ತೈಸಿ.

**ಸದಾಶಿವ:**— (ನಮಸ್ಕರಿಸುವನು. ಕಾಣಿಕೆಯನ್ನು ಒಪ್ಪಿಸುವನು.)

**ಶ್ರೀಪಾದ:**— ನಾರಾಯಣ, ನಾರಾಯಣ.

**ಸಭೆ:**— ನಾರಾಯಣ, ನಾರಾಯಣ.

**ಭಾನು:**— ೪೦೦೦ ರೂಪಾಯಿಗಳಿವೆ. ಬಹಳ ಅನುಕೂಲವಂತರು. ಶ್ರೀಯೇ ಅವರ ಮನೆಯಲ್ಲಿ ನೆಲಸಿದ್ದಾಳೆ ಅನ್ನಿ.

**ಸದಾಶಿವ:**— ಏನು ಶ್ರೀಯೋ ನಮ್ಮದೆಲ್ಲ. ಮುಖ್ಯವಾಗಿ ಶ್ರೀಪಾದಾನುಗ್ರಹ.

**ಶ್ರೀಪಾದ:**— ನಾರಾಯಣ, ನಾರಾಯಣ.

**ಸಭೆ:**— ನಾರಾಯಣ, ನಾರಾಯಣ.

**ಭಾನು:**— ಅದು ಅಷ್ಟೇ ಸರಿ. ಮುಖ್ಯ ಅಂದರೆ . . . ನಮ್ಮ ಸದಾಶಿವರಾಯರು ಸರಕಾರದಲ್ಲಿ ಬಹಳ ಮೇಲಿನ ಅಂತಸ್ತಿನಲ್ಲಿದ್ದಾರೆ. ಮೊನ್ನೆ ಇತ್ತಲಾಗಿ ಸಮುದ್ರಯಾನ ಮಾಡಿ ಬಂದರು; ಆ

ದೋಷ ಪರಿಹಾರಕ್ಕೆ ಖಾವಂದರ ಪ್ರಸಾದ ಅನುಗ್ರಹ ಆಗಬೇಕು– ಎಂದು ಕೇಳುತ್ತಾರೆ

**ಶ್ರೀಪಾದ:**— ಸಮುದ್ರಯಾನವೇ?

**ಭಾನು:**— ಅಹುದು.

**ಶ್ರೀಪಾದ:**— ಎಷ್ಟದು?

**ಭಾನು:**— (ಸ್ವಲ್ಪ ಮೆಲ್ಲನೆಯಲ್ಲಿ) ೪೦೦೦.

**ಶ್ರೀಪಾದ:**— ಇನ್ನೊಂದಾದರೂ ಸೇರಿಸದೆ.

**ಭಾನು:**— ಸದಾಶಿವರಾಯರೇ, ಕೇಳಿತಲ್ಲ ಖಾವಂದರ ಅಪ್ಪಣೆ. ನಾನು ಅಂದಿದ್ದೆ ಅವರಿಗೆ. ಅಂದರೆ ಈಗ ಎಲ್ಲೆಲ್ಲಿಯೂ ಕಷ್ಟ ಕಾಲ.

**ಶ್ರೀಪಾದ:**— ಅದು ಸಹಜವೇ. ಮುಖ್ಯ ಕಷ್ಟಕಾಲದಲ್ಲಿಯೇ ನಮಗೆ ಶಿಷ್ಯರ ಸೇವೆ ಚೆನ್ನಾಗಿರಬೇಕು ದೇವರು ಅನುಗ್ರಹ ಮಾಡುತ್ತಾನೆ ಬಿಡಿ.

**ಸದಾಶಿವ**·— ಅಂದರೆ ಖಾವಂದರ ಅಪೇಕ್ಷೆ ಹೇಗಿದೆಯಂತೆ?

**ಭಾನು:**— ೫೦೦೦ವಂತೆ ನಾನು ಬೆಳಿಗ್ಗೇ ಸೂಚನೆ ಮಾಡಿದ್ದೆ ನಲ್ಲ. ಅದು ಸ್ಥಿತಿಯನ್ನು ತಿಳಿದೇ ಅಂದದ್ದು.

**ಸದಾಶಿವ:**— ಅಯ್ಯೋ ಆಚಾರ್ಯರೇ, ನಾನು ಅಷ್ಟನ್ನೇ ಇರಿಸಿದ್ದು. ನೋಡಿ, ನೋಡಿ . . . ಐದು ದೊಡ್ಡ ನೋಟುಗಳೇ ಇವೆಯಲ್ಲ.

**ಭಾನು:**— (ಎಣಿಸಿ) ಪ್ರಮಾದವಾಯಿತು ಅವಸರದಲ್ಲಿ ಚೆನ್ನಾಗಿ ನೋಡಿರಲಿಲ್ಲ. ಅಂದರೆ ನೀವು ಬೆಳಿಗ್ಗೆ ಅಂದ ನೆನಪಿನ ಮೇಲೆ ಯೇ ಹೇಳಿಬಿಟ್ಟೆ

(ಎಂದು ಎಲ್ಲರಿಗೂ ಸಲ್ಲಿಸದಂತೆ ಬೆಳ್ಳಿಯ ಹರಿವಾಣವೊಂದರಲ್ಲಿ ಪ್ರಸಾದವನ್ನು ಒಪ್ಪಿಸಲು)

**ಶ್ರೀಪಾದ:**— ಭಾನು, ಸದಾಶಿವರಾಯರಂಥ ಭಕ್ತಿಯುಳ್ಳ ಶಿಷ್ಯರು ಸಿಗುವುದು ಅಪೂರ್ವ. ಭಕ್ತಿಯೇ ಶ್ರೇಷ್ಠ. ಹರಿವಾಣ ಕೊಡು. (ಬೆಳ್ಳಿಯ ಹರಿವಾಣವನ್ನು ಕಂಡು) ಚಿನ್ನದ ಹರಿವಾಣವಿಲ್ಲವೆ?

**ಸದಾಶಿವ:**— ಶ್ರೀಪಾದಾನುಗ್ರಹ.

**ಶ್ರೀಪಾದ:**— ನಾರಾಯಣ ನಾರಾಯಣ.

**ಸಭೆ:**— ನಾರಾಯಣ ನಾರಾಯಣ.

(ಸದಾಶಿವರಾಯನು, ತಾನು ಮೊದಲು ಕುಳಿತ ಕೆಳಗಿನ ಸ್ಥಳಕ್ಕೆ ಹೋಗುವನು.)

ರಾಯರಿಗೆ ಮೇಲುಮಣೆ ಕೊಡಬಾರದೇ?

**ಭಾನು:**— ನಾನೂ ಹಾಗಂದಿದ್ದೆ. ಅವರೇ ಸಂಕೋಚಪಟ್ಟರು.

**ಶ್ರೀಪಾದ:**— ಚಿಂತೆಯಿಲ್ಲ ಸದಾಶಿವರಾಯರೇ. ಮೇಲಕ್ಕೆ ಬನ್ನಿ.

**ಸದಾಶಿವ:**— ಶ್ರೀಪಾದಾನುಗ್ರಹ (ಮೇಲೆ ಬಂದು ಕುಳಿತುಕೊಳ್ಳುವನು.)

**ಶ್ರೀಪಾದ:**— ನಾರಾಯಣ, ನಾರಾಯಣ.

**ಸಭೆ:**— ನಾರಾಯಣ, ನಾರಾಯಣ.

**ಕಾಶ್ಯಪ:**— ಇದೇನು ಇಲ್ಲಿ ನಡೆಯುತ್ತಿರುವುದು?

**ಏಕಾಕ್ಷಿ:**— ಶಿಷ್ಯರ ಸೇವೆ. ಏನಿಲ್ಲ, ನಾನು ೧೫೦ ರೂಪಾಯಿಗಳನ್ನು ಕೊಟ್ಟೆನು. ನೀವು ಮಾತ್ರ ನಿನ್ನೆ ದಿನ ದಕ್ಷಿಣೆಯನ್ನು ಕೊಡಲಿಕ್ಕೆ ಹಿಂಜರಿದಿರಿ. ನೋಡಿ, ಅವರು ೫೦೦೦ ಕೊಟ್ಟರು. ಪುಣ್ಯಾತ್ಮರಪ್ಪ.

**ಕಾಶ್ಯಪ:**— ಇದೇನು ವ್ಯಾಪಾರ?

**ಏಕಾಕ್ಷಿ:**— ವ್ಯಾಪಾರವಿಷ್ಟೆ; ಅವರು ಸಮುದ್ರಯಾನ ಮಾಡಿದ್ದರು.

**ಕಾಶ್ಯಪ:**— (ಆ) ನಾನೆನ್ನುವುದೇ ಇವನಿಗೆ ತಿಳಿಯುವುದಿಲ್ಲ.

**ಚಿದಾನಂದ:**—(ಏನೋ ಪತ್ರವೊಂದನ್ನು ಸ್ವಾಮಿಯ ಮುಂದಿರಿಸಿ ನಮಸ್ಕರಿಸಿ ನಿಲ್ಲುವನು.)

**ಶ್ರೀಪಾದ:** — ಎಷ್ಟು?

**ಭಾನು:** — (ಕಿವಿಯಲ್ಲಿ) ನಾನು ೩೦೦೦ವಾದರೂ ಆಗಬೇಕು ಎಂದಿದ್ದೆ; ನೋಡುವ ಎಷ್ಟಿದೆಯೆಂದು . . . (ಹಣ ಕಾಣದೆ) ಇದೇನು ಚಿದಾನಂದರಾಯರೇ, ನೋಟುಗಳನ್ನು ಹಾಕಲು ಮರೆತುಬಿಟ್ಟರಾ?

**ಚಿದಾನಂದ:** — ಅಲ್ಲೇ ಇದೆಯಲ್ಲ ನೋಟು.

**ಭಾನು:** — ಎಲ್ಲಿ, ಎಲ್ಲಿ. ಇಲ್ಲ ಇಲ್ಲ— ಮರೆತಿರಬೇಕು.

**ಚಿದಾನಂದ:** — ನಿಮ್ಮ ಕೈಯಲ್ಲಿದೆಯಲ್ಲ ಸ್ವಾಮಿ.

**ಶ್ರೀಪಾದ:** — ಅದೇನು ಭಾನು? ಇಲ್ಲಿ ಕೊಡು — (ಭಾನುವಿನಿಂದ ಆ ಪತ್ರವನ್ನು ತೆಗೆದುಕೊಂಡು ನೋಡಿ ಸಿಟ್ಟಾಗಿ) — ಇದೇನದು ನೀನು ಇರಿಸಿದ್ದು . . . . ಏನು ಮೌನ?

**ಚಿದಾನಂದ:** — ನೀವು ಅಂದಿದ್ದರೆ ಚೆನ್ನಾಗಿತ್ತು, ಅವರಿಗೆಲ್ಲ ಅಂದಂತೆ.

**ಶ್ರೀಪಾದ:** — ಅದಿರಲಿ, ತಾವು ಇಲ್ಲಿರಿಸಿದ್ದು ಏನು?

**ಚಿದಾನಂದ:** — ಏನೋ ಬಡವರ ಏಳಿಗೆಯ ಕೆಲಸ ಒಂದಿಷ್ಟು ಕೈಕೊಂಡಿದ್ದೇನೆ. ಪಾಪದ ಹೊಲೆಯರನ್ನು ಹೇಗಾದರೂ ಮೇಲಕ್ಕೆ ತರಬೇಕು ಎಂದಿದೆ. ಊರಿನಲ್ಲಿ, ಬಡತನದ ದೆಸೆಯಿಂದ ಸಹಾಯ ಸಿಗುವುದಿಲ್ಲ. ಈ ಪೀಠದಿಂದ ಅನಾಥರಿಗಿಷ್ಟು ದ್ರವ್ಯ ಸಹಾಯ ಸಿಕ್ಕಿದರೆ . . .

**ಶ್ರೀಪಾದ:** — ತಮಗೆ ಇಲ್ಲಿ ಬರಲಿಕ್ಕೆ ಯಾರು ಅಪ್ಪಣೆ ಕೊಟ್ಟವರು?

**ಚಿದಾನಂದ:** — ತಮ್ಮ ಶಿಷ್ಯವರ್ಗ ಎಂದು ಬಂದೆ.

**ಶ್ರೀಪಾದ:** — ಪಾರುಪತ್ಯಗಾರರೇ, ಇನ್ನು ಮುಂದೆ ಅಂಥ ಕರ್ಮಭ್ರಷ್ಟರನ್ನು ಮಠದ ಒಳಗೆ ಸೇರಿಸಿಕೊಳ್ಳಬೇಡಿರಿ.

**ಅಶ್ವತ್ಥ:** — ಸ್ವಾಮಿ, ಸದಾ ಹೊಲೆಯರ ಗುಡಿಯ ಮುಂದೆಯೇ ಬಿದ್ದಿರುವ ಜನ ಅದು.

**ಶ್ರೀಪಾದ:**— ಅವರನ್ನು ಹೊರಗೆ ಕಳುಹಿಸಿರಿ. ಸಾಯಂಕಾಲವೇ ನಮ್ಮ ಶಿಷ್ಯರಿಗೆ ರಾಯಸವಾಗಲಿ, ಅವರನ್ನು ಕೂಡುಕಟ್ಟನೊಳಗೆ ಸೇರಿಸಿಕೊಳ್ಳಬಾರದು ಎಂದು. . . .

**ಭಾನು:**— ತಾವು ಪ್ರಕೋಪಿತರಾಗಬಾರದು. ನಾನೆಲ್ಲ ಸರಿಮಾಡುತ್ತೇನೆ. (ಚಿದಾನಂದನ ಬಳಿಗೆ ಬಂದು) ಏನು ಮಾಡಿದಿರಿ? ನಿಮ್ಮ ತಾಯಿ ಅಂದಿದ್ದರು, ಮಗನನ್ನು ಕಳುಹಿಸುತ್ತೇನೆ ಎಂದು.

**ಚಿದಾನಂದ:**— ಬಂದೆನಲ್ಲ.

**ಭಾನು:**— ಅಂದರೆ ನಿಮಗೆ ಜಾತಿಯಲ್ಲಿರಲು ಮನಸ್ಸಿಲ್ಲವೆ?

**ಚಿದಾನಂದ:**— ನನ್ನ ಹುಟ್ಟುಜಾತಿಯನ್ನು ಯಾರೂ ತಪ್ಪಿಸಲಾರರು.

**ಭಾನು:**— ಅಶ್ವತ್ಥ, ರಾಯರನ್ನು ಹೊರಗೆ ಕಳುಹಿಸಿಬಿಡು.

(ಕಳುಹಿಸುವನು.)

**ಏಕಾಕ್ಷಿ:**— ಶಾರದೇ, ನಿನಗೂ ಇದೇ ಅವಸ್ಥೆ.

**ಶಾರದೆ:**— (ಅಳುತ್ತ ನಿಲ್ಲುವಳು.)

**ಕಾಶ್ಯಪ:**— ಇದೇನು ಸಮಾಚಾರ?

**ಏಕಾಕ್ಷಿ:**— ಅದೆಲ್ಲಾ ಕಡೆಯಲ್ಲಿ ಇರುವುದೇ. ಆ ಮನುಷ್ಯನು ಬಲು ಸೊಕ್ಕಿದವನು. ಕಾಣಿಕೆ ಒಪ್ಪಿಸುವ ಬದಲು ಖಾವಂದರಲ್ಲಿಗೆ ಚಂದಾಪಟ್ಟಿ ಒಯ್ದನು!

**ಅಶ್ವತ್ಥ:**— ಶಾರದೆ, ಮುಂದೆ ಹೋಗು, ಇನ್ನೂ ನಿನ್ನ ತಂದೆತಾಯಿಗಳಿಗೆ ಬುದ್ಧಿಯಿಲ್ಲವೆಂದಬಳಿಕ.

**ಶಾರದೆ:**— (ಮುಂದೆ ಬಂದು ನಿಲ್ಲುವಳು.)

**ಶ್ರೀಪಾದ:**— ಯಾರಿದು?

**ಭಾನು:**— ಇವಳು ಮಹಾ ಪತಿವ್ರತೆ. ಈ ವಿಷಯದಲ್ಲಿ ನಾವು ಹೇಗೆ ನಡೆಯುವುದೆಂದೇ ಗೊತ್ತಿಲ್ಲ. ಈ ಹುಡುಗಿ ಉತ್ತಮ ಕುಲ

ದಲ್ಲಿ ಹುಟ್ಟಿ, ವಿಧವೆಯಾಗಿ, ಈಗ ತಾಯಿಯಾಗಿದ್ದಾಳೆ. ಅವಳ ತಂದೆತಾಯಿಗಳಿಗೆ ದಂಡವನ್ನು ತೆರುವುದಕ್ಕೂ ಸಹ ಇಷ್ಟವಿಲ್ಲ ಈಗ ಹೋದರಲ್ಲ . . . ಅವರ ಸಾಲಿನವರು ಇವರು . . . ಇವರಿಗೆ ಯಾವ ರೀತಿ ಅನುಗ್ರಹವಾಗುತ್ತದೆಯೋ ಆಗಲಿ.

**ಶ್ರೀಪಾದ:**— ಏನು, ನಿನ್ನ ಅರಿಕೆ?

**ಶಾರದೆ:**—(ಅಳುತ್ತ) ನನ್ನ ಕುಲವನ್ನು ಉಳಿಸಿರಿ. ಹುಡುಗಿ ನಾನು. ತಿಳಿಯದೆ ಪಾಪಮಾಡಿದೆ. ನಾನಾಗಿ ಅಡ್ಡಹಾದಿ ಹಿಡಿದವಳಲ್ಲ. ಊರಿನ . . . ಇಲ್ಲಿಯವರೇ . . . ನನ್ನನ್ನು ಕೆಡಿಸಿದರು. ಅಂತು ಪಾಪಮಾಡಿದುದು ನಿಜ. ಇನ್ನಂಥ ಕೆಲಸವನ್ನು ಮಾಡುವುದಿಲ್ಲ. ಕಾಣಿಕೆ ತೆರುವ ಎಂದರೆ ನಮಗೆ ಒಂದೇ ಒಂದು ಬಿಡುಗಾಸಿನ ಆದಾಯವಿಲ್ಲ. ಜೀವನ ಸಾಗಿಸುವುದೆಂದರೆ ಅಷ್ಟಕ್ಕೆ ಅಷ್ಟಾಗಿದೆ . . . ಕಾಲಿಗೆ ಬೀಳುತ್ತೇನೆ. ಉದ್ಧಾರಮಾಡಿರಿ ನನ್ನನ್ನು . . .

**ಶ್ರೀಪಾದ:**— ಭಾನು, ಏನು ದಾರಿ?

**ಭಾನು:**— ಕಾಸು ಕೊಡುವ ಮಕ್ಕಳಲ್ಲ ಅವರು ಒಟ್ಟಾರೆ ತಪ್ಪಿಗೆ ತಕ್ಕ ದಂಡನೆಯೇ ದಾರಿಯೆಂದು ಕಾಣುತ್ತದೆ.

**ಶ್ರೀಪಾದ:**— ಅದಾಯಿತಲ್ಲ. ಯಾರಿಂದಾಯಿತು ಎಂದು ತಿಳಿದುಕೊಂಡಿದ್ದರೆ, ಅವರಿಂದಲಾದರೂ ದಂಡವನ್ನು ಪಡೆಯಬಹುದಿತ್ತು.

**ಭಾನು:**— (ಗಭಕ್ಕನೆ) ಆ ವಿಚಾರ ಇಲ್ಲಿ ಬೇಡ. ಮುಖ್ಯವಾಗಿ ತಮ್ಮ ಪೀಠಕ್ಕೆ ಕುಂದುಬಾರದ ಹಾಗೆ . . .

**ಶ್ರೀಪಾದ:**— ಭಾನು, ಇವಳನ್ನು ಕಟ್ಟುರಾಯಸಕ್ಕೆ ಸೇರಿಸಿಬಿಡಿ.

**ಭಾನು:**— ಅವಳನ್ನು ಮಾತ್ರ ಸೇರಿಸಿದರೆ . . . ? ಅವಳಿರುವುದೀಗ ತಂದೆಯ ಮನೆಯಲ್ಲಿ . . . ಅವರನ್ನೂ ಸಹ.

**ಶಾರದೆ:**— ಅಯ್ಯೋ ಅಷ್ಟು ಮಾಡಬೇಡಿ  ನಾನು ನನ್ನ ಪಾಪಕ್ಕೆ ಎಲ್ಲಾದರೂ ಬಿದ್ದು ಸಾಯುತ್ತೇನೆ. ಅವರಿಗೆ ಗತಿಯಿಲ್ಲದಂತೆ ಮಾಡಬೇಡಿ. ಅದಾದರೂ ಒಂದು ಉಪಕಾರವನ್ನು . . . . .

**ಭಾನು:**— ಅದು ಹೇಗಾದೀತು? ಈಕೆಯನ್ನು ಕೂಡಿಯೇ ಇಷ್ಟು ದಿನವಿದ್ದರು ಅವರು  ತಿಳಿದ ಮೇಲೆ ಹೊರಗೆ ಹಾಕಬಾರದಿತ್ತೇ.

**ಶಾರದೆ:**– ಪ್ರಮಾಣಕ್ಕೂ ಅವರು ನನಗೆ ಮನೆಯೊಳಕ್ಕೆ ಅನ್ನಹಾಕಲಿಲ್ಲ.

**ಭಾನು:**— ಅದೆಲ್ಲ ನಂಬಿಕೆ ಬಾರದ ಮಾತು

**ಶಾರದೆ:**— ನನ್ನ ಕೊರಳಾಣೆಯಾಗಿಯೂ . . . .

**ಭಾನು:**— ನನಗೇನು? ಶ್ರೀಪಾದಂಗಳವರ ಚಿತ್ತ!

**ಶ್ರೀಪಾದ:**— ಅವಳನ್ನು ಹೊರಕ್ಕೆ ಕಳುಹಿಸಿಬಿಡಿರಿ. ಪಾರುಪಾತ್ಯಗಾರರೇ, ಅವಳ ಮನೆಯವರಿಗೂ ಕಟ್ಟುರಾಯಸವಾಗಲಿ.

(ಶಾರದೆಯು ಮೂರ್ಛೆ ಬೀಳುವಳು.)

**ಅಶ್ವತ್ಥ:**— ಅಬ್ಬ, ಎಂಥ ನಾಟಕ!

(ಅವಳನ್ನು ಹೊತ್ತು ಸಾಗಿಸುವರು )

**ಶ್ರೀಪಾದ:**— ಆ ಸ್ಥಳದಲ್ಲಿ ಇಷ್ಟು ತೀರ್ಥ ಹಾಕಿಬಿಡು . . . .

(ಹಾಗೆಯೇ ಮಾಡುವರು.)

ಇನ್ನು ಇಂಥ ಅರಿಷ್ಟ ವಿಚಾರಗಳಿಲ್ಲವಲ್ಲ. ಯಾರದು? ಕಾಶ್ಯಪನೆಂದಿರಾ? ಏತಕ್ಕೆ ಇನ್ನೂ ಬಾರದೆ ನಿಂತಿದ್ದಾನೆ?

**ಭಾನು:**— ಏಕಾ, ಹೇಳು ಅವನ ಸಮಾಚಾರ

**ಏಕಾಕ್ಷಿ:**— ಸ್ವಾಮಿ, ಅವರು ಪರ ಊರಿನವರು.

**ಶ್ರೀಪಾದ:**— ಪಾದಕ್ಕೆ . . . .

**ಭಾನು:**— ಸ್ವಾಮಿ ತಮ್ಮ ಹೇಸರೇನು? . . . ಖಾನಂದರ ಮುಂದೆ ಸಾಷ್ಟಾಂಗ . . . . .

**ಕಾಶ್ಯಪ:** — ಅದನ್ನು ಕೇಳಿ ತೆಗೆದುಕೊಳ್ಳಬೇಕೆ?

**ಶ್ರೀಪಾದ:**—ಸುಮ್ಮನಿರಿ, ಅಷ್ಟರಲ್ಲಿಯೇ ಬಿಡಬೇಕು ಅವರಾರೆಂದಿರಿ?

**ಏಕಾಕ್ಷಿ:** — ಪರ ಊರಿನವರು ಎಲ್ಲಿ ಎಂದು ಚೆನ್ನಾಗಿ ಬಾಯಿ ಬಿಡುವುದಿಲ್ಲ ಯಾತ್ರಿಕರಾಗಿ ಬಂದರೋ, ಅಥವಾ ನಮ್ಮ ಕ್ಷೇತ್ರವನ್ನು ಕೆಡಿಸಬೇಕೆಂದು ಬಂದರೋ ತಿಳಿಯದು.

**ಶ್ರೀಪಾದ:** — ಏನಿದು, ಭಾರೀ ಸಮಾಚಾರ?

**ಏಕಾಕ್ಷಿ:** — ಸಣ್ಣಪ್ಪ, ನೀನು ಕಂಡುದನ್ನು ಹೇಳು.

**ಭಾನು** — ಖಾವಂದರೇ, ನಮ್ಮ ಸಣ್ಣಪ್ಪ ಎಂದರೆ ಎಷ್ಟಕ್ಕೂ ನಂಬಬಹುದಾದ ಮನುಷ್ಯ ಸಣ್ಣಪ್ಪ ಅಂಜಬೇಡ . . . ವಿವರವಾಗಿ ಹೇಳು

**ಸಣ್ಣಪ್ಪ:** — ಸ್ವಾಮಿ, ನಿನ್ನೆ ದಿನ ಇಷ್ಟು ಹೊತ್ತಾಗಬಹುದು — ನಾನು ಇಲ್ಲಿಂದ ಮನೆಗೆ ಹೋಗುತ್ತಿದ್ದೆ. ದಾರಿಯಲ್ಲಿ ಒಂದು ಅಡ್ಡಹಾದಿಯಿದೆಯಲ್ಲ, ಹೊಲಗೇರಿಗೆ ಹೋಗುವುದು; ಅಲ್ಲಿ ಒಂದು ಮನೆಯಿದೆ . . . . ಮಾಂಕುವಿನ ಗುಡಿಸಲು ಇರಬೇಕು. ಇವರು ಅಲ್ಲಿ ಕುಳಿತು ಊಟಮಾಡುತ್ತಿದ್ದರು

**ಕಾಶ್ಯಪ:** — ಯಾರು? ನಾನೇ?

**ಭಾನು:** — ಯಾರೂ ಮಾತನಾಡಬಾರದು ಈಗ.

**ಏಕಾಕ್ಷಿ:** — ಸರಿ, ಮಧ್ಯಾಹ್ನ ಅಲ್ಲಿ ಉಂಡದ್ದು, ಕೂಡಲೇ ಇಲ್ಲಿ ಬಂದು ಅನಾಥಸ್ವಾಮಿಯೆದುರು ಹೋಗಿ ಏನೆಲ್ಲಾ ಅಂದದ್ದು. ಎಲ್ಲ ಭ್ರಷ್ಟಗೊಳಿಸಿದನು. ಇನ್ನು ಶುದ್ಧವಾದರಾಯಿತು. ದೇವರನ್ನು ಬೈದುದು ಹೇಗೂ ಇದೆಯಲ್ಲ.

**ಶ್ರೀಪಾದ:** — ದೇವರನ್ನೇ?

**ಏಕಾಕ್ಷಿ:** — ಹೌದಪ್ಪ, ಎಲ್ಲೋ ಅರೆಸಮಾಜಿಯವನೆಂದು ಕಾಣುತ್ತದೆ. ಕಂಡಾಪಟ್ಟೆ ಬೈದು . . . ಅದನ್ನೆಲ್ಲ ಹೇಳುವುದಲ್ಲ.

**ಕಾಶ್ಯಪ:**— ನಾನು ದೇವರನ್ನು ಬೈದೆನೇ . . . ?

**ಭಾನು:**— ಎಲ್ಲವನ್ನು ಅವರು ಅಂದರಲ್ಲ. ನೀವು ಸುಮ್ಮನಿರಿ. ಖಾವಂದರ ತೀರ್ಮಾನ ಹೇಗಾಗುತ್ತದೆಯೋ ಆಗಲಿ.

**ಶ್ರೀಪಾದ:**— ಅವರಿಗೆ ೫೦೦೦ ರೂಪಾಯಿಗಳ ದಂಡಹಾಕಿದ್ದೇವೆ.

**ಕಾಶ್ಯಪ:**— ಹಾಗಾದರೆ ನಾನಿಲ್ಲಿಂದ ಹೊರಡಬಹುದೇ?

**ಭಾನು:**— ದಂಡವನ್ನು ಕೊಟ್ಟು.

**ಕಾಶ್ಯಪ:**— ದಂಡವನ್ನು ತೆರಲು ನನ್ನಿಂದಾದ ಅಪರಾಧವೇನು?

**ಭಾನು:**— ಈಗ ಹೇಳಿದರಲ್ಲ

**ಕಾಶ್ಯಪ:**— ಇಷ್ಟರ ವರೆಗೆ ಹೇಳಿದುದು ನಿಮಗೇ ತಿಳಿದಿದೆಯೋ ಇಲ್ಲವೋ . . . .

**ಭಾನು:**— ಎಂಥ ಮೂರ್ಖನಿವನು? ಏಕಾಕ್ಷಿ, ಈಗ ನಡೆದ ಸಂಗತಿಯೆಲ್ಲಾ ಅವನಿಗೆ ಹೇಳು; ಮತ್ತು ದಂಡ ತೆರದಿದ್ದರೆ ಅವನ ಬಿಡುಗಡೆಯಾಗಲಿಕ್ಕಿಲ್ಲವೆಂದು ತಿಳಿಸಿಬಿಡು.

**ಏಕಾಕ್ಷಿ:**— ಇಲ್ಲಿ ಕೇಳು. ನೀನು ಹೊಲೆಯರ ಮನೆಯುಲ್ಲಿ ನಿನ್ನೆ ಬೆಳಿಗ್ಗೆ ಊಟಮಾಡಿದೆಯುಂತೆ.

**ಕಾಶ್ಯಪ:**— ನಾನೇ?

**ಏಕಾಕ್ಷಿ:**— ಅಹುದು ನೀನೆ. ಸಣ್ಣಪ್ಪನು ನೋಡಿರುವನಲ್ಲ.

**ಸಣ್ಣಪ್ಪ:**— ನಿಜಕ್ಕೂ ಅಹುದು, ಮಹಾಸ್ವಾಮಿ. ಈ ಮನುಷ್ಯ ಶುದ್ಧ ಚಂಡಾಲ.

**ಕಾಶ್ಯಪ:**— ಇವರು ಬ್ರಾಹ್ಮಣರೇನು ಸ್ವಾಮಿ?

**ಸಣ್ಣಪ್ಪ:**— ಇಲ್ಲಿ ಯಜ್ಞೋಪವೀತ ನೋಡು, ಮತ್ತೆ ಮಾತ ನಾಡು.

**ಕಾಶ್ಯಪ:**— ಅದರಿಂದ?

**ಏಕಾಕ್ಷಿ**:— ಆ ಬಳಿಕ, ಅಂದರೆ ಹೊಲೆಯರ ಗುಡಿಗೆ ಹೋಗಿ, ಉಂಡು ಬಂದ ಮೇಲೆ, ಸ್ನಾನಮಾಡದೆ ನಮ್ಮ ಮಠಕ್ಕೆ ಬಂದು ಅಪವಿತ್ರಗೊಳಿಸಿದ್ದರಿಂದ ನಿನ್ನಮೇಲೆ ಅಷ್ಟು ದಂಡಹೊರಿಸಿದೆ. ಅಷ್ಟು ಮಾಡಿದುದರಿಂದ ನೀನು ಹೊಲೆಯನಾದೆ. ಹೊಲೆಯನಾಗಿ ಗುಡಿಯೊಳಗೆ ಬಂದದ್ದು ಮಹಾ ಮಹಾ ಅಪರಾಧವಾಯಿತು.

**ಕಾಶ್ಯಪ**:— ಹೊಲೆಯರನ್ನು ಸೃಷ್ಟಿಸಿದವರಾರು?

**ಏಕಾಕ್ಷಿ**:— ಯಾರು ಅಂದರೆ— ದೇವರು. ಏನು? ಪರೀಕ್ಷೆಮಾಡುತ್ತೀಯಾ?

**ಕಾಶ್ಯಪ**:— ಹಾಗಾದರೆ ಹುಟ್ಟದ ಮಕ್ಕಳಿಗೆ ದೇವರನ್ನು ಕಾಣುವ ಅಧಿಕಾರವಿಲ್ಲವೆ?

**ಭಾನು**:— ಅದೆಲ್ಲ ತರ್ಕ ಇಲ್ಲಿ ಬೇಡ.

**ಕಾಶ್ಯಪ**:— ಇನ್ನೇನು ಬೇಕು ನಿಮಗೆ?

**ಭಾನು**:— ೫೦೦೦ ರೂಪಾಯಿ ದಂಡ.

**ಕಾಶ್ಯಪ**:— ಅದನ್ನು ಕೊಟ್ಟರೆ ಪಾಪವು ತೊಳೆಯುತ್ತದೆಯೇನು? ಅದರಿಂದೇನು ಮಾಡುವಿರಿ? ಮೈಯನ್ನು ಉಜ್ಜಿಕೊಳ್ಳುವಿರೇ?

**ಏಕಾಕ್ಷಿ**:— ಓಹೋ . . . ಇದು ಖಂಡಿತಕ್ಕೂ ಅರೆಸಮಾಜಿ.

**ಭಾನು**:— ಈಗ ನೀನು ದಂಡವನ್ನು ತೆರದಿದ್ದರೆ ಸಾಧ್ಯವಿಲ್ಲ.

**ಕಾಶ್ಯಪ**:— ಜಾತಿ ಬಹಿಷ್ಕಾರಮಾದಿರಿ.

**ಭಾನು**:— ಅದು ನಿನ್ನಂಥವರಿಗಲ್ಲ; ಜಾತಿ ಇರುವವರಿಗೆ.

**ಕಾಶ್ಯಪ**:— ಅಹುದು. ನನಗೆ ಜಾತಿಯಿಲ್ಲ.

**ಭಾನು**:— ಸುಮ್ಮನೆ ಮಾತು ಬೆಳೆಯಿಸಬಾರದು.

**ಕಾಶ್ಯಪ**:— ಬದಲು ದಂಡ ತೆರಬೇಕಾದರೆ ನನ್ನಲ್ಲಿ ಹಣವಿಲ್ಲ. ನಿಮ್ಮ ಸುಂಕದಕಟ್ಟೆಗೆ ತೆರಲು ನನ್ನಲ್ಲಿ ಲಂಚವಿಲ್ಲ.

5

**ಶ್ರೀಪಾದ:** — ಶಾಂತಂ ಪಾಪಂ  ಅಬದ್ಧವಚನ.

**ಭಾನು:** — ಶ್ರೀಪಾದಂಗಳವರ ಶಾಪತಟ್ಟೀತು; ಮೊದಲು ದಂಡ ವನ್ನಿರಿಸು.

**ಕಾಶ್ಯಪ:** — ಶ್ರೀಪಾದಂಗಳವರು ಅಷ್ಟು ಆಗ್ಗದಲ್ಲಿ ಶಾಪವನ್ನು ಕೊಡುತ್ತಾರೆಯೇ?

**ಭಾನು:** — ಏನಯ್ಯ, ಗುರುಪೀಠದ ಮುಂದೆ ಇಂಥ ಅಸಂಬದ್ಧ ವಚನ ಆಡುತ್ತೀಯಾ? ಎಚ್ಚರವಿರಲಿ.

**ಕಾಶ್ಯಪ:** — ಇದು ಬರಿ ಪೀಠವೇನು?

**ಶ್ರೀಪಾದ:** — ಏ ಮನುಷ್ಯ, ಹಾಗೆಲ್ಲ ಮಾತನಾಡಬೇಡ.

**ಕಾಶ್ಯಪ:** — ಇಷ್ಟು ಹೊತ್ತಿನ ಬಳಿಕ ನನ್ನನ್ನು ನೀವು ಮನುಷ್ಯನೆಂದು ಗುರುತಿಸಿದಿರಿ.  ಅದಕ್ಕಾಗಿಯಾದರೂ ನಿಮಗೆ ಕಾಣಿಕೆಯನ್ನು ತೆರಬಹುದಿತ್ತು  ಪಾಪ ನಿಮಗೆ ಹಣದ ತೊಂದರೆ ಬಹಳವಿರ ಬಹುದು.  ಆದರೆ ನಾನು ತೀರ ಬಡವ.  ನಿಮ್ಮ ಗರ್ಭಗುಡಿಯ ಒಳಕ್ಕೆ ಹೋಗಬಿಟ್ಟರೆ ನನ್ನ ಅನಾಥ ಬಂಧುವನ್ನಾದರೂ ಕೇಳಿ ಹಣವನ್ನು ತರುತ್ತಿದ್ದೆ.  ಅವನು ಭಕ್ತರ ಇಷ್ಟವನ್ನು ಸಲಿಸುವವ ನಲ್ಲವೆ?  ಹೋಗಲು ಅನುಮತಿಯೇ?

**ಏಕಾಕ್ಷಿ:** — ಎಲ್ಲಿಗೆ?  ಗರ್ಭಗುಡಿಗೇನು?  ಏನು ನಿನ್ನ ಅಹಂಕಾರ ವೋ?  ಕರ್ಮ ಚಂಡಾಲರೆಲ್ಲ ಗರ್ಭಗುಡಿಯನ್ನು ಸೇರುವುದೇ! ಭ್ರಷ್ಟ, ನೀಚ, ಅಧಮ, ಅಧಮಾಧಮ, ಮಂಕ, ಮಡ್ಡಿ . . .

**ಕಾಶ್ಯಪ:** — ತಾವು ಅಮರವನ್ನು ಅಭ್ಯಾಸಮಾಡಿದಂತೆ ಕಾಣುತ್ತದೆ.

(ಸಭೆಯವರು ನಗುವರು.)

**ಶ್ರೀಪಾದ:** — ಭಾನು, ಇಷ್ಟರ ಮೇಲಿಂದಲೂ ತಿಳಿಯುವುದಿಲ್ಲವೆ, ಅವನು ಶುದ್ಧ ಹುಚ್ಚನೆಂದು?  ಏನೋ ಅತಿ ಅಭ್ಯಾಸದಿಂದ

ಈ ಅವಸ್ಥೆಯನ್ನು ತಂದುಕೊಂಡವನಿರಬೇಕು. ಅವನನ್ನು ಹೊರಗೆ ಕಳುಹಿಸಿರಿ. ಅವನಿಗೆ ದಂಡವಾಗುವ ಬದಲು ನಮ್ಮ ಸಮಯ ದಂಡವಾಯಿತು.

**ಭಾನು:**— ಏನೋ, ಉಳಿದುಕೊಂಡೆ ಖಾವಂದರ ಚಿತ್ತವು ನಿನ್ನ ಮೇಲೆ ಸ್ವಲ್ಪ ಇರಬೇಕು. ಹೂಂ, ನಡೆ ನಡೆ . . . .

**ಕಾಶ್ಯಪ:**— ಜಾತಿ ಬಹಿಷ್ಕಾರವೋ, ವರ್ಣಪಲ್ಲಟವೋ . . .

**ಏಕಾಕ್ಷಿ:**— ಜಾತಿವರ್ಣಗಳ ವಿಷಯ ಏನು ಗೊತ್ತು ನಿನಗೆ?

**ಕಾಶ್ಯಪ:**— ನಿಮ್ಮ ಅಮರದಲ್ಲಿಲ್ಲವೆ?

(ಕಾಶ್ಯಪನನ್ನು ಎಲ್ಲರೂ ಸೇರಿ ಹೊರಕ್ಕೆ ತಳ್ಳುವರು.)

**ಶ್ರೀಪಾದ:**— ಅಂದರೆ ಸದಾಶಿವರಾಯರೇ ಅಂಥವರನ್ನು ದಂಡಿಸುವುದು ನಿಮಿಷದ ಕೆಲಸ; ಏನೂ ಮಹತ್ವದ್ದಲ್ಲ. ಆದರೆ ಅವರನ್ನು ಇರಿಸಿಕೊಂಡಷ್ಟು ಹಾನಿ ಅಂದರೆ ಅವರ ನಾಸ್ತಿಕವಾದವನ್ನು ಕಂಡು ಶಿಷ್ಯವರ್ಗವೂ ಮತಿಭ್ರಂಶಗೊಂಡೀತು. ಹೂಂ, ಭಾನುಕೋಟಿ, ಪೂಜೆ ಮುಂದಕ್ಕೆ ಸಾಗಬೇಕಲ್ಲವೇ? ಇನ್ನು ಇಲ್ಲಿಯ ಪೂಜೆಯಾಗಿ, ಮಹಾಪೂಜೆಯಾಗಬೇಕು. ಚಂದ್ರಿಯ ನರ್ತನಸೇವೆ ಇದೆಯಲ್ಲ. ಪರಮಾತ್ಮನಿಗೆ ಭಕ್ತರು ಕೊಟ್ಟದ್ದು ಇಷ್ಟ.

(ಚಂದ್ರಿಯು ಬಂದು ವಂದಿಸಿ, ಕುಣಿಯುವಳು. ಪ್ರಸನ್ನರಾದ ಸ್ವಾಮಿರಾಯರು ಅವಳನ್ನು ಆಶೀರ್ವದಿಸಿ ಪ್ರಸಾದಕೊಡುವರು.)

ದೀರ್ಘ ಸುಮಂಗಲೀಭವ

(ಪೂಜೆ ಆರತಿಗಳೆಲ್ಲ ಆಗಿ, ಏಕಾಕ್ಷಿ, ಭಾನು, ಶ್ರೀಪಾದಂಗಳವರನ್ನು) ಬಿಟ್ಟು ಮಿಕ್ಕವರೆಲ್ಲ ಹೊರಟುಹೋಗುವರು )

**ಶ್ರೀಪಾದ:**— ಈತನನ್ನು ಕಳುಹಿಸಿಬಿಡು, ಭಾನು.

5*

**ಭಾನು:**— ಖಾವಂದರು ಅಲ್ಲಿಗೆ, ಮಹಾಪೂಜೆಗೆ, ಬರುವ ಸಮಯಕ್ಕೆ ಸರಿಯಾಗಿ ೧೦೦೦ ತುಲಸೀಕುಡಿಗಳು ಬೇಕಂತೆ. ಹೋಗು, ಹೋಗು . . . . (ಏಕಾಕ್ಷಿ ತೆರಳುವನು.)

**ಶ್ರೀಪಾದ:**— ನೀನು ಆತನ ಮಾತುಗಳನ್ನು ಕೇಳಿದೆಯಲ್ಲ. ನನಗೂ ಅದೇ ಸಂಶಯ ಬಲವಾಗಿತ್ತು.

**ಭಾನು:**— ಏನು ಸಂಶಯ, ಮಹಾಸ್ವಾಮಿ?

**ಶ್ರೀಪಾದ:**— ನಮ್ಮಲ್ಲಿ ಇದ್ದ ಮಾತಿಗೂ, ಇವನು ಆಡುವುದಕ್ಕೂ ಸರಿಯಾಯಿತು. ಆ ಮನುಷ್ಯನು, ಈಗ ಹುಚ್ಚನಾಗಿರಬೇಕಷ್ಟೆ. ಆದರೆ ಈ ಸ್ಥಳದ ಮೂಲವನ್ನು ತಿಳಿದವನೆಂದು ಕಾಣುತ್ತದೆ. ಅವನೇನೆಂದನು? ಗರ್ಭಗುಡಿಯೊಳಗೆ ಹೋದರೆ ಹಣವನ್ನು ಕೊಡುವೆನೆಂದನಲ್ಲ.

**ಭಾನು:**— ಎಲ್ಲಿಂದ, ಅವನ ಅಪ್ಪನ ಮನೆಯಿಂದ ತರುತ್ತಾನಂತೇನು?

**ಶ್ರೀಪಾದ:**— ನಿನಗಿಷ್ಟೂ ತಲೆಯಿಲ್ಲ ಮೊದಲಿನಿಂದಲೂ, ಒಂದು ಪ್ರತೀತಿಯಿದೆ— ಏನೆಂದರೆ- ಗರ್ಭಗುಡಿಯೊಳಕ್ಕೆ ಅಪಾರ ಗುಪ್ತ ಧನವಿದೆಯೆಂದು. ನಾನೂ, ಅದನ್ನು ಅಗೆಯಿಸಿ ನೋಡಬೇಕು ಎಂದು ಯೋಚಿಸಿದ್ದೆ. ಇದ್ದರೆ, ಅಲ್ಲೊಂದು ಕಲ್ಲಿನ ಮೂರ್ತಿ ಯಿದೆಯಲ್ಲ.

**ಭಾನು:**— ಯಾವುದು, ಪೂಜೆಯ ಮೂರ್ತಿ ಹಿಂದಿನದೇ?

**ಶ್ರೀಪಾದ:**— ಅದೇ. ಅವನಂದುದೂ ಅದೇ ಮೂರ್ತಿಯಿರಬೇಕು. ಅನಾಥಬಂಧು— ಎನ್ನುತ್ತಿದ್ದನಲ್ಲ. ಅದನ್ನು ಕಿತ್ತರೆ ಖಂಡಿತ ವಾಗಿಯೂ ಯಥೇಷ್ಟ ಧನ ಸಿಕ್ಕೀತು. ಅದು ಸಿಕ್ಕಿದರೆ ಈ ಘಟಂಗರನ್ನೆಲ್ಲ ಬೇಡುವ ಕೆಲಸವಿಲ್ಲ.

**ಭಾನು:**— ಖಾವಂದರ ಯೋಚನೆಯು ಯುಕ್ತವಾದದ್ದೇ. ಆದರೆ ಅದಕ್ಕೆ ಏನು ಮಾಡಬೇಕೆಂದು ಅಪ್ಪಣೆಯಾಗುತ್ತದೆ?

**ಶ್ರೀಪಾದ:**— ನೀನು ನಂಬುಗೆಯ ಜನವೊಂದನ್ನು ಕರೆದುತಂದು ರಾತ್ರಿಯೇ ಆ ಕೆಲಸವನ್ನು ತೊಡಗಿಸಬೇಕು. ನರಹುಳುವಿಗೂ ಸುದ್ದಿ ತಿಳಿಯಬಾರದು ಏನು? ಅಂಥವರಾರಿದ್ದಾರೆ?

**ಭಾನು:**— ಅದಕ್ಕೆಲ್ಲ ನಮ್ಮ ಏಕಾ. ಎಂಥಾ ಹೊಂಡವನ್ನೂ ತೆಗೆದಾನು, ಎಂಥಾ ಹೊಂಡವನ್ನೂ ಮುಚ್ಚಿಯಾನು. ನಂಬುಗೆಗೂ ಯೋಗ್ಯ. ಅಂದರೆ ಸ್ವಲ್ಪ ಬೇಡುವ ಚಟ ಹೆಚ್ಚು. ಏನಾದರೂ ಕೊಟ್ಟರಾಯಿತು.

**ಶ್ರೀಪಾದ:**— ಹಾಗಾದರೆ ಅನಾಥಸ್ವಾಮಿಯ ಪೂಜೆಯನ್ನು ಬೇಗ ಮುಗಿಸಬೇಕು. ಅಂದರೆ ಬೆಳಗಾಗುವುದರೊಳಗೆ ಎಲ್ಲಾ ಅಗೆದು ಮುಚ್ಚಬೇಕಲ್ಲ.

**ಭಾನು:**— ಇವತ್ತು ಮಹಾಪೂಜೆಯಿದೆಯಲ್ಲ

**ಶ್ರೀಪಾದ:**— ನೀನೇ ಪೂಜೆಮಾಡುವುದಷ್ಟೆ. ಸ್ವಲ್ಪ ಚುಟುಕಿನಲ್ಲಿ ಮುಗಿಸಿದರಾಯಿತು.

## ಅಂಕ ೪.

(ನಾಲ್ಕು ಹಾದಿಗಳು ಸೇರುವ ಸ್ಥಳ. ನಡುವೆ ಅಶ್ವತ್ಥದ ಮರವೊಂದು ನೂರಾರು ಬೇರುಗಳನ್ನು ಇಳಿಸಿ ನಿಂತಿದೆ. ಅದರ ಬುಡದಲ್ಲಿ ಒಂದು ಕಟ್ಟೆ. ಮಾಣೇಶನು ಕೆಲವು ನೀರಿನ ಕೊಡಗಳನ್ನಿರಿಸಿಕೊಂಡು, ಅರವಟ್ಟಿಗೆಯೊಂದನ್ನು ನಡೆಯಿಸುತ್ತಿರುವನು )

**ಮಾಣೇಶ**:–ಥೇ ಇಲ್ಲಿ ಕುಳಿತು, ಕುಳಿತು, ನಿದ್ರೆಬರಲಿಕ್ಕೆ ಪ್ರಾರಂಭ ಅಲ್ಲ, ಯಾವ ಕರ್ಮಕ್ಕೆಂದು ಈ ಅರವಟ್ಟಿಗೆಯನ್ನು ಮಾಡುವುದು? ಯಾರು ಇಲ್ಲಿ ನೀರು ಕುಡಿಯಲಿಕ್ಕೆ ಬರುತ್ತಾರೆ? ಪರಊರಿನವರಂತು ಬರುವ ಹಾಗೆಯೇ ಇಲ್ಲ. ನಾಲ್ಕು ರಸ್ತೆಗಳು ಕೂಡುವ ನಡುಹಾದಿ ನಿಜ. ಆದರೆ ನೀರಿಗೆ ಬರುವವರು ಬೇಕಲ್ಲ. ಈ ಮೋಟಾರು ಬಂದಂದಿನಿಂದ ನೆಲದ ಮೇಲೆ ನಡೆಯುವವರೇ ಇಲ್ಲ. ಅಲ್ಲದೆ ಕಾಫಿಹೋಟೇಲುಗಳಿವೆ ನೂರ ಇಪ್ಪತ್ತೈದು. ಅದರಲ್ಲಿ ಬರಿನೀರು ಗಂಟಲೊಳಗೆ ಇಳಿಯುತ್ತದೆಯೇ? ಇನ್ನು ಬಂದರೆ, ನಾಲ್ಕು ಜನ ಘಟ್ಟದ ಹೊಲೆಯರು ಬರಬೇಕು. ಅದೂ ಕೈಯಲ್ಲಿ ಕಾಸಿಲ್ಲದಿದ್ದರೆ. ಇದ್ದರೆ ಅವರೂ ಕಳ್ಳನ್ನು ಬಿಟ್ಟು ನೀರು ಕುಡಿಯುವ ಹಾಗಿಲ್ಲ. ಅಂಥ ಒಂದು ನಾಲ್ಕು ಹೊಲೆಯರಿಗಾಗಿ ನನ್ನಂಥ ಬ್ರಾಹ್ಮಣನು ಮಧ್ಯಾಹ್ನ ಬಿಸಿಲಿಗೆ ಇಲ್ಲಿ ಒಣಗಬೇಕೇ? ಮಧ್ಯಾಹ್ನ ಯಾರಾದರೂ ಯಾತ್ರಿಕರು ಬಂದರೆ ಹೊರಡುವುದಕ್ಕಿಲ್ಲ. ಅಂತು ಒಂದು ಉಂಬಳಿಯಿದೆಯೆಂದು ಕುಳಿತಿರುವುದು. ಅಲ್ಲದಿದ್ದರೆ ಯಾರಿಗೆ ಬೇಕಿತ್ತು

*ಕರ್ಣಾಟಕದ ಕೆಲವು ಭಾಗಗಳಲ್ಲಿ, ಬಾಯಾರಿ ಬಂದವರಿಗೆ ಬರಿ ನೀರನ್ನು ಕೊಡುವುದಿಲ್ಲ. ಜತೆಯಲ್ಲಿ ಸ್ವಲ್ಪ ಬೆಲ್ಲವನ್ನು ಕೊಡುವುದು ರೂಢಿ.

ಈ ತೊಂದರೆ? ಬೇಸರ, ಬೇಸರ, ಅಂದರೆ ಬೇಸರ . . . ಬೆಲ್ಲದ ತುಂಡಿಗಾದರೂ ಒಬ್ಬಿಬ್ಬರು ಬ್ರಾಹ್ಮಣರು ಬರುತ್ತಾರೆಯೋ ಎಂದು ನೋಡಿದರೆ ಇವತ್ತು ಅವರೂ ಕಾಣೆ . . . .

(ಸಣ್ಣಪ್ಪ ಭಟ್ಟನು ಬಾಯಿಯಲ್ಲಿ ಏನೋ ಮಣಮಣ ಎನ್ನುತ್ತ ಆ ಹಾದಿಯಾಗಿ ಬರುವನು.)

**ಸಣ್ಣಪ್ಪ:**— ಹರಿ, ಹರಿ–ಎಂಥ ಬಿಸಿಲು ಇದು. ಈ ದರಿದ್ರ ಬಿಸಿಲಿಗೆ ಯಾರು, ಏನು ಎಂದು ಕನಿಕರವೇ ಇಲ್ಲ. ಹಾಂ, ಬಂತು ಮಾಣೇಶ್ವರನ ಕಟ್ಟೆ. ನಮ್ಮ ಮಾಣೇಶನಿಗೆ ಒಳ್ಳೆ ಕಸಬು ಸಿಕ್ಕಿತು. ಕುಳಿತಲ್ಲಿಂದ ಏಳಬೇಕಾಗಿಲ್ಲ. ವರ್ಷಕ್ಕೊಂದು ಮುವ್ವತ್ತು ಮುಡಿ* ಅಕ್ಕಿ ಉಂಬಳಿ ಧರ್ಮಕ್ಕೆ (ಬಳಿಗೆ ಬಂದು) ಮಾಣೇಶ, ಏನು ಬೆಲ್ಲದ ತುಂಡಿದೆಯೋ ಅಥವಾ ಬರಿ ನೀರೋ?

**ಮಾಣೇಶ:**— ಇರುವವರಿಗುಂಟು, ಇಲ್ಲದಿರುವವರಿಗಿಲ್ಲ.

**ಸಣ್ಣಪ್ಪ:**— ಅಂದರೆ?

**ಮಾಣೇಶ:**— ಅಂದರೆ ಎಲ್ಲರಿಗೂ ಬೆಲ್ಲವನ್ನು ಕೊಡುತ್ತ ಹೋದರೆ ಪೂರೈಸೀತೆ? ಏನೋ ನಾಲ್ಕು ತುಂಡುಗಳನ್ನು ಇರಿಸಿಕೊಂಡು ಕುಳಿತಿರುವುದು. ಯಾವುದಕ್ಕೂ ಅಪಾತ್ರದಾನ ಆಗಬಾರದಲ್ಲ.

**ಸಣ್ಣಪ್ಪ:**— ನಿನ್ನದೇನು ಗಂಟು ಖರ್ಚು? ಅಗ್ಗದ ಉಂಬಳಿಯಿದೆಯಲ್ಲ. ಅದಕ್ಕೆಂದೇ ಒಂದೋ ಎರಡೋ ಮಣ ಬೆಲ್ಲ ಸಿಗುತ್ತದಲ್ಲ.

**ಮಾಣೇಶ:**— ಒಳ್ಳೇ ಲೆಕ್ಕ ನಿನ್ನದು ಅದನ್ನೆಲ್ಲಾ ಇಲ್ಲೇ ಖರ್ಚು ಮಾಡಿದರೆ ಊರಿಂದೂರಿಗೇ ಹೊಟ್ಟೆನೋವು ತೊಡಗೀತು. ಅದಿರಲಿ ಮಹಾರಾಯ, ನಿನಗೂ ಬಿತ್ತಲ್ಲ "ಕೃಚ್ಛ್ರ." ನೂರು

---

*ಅಕ್ಕಿಯ ಒಂದು ಮಾನ.

ರೂಪಾಯಿಗಳೋ ಎಷ್ಟು ಅದು? ಏನು ಮಾಡಿದೆ ಮಹಾರಾಯ? ಮೊನ್ನೆ ಹತ್ತು ರೂಪಾಯಿಗಳಿಗಾಗಿ ಊರೆಲ್ಲಾ ತಿರುಗುತ್ತಿದ್ದೆ. ನಿನ್ನೆ ಮೊನ್ನೆ ಏನಾದರೂ ತುಂಬಾ ಪರಿಶೆ° ಜನರು ಸಿಕ್ಕಿದರೊ ಏನು?

**ಸಣ್ಣಪ್ಪ:** — ಬೆಲ್ಲನೀರು ಕೊಡು; ಎಲ್ಲವನ್ನೂ ಹೇಳುತ್ತೇನೆ.

**ಮಾಣೀಶ:** — (ಒಂದು ತುಂಡು ಬೆಲ್ಲವನ್ನು ಮುಂದಿರಿಸುವನು.)

**ಸಣ್ಣಪ್ಪ:** — ಬೆಲ್ಲದ ಪಾತ್ರೆ ತೆಗೆಯಬೇಡ; ಅಲ್ಲಿರಲಿ. ಅಂದರೆ (ಮಾತ ನಾಡುತ್ತ ಒಂದೊಂದೇ ತುಂಡು ಬೆಲ್ಲವನ್ನು ತಿನ್ನುತ್ತ) ಅಂದರೆ ಸಂಗತಿ ಯಿಷ್ಟೆ . . ನನ್ನ ಹತ್ತಿರ ನೂರು ರೂಪಾಯಿ ಬರಲಿಕ್ಕೆ ಇನ್ನೊಂದು ಜನ್ಮ ಬರಬೇಕು. ಅಥವಾ ಬಂದರೆ ಮನೆಯವಳು ಹಲ್ಲು ಮುರಿದು ಕಿತ್ತುಕೊಂಡಾಳು. ಇಷ್ಟರೊಳಗೇ ಮನೆಗೆ ಸುದ್ದಿ ಯಾಗಿ, ನಾನು ನೂರು ಕೊಟ್ಟೆನೆಂದು, ಸಹಸ್ರನಾಮವಾಯಿತು.

**ಮಾಣೀಶ:** — ಸಹಜವಲ್ಲವೋ ಸಣ್ಣಪ್ಪ, ಅಷ್ಟು ದೊಡ್ಡ ಕುಟುಂಬ ವಿರುತ್ತ . . . . ಅದೂ ಅಲ್ಲದೆ ಚಂದ್ರಿಯ ಪಾಲು ಸಲ್ಲುವುದು ಬೇರೆಯೇ ಇದೆ.

**ಸಣ್ಣಪ್ಪ:** — ಛೇ, ಹಾಗೆಲ್ಲ ಅಂದರೇನು? ಸುಮ್ಮನೆ ಚೇಷ್ಟೆ ಮಾಡ ಬೇಡ ಚಂದ್ರಿಗೆ ನನ್ನ 'ಕಂಟ್ರಾಕ್ಟೇ' ವರುಷಕ್ಕೆ ಮುವ್ವತ್ತು ಮುಡಿ ಅಕ್ಕಿ ಎಂದು. ಮಠದ ಸಂಬಳ, ಅಲ್ಲಿಗೆ ಹೋಯಿತು. ಅಂದರೆ ಗುಟ್ಟು ಇಷ್ಟೆ: ನಿನ್ನೆ ನಾನು ವಾಸ್ತವಕ್ಕೂ ಕೊಟ್ಟದ್ದು ಹತ್ತನ್ನು. ಅದಕ್ಕೆ ಪಾರುಪತ್ಯಗಾರರು ತೊಂಭತ್ತು ಕೂಡಿ ಸಿದರು.

**ಮಾಣೀಶ:** — ಅಂದರೆ ನಿನ್ನ ಬಗ್ಗೇ?

---

° ಯಾತ್ರಿಕರು.

**ಸಣ್ಣಪ್ಪ:**—ಎಂಥಾ ನನ್ನ ಬಗ್ಗೆ? ಅಲ್ಲಿಗೇ ಬರುವುದು, ಅಲ್ಲಿಂದಲೇ ತೆಗೆಯುವುದು. ಆ ರೀತಿ 'ಗಿಲೀಟು' ಮಾಡದಿದ್ದರೆ ಸದಾಶಿವ ರಾಯರಂಥವರಿಂದ ೫೦೦೦ ಕೇಳುವುದು ಸಾಧ್ಯವೆ?

**ಮಾಣೀಶ:**—ಅಷ್ಟೇ ಸರಿಯೇ? ಆದರೂ ಹತ್ತು ರೂಪಾಯಿಗಳೆಂದರೆ ಸ್ವಲ್ಪವೇ? ಈಗ ನಮ್ಮ ಕೈಲಾಸ ಮಠದ ಸ್ವಾಮಿಯವರಿದ್ದಾರೆ ಈ ರೀತಿ ಹಣದ ಸುಲಿಗೆಯಿಲ್ಲ ವಯಸ್ಸೂ ಆಯಿತು. ದುಡ್ಡಿನ ಆಶೆ ಎಳ್ಳಷ್ಟಿಲ್ಲ . . . . ಬಂದಾಗ ಚಂದ್ರಿ ಹಾಗಿರುವವಳನ್ನು . . . .

**ಸಣ್ಣಪ್ಪ:**—ಅದಕ್ಕೆ ನಮ್ಮ ಸ್ವಾಮಿರಾಯರು. ಬಿಡು, ಬಿಡು . . . ಒಂದು ಹೊಲೆಯರ ಪಿಳ್ಳೆ ಬಂದಿತು. ನಿನ್ನೆ ಆ ಚಿದಾನಂದನಿಗೆ ಬಹಿಷ್ಕಾರ ಕೊಟ್ಟದ್ದೆಂಬುದು ಇಷ್ಟು ಹಾಲು ಕುಡಿದಹಾಗಾಯಿತು ಅವನೊಬ್ಬನಿಂದಾಗಿ ಇಡಿ ಬ್ರಾಹ್ಮಣ ಧರ್ಮವೇ ವರ್ಣ ಸಂಕರ ಆಗುತ್ತದೆ. ಒಂದಿರಿಸಬಾರದು, ಅಂಥ ತಲೆತಿರುಕ ಪಿಳ್ಳೆಗಳನ್ನು.

(ಮೂಂಕುವು ಆ ಹಾದಿಯಾಗಿ ಬಂದು, ನೀರಿಗಾಗಿ ಅರವಟ್ಟಿಗೆಯ ಮುಂದೆ ನಿಲ್ಲುವನು.)

**ಮೂಂಕು:**—ಅಯ್ಯಾ, ಹಾಳೆಗಿಷ್ಟು§ ನೀರು . . . .

**ಮಾಣೀಶ:**—ನನ್ನ ಆಲೋಚನೆಯೂ ಅದೇ. ಅಂದರೆ ಇನ್ನು ಆ ರೀತಿ ಮಾಡುವವರನ್ನು ಸಹ ಊರಲ್ಲಿ ಇರಗೊಡಿಸಬಾರದು. ಬರೇ ಬಹಿಷ್ಕಾರ ಸಾಲದು. ಕಲ್ಲು ಹೊಡೆದು ಓಡಿಸಬೇಕು. ಧರ್ಮಜೋಗಿಗಳೆಲ್ಲಿ!

**ಮೂಂಕು:**—ಅಯ್ಯಾ, ನೀರು.

---

§ಅಡಿಕೆಯ ಹಾಳೆಯಿಂದ ಮಾಡುವ ಒಂದು ಟೊಪ್ಪಿ.

**ಸಣ್ಣಪ್ಪ:**—ಸ್ವಲ್ಪ ನಿಲ್ಲು, ಇಲ್ಲಿ ಮಾತನಾಡುತ್ತಿರುವುದು ಕಾಣು ವುದಿಲ್ಲವೇ? ಪ್ರಾಣಹೋಗುತ್ತದೆಯೋ ಅಷ್ಟರಲ್ಲಿ? ಸ್ವಲ್ಪ ನಿಲ್ಲು.

**ಮಾಂಕು:** — ಅಲ್ಲ ಬುದ್ಧಿ, ತಲೆ ತಿರುಗುತ್ತದೆ . . . ಸ್ವಲ್ಪ ನೀರು.

**ಮಾಣೀಶ:**—ತಲೆತಿರುಗದೆ ಇರುತ್ತದೆಯೋ? ಮೂಗಿನ ಸೊಳ್ಳೆಯು ವರೆಗೂ ಹೆಂಡ ಕುಡಿದರೆ . . . .

**ಮಾಂಕು:** – ಪ್ರಮಾಣಕ್ಕೂ ಹೆಂಡ ಕುಡಿಯಲಿಲ್ಲ ಬುದ್ಧಿ.

**ಸಣ್ಣಪ್ಪ:**—ಅವನೆಂದದ್ದು ಕೇಳಿದೆಯೋ ಮಾಣೀಶ: "ನೀರು" ಬೇಕಂತೆ. ಮುಂಡೇಗಂಡನಿಗೆ "ನೀರು" ಬೇಕಂತೆ. "ಬಾಯರು"* ಅನ್ನಲಿಕ್ಕೆ ಸಂಕಟ. ನೀರು! ನೀರು ಇಲ್ಲಿ ಇಲ್ಲ. ನಡಿ. ಬೇಕಾದರೆ ನಿನಗೆ ಇಷ್ಟು ಬಾಯರು ಹಾಕುವ.

**ಮಾಂಕು:**—ಏನೋ ಬಾಯಿತಪ್ಪಿ ಹಾಗೆಂದೆ ಬುದ್ಧಿ. ಘಟ್ಟದ ಮೇಲೆ ಹಾಗೆಯೇ . . . .

**ಮಾಣೀಶ:**—ಮುಚ್ಚು ಬಾಯಿ. ಘಟ್ಟದ ಮೇಲೆ ಹಾಗೆನ್ನುತ್ತಾರಂತೆ . . . ಶೋಕು ಇವನಿಗೆ. ಇದೇನು ಘಟ್ಟವಲ್ಲ. ಅಲ್ಲಿರಿಸಿ ದೂರಹೋಗು.

(ಮಾಂಕುವು ಹಾಳೆಯಿರಿಸಿ ದೂರಸರಿಯುವನು )

**ಮಾಣೀಶ:**—(ಅದಕ್ಕೆ ನೀರು ಸುರಿದು ಇತ್ತ ಬಂದು) ಅಬ್ಬಬ್ಬ ಕಲಿಕಾಲ! ಬಾಯರು ಹೋಗಿ ನೀರಾಯಿತು. ಕೂಳು ಹೋಗಿ ಅನ್ನವಾಯಿತು. ಇನ್ನು ಯಜ್ಞೋಪವೀತ ಹಾಕುವುದೊಂದೇ ಉಳಿದಿದೆ. ಯಾವುದೋ ಊರಿನಲ್ಲಿ ಅದೂ ಆಗಿದೆಯಂತೆ. ಇಲ್ಲೂ ಅಂಥವರಿದ್ದಾರೆ, ನಮ್ಮ ಚಿದಾನಂದನ ಹಾಗಿರುವವರು. ಇವ

---

*ಕೀಳೆನಿಸಲ್ಪಡುವ ಜನರು ನೀರನ್ನು ಕರೆಯುವ ಹೆಸರು.

ನದೇ ಜನಿವಾರ, ಜನಿವಾರ ಎಂಥದು "ಕೊಳುಬಳ್ಳಿ"‡—ಅವರ ಕೊರಳಿಗೆ ಹಾಕಿದರೆ ಮುಗಿಯಿತು. ನಾವು ದ್ರಾವಿಡ ಬ್ರಾಹ್ಮಣ ರಾಯಿತು; ಇವರು ಆದಿದ್ರಾವಿಡ ಬ್ರಾಹ್ಮಣರಾಯಿತು. ಆಗುತ್ತದೆ, ಆಗುತ್ತದೆ ಏನೂ ಸಂದೇಹ ಬೇಡ

**ಸಣ್ಣಪ್ಪ:**—ನಮ್ಮೂರಲ್ಲಿ ಆಗುವುದಕ್ಕೆ ಮೂರುಲೋಕ ತಲೆಕೆಳಗಾಗಬೇಕು. ನಮ್ಮ ಸ್ವಾಮಿರಾಯರು ಇಂಥ ನೂರು ಜನರಿಗೆ ಸಾಕು. ಹುಲಿ, ಹುಲಿ. ಅಷ್ಟು ಬಿಗುವಿಲ್ಲದಿದ್ದರೆ ಪ್ರಯೋಜನವಿಲ್ಲ . .

**ಮೂಣೀಶ:**—(ಮೂಂಕುವು ಇನ್ನೂ ನೀರನ್ನು ಕುಡಿಯದ್ದನ್ನು ಕಂಡು) ಏನು, ನೀರು ಮುಟ್ಟಲೇ ಇಲ್ಲ! ಅದಕ್ಕೆ ವಿಷಗಿಷ ಬೆರೆಸಲಿಲ್ಲ . .

**ಮೂಂಕು:**–ಬೆಲ್ಲದ ತುಂಡು ಕೊಡಲಿಕ್ಕೆ ಮರೆತೇಹೋಯಿತು ಬುದ್ಧಿ. . .

**ಮೂಣೀಶ:**— ಬೆಲ್ಲದ ತುಂಡೇ! ಅಪ್ಪನ ಮನೆಯ ಗಂಟೇನು? ಬೇಕಾದರೆ ಕುಡಿ, ಇಲ್ಲವಾದರೆ ಬಿಡು

**ಮೂಂಕು:**— (ನೀರನ್ನು ಎತ್ತಿ) ದೇವರೇ ಗತಿ, ಈ ಬ್ರಾಂಬ್ರಿಗೆ ಒಟ್ಟು ಬಡವರ ಮೇಲೆ ಸಿಟ್ಟೇ ಬರುವ ಹಾಗೆ ಕಾಣುತ್ತದೆ.

(ಚಿದಾನಂದರಾಯನು ಆ ಹಾದಿಯಾಗಿ ಬರುವನು.)

**ಸಣ್ಣಪ್ಪ:**— ಬಂತು ಚಿದಾನಂದ ಸ್ವಾಮಿಗಳ ಸವಾರಿ.

**ಮೂಣೀಶ:**— ನಿಜಕ್ಕೂ ಅವರೊಬ್ಬರು ಸ್ವಾಮಿರಾಯರೇ. ಚಾಂಡಾಲ ಮಠದ ಶ್ರೀಮತ್ ಕಾಳಹಂಸ ಪರಿವ್ರಾಜಕಾಚಾರ್ಯ . . .

**ಸಣ್ಣಪ್ಪ:**—ಸ್ವಾಮಿ, ಚಿದಾನಂದರಾಯರೇ. ಬಿಸಿಲಾಯಿತು, ಸ್ವಲ್ಪ ನೀರು ಕುಡಿದುಕೊಂಡು ಹೋಗಿ

**ಮೂಣೀಶ:**— ಛೀ, ಇಲ್ಲೆಲ್ಲ ಅವರು ನೀರು ಕುಡಿಯಲಿಕ್ಕಿಲ್ಲ. ಅಲ್ಲಿ

---

‡ಕೊಳುಬಳ್ಳಿ— ಇದು ಜನಿವಾರಕ್ಕೆ ತಿರಸ್ಕಾರದ ಹೆಸರು. ಅಪಾತ್ರರ ಪಾಲಿಗಿರುವ ಹಗ್ಗವೆಂದು.

ಹೊಲಗೇರಿಯ ಹತ್ತಿರ ಸರಕಾರಿ ಬಾವಿಯಿದೆ. ಒಳ್ಳೆ ಆರೋಗ್ಯಕರವಾದ ನೀರು . . . .

**ಚಿದಾನಂದ:**— ನಿಜ, ಅಲ್ಲಿ ಕ್ರಿಮಿಕೀಟಗಳಿದ್ದರೆ ನೀರಿನಲ್ಲಿ ಮಾತ್ರ. ಇಲ್ಲಿ ಅದರ ಒಳಗೂ ಹೊರಗೂ ಕೂಡಿಯೇ ಇವೆ . . . .

(ತೆರಳುವನು.)

**ಸಣ್ಣಪ್ಪ:**— ನೋಡಿದೆಯಾ ಮಾಣೇಶ, ಅವನ ಸೊಕ್ಕನ್ನು. ಅವನೇನೆಂದನು? ಇಲ್ಲಿ ಕ್ರಿಮಿಕೀಟಗಳು ಒಳಗೂ ಹೊರಗೂ . . . . ಅಂತೆ! ಏನೆಂದು ಅರ್ಥವಾಯಿತಲ್ಲ?

**ಮಾಣೇಶ:**— ಏನರ್ಥ ಅದಕ್ಕೆ?

**ಸಣ್ಣಪ್ಪ:**— ಒಳ್ಳೇ ಜನ ನೀನು; ನಮಗೆ ಅಂದದ್ದು ಅವನು. ಹೊರಗಿನ ಕೀಟ ಅಂದರೆ ನಾವು! ಅಬ್ಬ, ಅವನ ಸೊಕ್ಕೇ! ಇದನ್ನು ಇಳಿಸದಿದ್ದರೆ ನಾನು ಹುಟ್ಟಿದ್ದೇ ಸುಳ್ಳು. ಏನೇ ಆಗಲಿ, ನನಗೆ ಹೀಗೆ ಕಾಣುತ್ತದೆ: ಈ ಹೊಲೆಯರ ಮಕ್ಕಳನ್ನು ಹೆದರಿಸಿ, ಅವರು ಸಹ ಇವನನ್ನು ಕೇರಿಯ ಒಳಕ್ಕೆ ಬಿಡದಂತೆ ಮಾಡಬೇಕು.

**ಮಾಣೇಶ:**—ಅದು ವಿನಹ ಬೇರೆ ಉಪಾಯವಿಲ್ಲ, ಹೂಂ. ಇನ್ನೊಂದು ಕರಿಕಾಲು ಬಂದಿತು. ಮಾತನಾಡಲಿಕ್ಕೆ ಬಿಡುವುದಿಲ್ಲ. ಇದು ಬಾಂಕು! ಚಿದಾನಂದರಾಯರ ಪಟ್ಟದ ಶಿಷ್ಯ!

(ಬಾಂಕುವು ಬಂದು ಕೈಜೋಡಿಸಿ ನಿಲ್ಲುವನು.)

**ಸಣ್ಣಪ್ಪ:**— ಏನು ನೀರಿಗೆ ಬಂದೆಯೋ, ಗಂಗೋದಕಕ್ಕೋ?

**ಬಾಂಕು:**— ಬಾಯುರು ಬೇಡ– ಬುದ್ಧಿ

**ಸಣ್ಣಪ್ಪ:**— ಹೂಂ, ಇವನಿಗೆ 'ಬಾಯುರು' ಎನ್ನಲಿಕ್ಕೆ ಬರುತ್ತದೆ. ಮತ್ತೇತಕ್ಕೆ . . . . .?

**ಬಾಂಕು:**— ಏನಿಲ್ಲ, ಬ್ರಾಹ್ಮಣರ ಹತ್ತಿರ ಪ್ರಶ್ನೆ ಕೇಳಲಿಕ್ಕೆ ಬಂದೆ.

**ಸಣ್ಣಪ್ಪ:**—(ಮೆಲ್ಲಗೆ) ಒಳ್ಳೆ ಸಮಯ, ಚೆನ್ನಾಗಿ ಕಾಯಿಸು ಮಾಣೇಶ.. ಇದೇ ಸಮಯ . . . .

**ಮಾಣೇಶ:**— ಏನು ಸಂಗತಿಯೋ? ಬಾಂಕು . . . .

**ಬಾಂಕು:**— ಬುದ್ಧಿ, ನಮ್ಮ ಕೇರಿಯಲ್ಲಿ ವಾಂತಿಭೇದಿ ತೊಡಗಿದೆ. ಬೆಳಗಾದ ಮೇಲೆ ಎರಡು ಹೆಣವಾಯಿತು. ನನ್ನ ಗುಡಿಸಲಿನಲ್ಲಿ ಎರಡು ಮಕ್ಕಳು ಮಲಗಿದ್ದಾರೆ. ಏನು ಅವಸ್ಥೆಯೆಂದು ತಿಳಿಯುವುದಿಲ್ಲ ಅಪ್ಪಣೆಯಾಗಬೇಕು . . . . ದೇವರೇ ಎಂದು ನಂಬಿಕೊಂಡು ಬಂದೆ.

**ಸಣ್ಣಪ್ಪ:**— ಮಾಣೇಶ ಭಟ್ಟರೆ, ನಮ್ಮ ಬಾಂಕು ಅಂದರೆ ಈಗಿನ ಕಾಲದ ಮನುಷ್ಯನಲ್ಲ. (ಒಳಸ್ವರದಿಂದ) ಮಾಣೇಶ, ಅಲ್ಲಿಗೆ ಮುಟ್ಟಿಸಿಬಿಡು— ಏನು . .

**ಬಾಂಕು:**— ಇಲ್ಲಿರಿಸಲೇ ಬುದ್ಧಿ . . . (ಎಂದು ಕಾಣಿಕೆಯಾಗಿ ತಂದ ಕಾಸನ್ನು ದೂರದಲ್ಲಿ ಇರಿಸಿ ಕೈಮುಗಿದು ನಿಂತುಕೊಳ್ಳುವನು.)

**ಮಾಣೇಶ:**— ಆಯಿತು. ಇರಿಸು. ಸಣ್ಣಪ್ಪ ತಂದುಬಿಡು . . . .

(ಪ್ರಶ್ನೆಗೆ ಸಜ್ಜಾಗುವನು.)

**ಸಣ್ಣಪ್ಪ:**— (ಅಲ್ಲೇ ಹೋಗಿ ಹಣವನ್ನು ಎತ್ತಿಕೊಂಡು) ಬರೇ ನಾಲ್ಕಾಣೆ! ಇನ್ನುಮುಂದೆ ಮಾಣೇಶ, ಎಂಟಾಣೆ ಕಡಿಮೆ ಪ್ರಶ್ನೆ ಹೇಳಬಾರದು. ಹೋಗಲಿ ಅವರು, ಚಿದಾನಂದನಲ್ಲಿಗೆ.

**ಮಾಣೇಶ:**— ಅವನಲ್ಲಿಗೆ ಹೋದರೆ, ಇದೂ ಹೋದೀತು. ಏನು ಬಾಂಕು, ತೆಂಗಿನಕಾಯಿ ತಾರದೆ ಪ್ರಶ್ನೆ ನೋಡುವುದು ಹೇಗೆ?

**ಬಾಂಕು:**— ಗುಡಿಯಲ್ಲಿರಲಿಲ್ಲ ಬುದ್ಧಿ. ಸಾಯಂಕಾಲಕ್ಕೆ ತರುತ್ತೇನೆ; ಅಷ್ಟು ರಿಯಾಯತಿ ತೋರಿಸಿ.

**ಮಾಣೀಶ:** —ಅಲ್ಲ, ಜೋಡುಕಾಯಿ ಇಲ್ಲದೆ ಪ್ರಶ್ನೆ ನೋಡುವುದು ಹೇಗೆ? ನನಗೇನು ಅದರಿಂದ? ನಿನಗೇನೆ ಬಾಧಕ.

(ಪ್ರಶ್ನೆ ನೋಡುತ್ತ ನೋಡುತ್ತ ನಾನಾತರದ ಮುಖವಿಕಾರಗಳನ್ನು ಮಾಡುತ್ತ)

ಮನೆಯಲ್ಲಿ ಮಾಂತಿಭೇದಿಯಲ್ಲವೇ?

**ಮಾಂಕು:** —ಹೌದು ಬುದ್ಧಿ

**ಮಾಣೀಶ:** —ಮಾರಿಯಮ್ಮನಿಗೆ ನಿಮ್ಮ ಕೇರಿಯ ಮೇಲೆಯೇ ಸಿಟ್ಟು ಬಂದಿದೆ. ಈ ಸಾರಿ ಇಡಿ ಹೊಲಗೇರಿಯೇ ಉರಿದುಹೋಗುವ ಹಾಗೆ ಕಾಣುತ್ತದೆ. ಈಗ ಮಾಂತಿಭೇದಿಯಾಯಿತಲ್ಲ; ಇದು ಮುಗಿಯುವುದರಲ್ಲಿ ಬೆಂಕಿಬರುತ್ತದೆ—ಎಂದು ಹೇಳುತ್ತದೆ. ಒಟ್ಟು ಹಾಳಾಗುತ್ತೀರೋ ನೀವು.

**ಮಾಂಕು:** —ಅಯ್ಯೋ ಬುದ್ಧಿ, ಮುಂದೇನು ಗತಿ! ಏನಾದರೂ ಪರಿಹಾರ ಹೇಳಿ ಬುದ್ಧಿ. ನೀವೆಂದಹಾಗೆ ನಡೆದುಕೊಳ್ಳುತ್ತೇವೆ. ಮಾರಿತಾಯಿಗೆ ಪೂಜೆಮಾಡಿಸುವುದಾದರೂ ಮಾಡಿಸುವ ಬುದ್ಧಿ. ಒಂದು ಸಾರಿಗೆ . . .

**ಸಣ್ಣಪ್ಪ:** —ಮಾಣೀಶ ಭಟ್ಟರೆ, ಒಂದು ಸಾರಿಗೆ ಅವನಿಗೆ ಎಲ್ಲಾ ಉಪಾಯ, ಸಮಾಧಾನ ಹೇಳಿ ಇನ್ನೊಂದು ಸಾರಿ ಅವನು ಎಲ್ಲ ಮರೆತು ಚಿದಾನಂದರಾಯರಲ್ಲಿಗೇ ಹೋಗುತ್ತಾನೆ.

**ಮಾಣೀಶ:** —(ವಿಚಾರಮಾಡಿ) ಮಾಂಕು, ನಾನು ಹೇಳಿದರೆ ನಿನಗೆ ಹೆಚ್ಚಾಗುತ್ತದೆ. ನೂರುಸಾರಿ ಹೇಳಲಿಲ್ಲವೆ ನಾನು? ಇದೆಲ್ಲ ವಿಪರೀತದಿಂದ ನಿಮ್ಮ ಕುಲ ಕ್ಷಯವಾಗುತ್ತದೆ ಎಂದು. ನೀವೆಲ್ಲಿ ಕೇಳುತ್ತೀರಿ? ನಿಮಗೆ ತತ್ಕಾಲಕ್ಕೆ ನಾಲ್ಕು ಕಾಸು ಸಿಕ್ಕಿ ಕಳ್ಳು ಕುಡಿದದ್ದೇ ಲಾಭ. ನಮ್ಮ ಮಾತನ್ನು ಎಲ್ಲಿ ಕೇಳುತ್ತೀರಿ?

**ಬಾಂಕು:**— ಬುದ್ಧಿ, ಏನೆಂದು ಸರಿಮಾಡಿ ತಿಳಿಸಿ. ನಿಮ್ಮ ಮಾತನ್ನು ಖಂಡಿತಕ್ಕೂ ಮೀರುವಹಾಗಿಲ್ಲ.

**ಸಣ್ಣಪ್ಪ:**— ಹೌದು, ಇಷ್ಟರತನಕ ಮೀರಿದ್ದರೆ ಅಲ್ಲವೆ ಈಗ ಮೀರುವುದು. ಮಿಣ್ಣಗಿನ ಬೆಕ್ಕಿನ ಮರಿಗಳು, ಕೆಲಸ ಆಗುವ ತನಕ. ಅಬ್ಬಾ, ಇವರಿಗೂ ಇಷ್ಟು ಬುದ್ಧಿವಂತಿಕೆ ಬಂದಿತಲ್ಲ.

**ಬಾಂಕು:**— ಸಿಟ್ಟಾಗಬೇಡಿ ಬುದ್ಧಿ.

**ಸಣ್ಣಪ್ಪ:**— ಅಲ್ಲ, ನನ್ನ ಸಿಟ್ಟು ನಿನ್ನನ್ನೇನು ಮಾಡೀತು? ಬಡವನ ಸಿಟ್ಟು, ಹೊಟ್ಟೆಗೆ ಮಾರಿ.

**ಮಾಣೇಶ:**— ಬಾಂಕು–ಕೇರಿಗೆ ಬ್ರಾಹ್ಮಣರನ್ನು ಬರಲಿಕ್ಕೆ ಬಿಟ್ಟುದರಿಂದ ಹೀಗಾಯಿತು–ಎಂದು ಹೇಳುತ್ತದೆ. ನಾನು ಹೊಟ್ಟೆಕಿಚ್ಚಿನಿಂದ ಹೇಳುತ್ತೇನೆ ಎಂದು ತಿಳಿಯಬೇಡಿ ಯಾರಾರು ಯಾವಾವ ಸ್ಥಳದಲ್ಲಿರಬೇಕೋ ಅಲ್ಲಿದ್ದರೆ ಚೆಂದ. ಕರಿನಾಯಿ ಬೆಳ್ಳಗಾದೀತೇ? ನೀನೇ ಹೇಳು. ಬೇಡ, ಇವತ್ತಿನಿಂದಲಾದರೂ ಅದನ್ನು ಬಿಡು. ಕೇರಿಯೊಳಗೆ ಬೇರೆಯವರಿಗೆ ಕಾಲಿರಿಸಲು ಅವಕಾಶಕೊಡಬೇಡಿ. ಅದರಿಂದ ಕೆಡುವವರು ನೀವು . . . .

**ಸಣ್ಣಪ್ಪ:**— ಬಿಡುವುದೇಕೆ? ಈಗ ಚಿದಾನಂದನ ಸವಾರಿ ಅಲ್ಲಿಗೇ ಹೋದದ್ದು.

**ಬಾಂಕು:**— ಇನ್ನು ಹಾಗೆಲ್ಲ ಮಾಡುವುದಿಲ್ಲ ಅವರ ಕಾಲುಹಿಡಿದಾದರೂ ಹೋಗಲಿಕ್ಕೆ ಹೇಳುತ್ತೇವೆ. ನಮಗೆಲ್ಲ ಏನು ಗೊತ್ತಿದೆ ಬುದ್ಧಿ! ಈಗ ಬಂದುದಕ್ಕೆ ಏನಾದರೂ ಉಪಶಮನ ಹೇಳಿ ಬುದ್ಧಿ.

**ಮಾಣೇಶ:**— ಇಗೊ, ಮಾರಿತಾಯಿಗೊಂದು ದೊಡ್ಡ ಪೂಜೆ ಹೇಳಿಕೊಳ್ಳಿ. ನೂರು ತೆಂಗಿನಕಾಯಿ, ಅರ್ಧಮುಡಿ ಅಕ್ಕಿ, ಇನ್ನೊಂದು ಹತ್ತು ರೂಪಾಯಿಗಳಾದರೂ ಬೇಕಾಗಬಹುದು ಕೇರಿಯವ

ರಿಂದ ಒಟ್ಟುಕೂಡಿಸು. ಬಾಕಿ ಕುರಿಯೋ, ಕೋಳಿಯೋ, ನಿಮ್ಮಲ್ಲೇ ಇದೆಯಲ್ಲ . . . . ಓಡು, ಓಡು . . . .

(ಅವಸರದಿಂದ ಹೊರಡುವನು.)

**ಸಣ್ಣಪ್ಪ:**— ಸರಿಯಾಯಿತು. ಹೀಗೆ ಅಲ್ಲಿಂದಲ್ಲೇ ಕೀಲು ಹೊಡೆಯುದಿದ್ದರೆ ನಮ್ಮ ಗೌರವವೆಲ್ಲಾ ಸೋರಿಯೇ ಹೋದೀತು. ಹೋ– ನಮ್ಮ ಅಶ್ವತ್ಥನ ಸವಾರಿ ಬಂದಿತು. ಏನು ಸಂಗತಿಯೋ . . . ಅಶ್ವತ್ಥ, ಒಂದನೇ ನಂಬರ್ ಬೆಲ್ಲವಿದೆ. ಒಂದಿಷ್ಟು ನೀರು ಕುಡಿ.

(ಅಶ್ವತ್ಥನು ಅವಸರದಿಂದ ಬರುವನು.)

**ಅಶ್ವತ್ಥ:**— ನೀರು ಹಾಳಾಯಿತು. ಮಾಣೇಶ, ಬೇಗ ಮನೆಗೆ ಓಡು . . . . ಹೂಂ ಏಳು, ಏಳು . . . .

**ಮಾಣೇಶ:**— ಏನು ಸಂಗತಿ ಮಹಾರಾಯ?

**ಅಶ್ವತ್ಥ:**— ನಿನ್ನ ಕಿರಿ ಹುಡುಗನಿಗೆ ಏನೋ ಕಾಯಿಲೆ, ಬೇಗ ಮನೆಗೆ ಬರಬೇಕು— ಎಂದು ತಿಳಿಸುವಂತೆ ಹೇಳಿದರು. ಓಡು, ಓಡು...

**ಮಾಣೇಶ:**— ಅಯ್ಯೋ ದೇವರೆ . . . (ಎಂದು ಅರವಟ್ಟಿಗೆ ಸಾಮಗ್ರಿ ಕೂಡಿಸಲು ಓಡಾಡುವನು)

**ಸಣ್ಣಪ್ಪ:**— ನೀನು ಹೋಗು, ನೀರಿನ ಪಾತ್ರೆ ತೆಗೆದುಕೊಂಡು ಹೋಗು. ಬೆಲ್ಲ ಇಲ್ಲಿರಲಿ, ನಾನಿದ್ದೇನಲ್ಲ . . . .

(ಅಶ್ವತ್ಥನೂ ಮಾಣೇಶನೂ ತೆರಳುವರು.)

(ಬೆಲ್ಲವನ್ನು ಮೆಲ್ಲುತ್ತ) ಏನೇ ಆಗಲಿ, ಬೆಲ್ಲ ಮಾತ್ರ ಥೇಟು ಸಕ್ಕರೆಯೇ! (ತೆರಳುವನು)

(ಚಿದಾನಂದನು ಅವಸರದಿಂದ ಪ್ರವೇಶಿಸುವನು.)

**ಚಿದಾನಂದ:**— ನಿಜಕ್ಕೂ ಇವರಂಥ ತಂತ್ರಗಾರರೇ ಇಲ್ಲ, ಬಡವರ ಆಪತ್ತಿನಲ್ಲಿ ಕೈಯ್ಯಿಂದಾದ ಸಹಾಯಮಾಡುವ ಎಂದರೆ ಅದಕ್ಕೂ

ಎಡೆಯಿಲ್ಲದಂತೆ ಮಾಡಿದರಲ್ಲ ಈಗೇನು ಮಾಡಲಿ! ಈ ಜನರು ಸಾವಿಗೆ ತುತ್ತಾಗುವುದನ್ನು ಹೇಗೆ ಕಾಣಲಿ? ಬೆಳಗಿನಿಂದ ಇಷ್ಟರೊಳಗೆ ನಾಲ್ಕು ಸಾವಾದುವು. ಬರೇ ವಾಂತಿಭೇದಿಯದು ವೈದ್ಯರ ಸಹಾಯವನ್ನು ಕರೆಯೋಣವೆಂದರೆ ಬೇಡವೆನ್ನುತ್ತಾರೆ. ನಾನು ಅವರ ಕೇರಿಗೆ ಇನ್ನುಮುಂದೆ ಕಾಲಿರಿಸಬಾರದೆಂದು ಅತ್ತು ಅತ್ತು ಬೇಡುತ್ತಾರೆ ಅಯ್ಯೋ ಮೌಢ್ಯವೆ! ಈ ಜನರಿಗೇನೆನ್ನಲಿ! ಯಾರೋ ಬ್ರಾಹ್ಮಣರು ಅವರನ್ನು ವಂಚಿಸಿರಬೇಕು. ನಮ್ಮ ಆಗಮನದಿಂದಾಗಿ ಹೀಗೆಲ್ಲ ಆಯಿತು ಎಂದಿರಬೇಕು. ಇವರು ಸುಲಭ ವಂಚಿತರು. ಹೇಳಿದ್ದನ್ನೆಲ್ಲಾ ನಂಬುವವರು. ಮೊದಲೇ ಚಿತ್ತದಾಸ್ಯಕ್ಕೆ ಬಿದ್ದು 'ನಾವು ಕೀಳು' ಎಂಬ ಭಾವವು ರಕ್ತದಲ್ಲಿ ಬೆರೆತುಹೋಗಿದೆ . . . . ಇಲ್ಲ, ಇನ್ನು ಯೋಚಿಸಿ ಫಲವಿಲ್ಲ ನಾನು ಕೊಟ್ಟ ಔಷಧವನ್ನು ಅವರು ಮುಟ್ಟುವಂತಿಲ್ಲ. (ಕಾಶ್ಯಪನ ಆಗಮನವಾಗುವುದು)

ಈ ಮನುಷ್ಯನಾರಿರಬಹುದು? ವಿದೇಶಿಯನು ನಿನ್ನೆ ದಿನ ಮಠಕ್ಕೂ ಬಂದಿದ್ದನು. ಅವನಿಗಲ್ಲೇನು ಕೆಲಸವಿದ್ದಿರಬಹುದು?

**ಕಾಶ್ಯಪ:** — (ನಮಸ್ಕರಿಸಿ) ಸ್ವಾಮಿ, ತಾವಾರು? ನಿನ್ನೆ ದಿನ ನಡೆದುದೇನದು? ಅವರು ನಿಜಕ್ಕೂ ಸನ್ಯಾಸಿಯರೇ . . . . ಅಥವಾ ಅದೊಂದು ನಾಟಕವಾಗಿತ್ತೇ? ನನ್ನ ತಾರುಣ್ಯದಲ್ಲಿ ಹೀಗಿರಲಿಲ್ಲ. ನಿಮಗೇಕೆ ಬಹಿಷ್ಕಾರವಿತ್ತರು?

**ಚಿದಾನಂದ:** - ನನಗೇ? ನಾನು ಹೊಲಗೇರಿಗೆ ಹೋಗಿಬರುತ್ತೇನೆಂದು. ನಮ್ಮ ನಾಡಿನಲ್ಲಿ ಹೊಲೆಯರನ್ನು ಮುಟ್ಟುವುದು ಅಪರಾಧವೆನಿಸುವುದು.

6

**ಕಾಶ್ಯಪ:** — ಅದನ್ನು ನಾನೂ ತಿಳಿದುಕೊಂಡೆ. ನನ್ನನ್ನೂ ಅದಕ್ಕಾಗಿ ಗದರಿಸಿದರು. ಆದರೆ ನಾನು ಅವರ ಪಂಗಡದವನಲ್ಲವೆಂದು, ಕೇವಲ ಮರುಳನೆಂದಿಷ್ಟೇ ಬಿರುದು ಅರ್ಪಿಸಿ ಕಳುಹಿಸಿಕೊಟ್ಟರು. ಇಲ್ಲಿನ ಬ್ರಾಹ್ಮಣ್ಯವು ದುಡ್ಡಿನಿಂದಲೇ ಬರುವಂತಿದೆ.

**ಚಿದಾನಂದ:** — ನಮ್ಮ ಊರಿನಲ್ಲಿ, ಎಂದಿನಿಂದಲೂ ಹೀಗೆಯೇ ನಡೆಯುತ್ತಿದೆ. ಈಗಂತು ನೋಡಿರಿ, ಹೊಲಗೇರಿಯಲ್ಲಿ ಭಯಂಕರ ವಾಂತಿಭೇದಿ ರೋಗವು ತೊಡಗಿದೆ. ಬೆಳಗಿನಿಂದ ನಾಲ್ಕು ಜನರಾಯಿತು ತೀರಿಕೊಂಡುದು. ಸಹಾಯಕ್ಕೆಂದು ಹೋದರೆ, ಬೇಡವೆಂದು ಅವರೇ ಅಟ್ಟಿದರು. ಈ ಬ್ರಾಹ್ಮಣರು ಅವರನ್ನು ತುಂಬಾ ಬೆದರಿಸಿರಬೇಕು. ಇತರರಾರನ್ನಾದರೂ ಅವರ ಬಳಿಗೆ ಕಳುಹಿಸೋಣವೆಂದು ಹೊರಟೆನು. ಹೋಗಲೇ?

**ಕಾಶ್ಯಪ:** — ಹೋಗುವಿರಾ? (ಚಿದಾನಂದನು ತೆರಳುವನು.) ಏನಿದು! ನನ್ನ ತಾರುಣ್ಯದಲ್ಲಿ ಇಂಥ ವಿಚಿತ್ರಗಳು ಇದ್ದಿರಲಿಲ್ಲ ಉತ್ತಮರೆನಿಸುವವರ ಬೆದರಿಕೆಯಿಂದಾಗಿ ಬಡಜನರು ನರಳಬೇಕೆ? (ಅಶ್ವತ್ಥದ ಕಟ್ಟೆಯನ್ನು ಕಂಡು) ಅಂದಿನ ಅಶ್ವತ್ಥ ವೃಕ್ಷವೇ ಇದಿರಬಹುದೇ? ನಾನೆಷ್ಟು ಸಾರಿ ಇದರ ನೆರಳಿನಲ್ಲಿ ವಿಶ್ರಮಿಸಿರಲಿಲ್ಲ. ಇಲ್ಲೊಂದು ಅರವಟ್ಟಿಗೆಯಿತ್ತು. ಈಗಲೂ ಒಂದೆರಡು ಗಡಿಗೆಗಳು ಕಾಣಿಸುತ್ತಿವೆ. ಅರವಟ್ಟಿಗೆಯು ಇನ್ನೂ ಇರಬಹುದೇ? ಇದ್ದರೆ ಆಶ್ಚರ್ಯವೇ ಸರಿ. ಬಾಯಾರಿ ಬರುವ ದಾರಿಹೋಕರಿಗೆ ನೀರನ್ನು ಕೊಡುವುದು ಪಾಪವೆಂದು ಇವರು ತಿಳಿಯದಿದ್ದುದು ಆಶ್ಚರ್ಯವೇ ಸರಿ . . . .

ಈ ಅಶ್ವತ್ಥ ವೃಕ್ಷವನ್ನು ನೋಡುವಾಗ ನನ್ನ ಇಷ್ಟನ ವಿಗ್ರಹವು ಇಲ್ಲಿ ಇರಲೂ ಬಹುದೆಂಬ ಸಂಶಯವಾಗುವುದು. ನಿನ್ನೆ ದಿನದ

ಆ ಸನ್ಯಾಸಿಯ ವರ್ತನೆಯಿಂದ ಹಾಗೆಯೇ ಅನಿಸಿತು. "ಗರ್ಭ ಗುಡಿಯನ್ನು ತೋರುವಿರಾ?"—ಎಂದರೆ ಅವರು ಸ್ತಬ್ಧರಾದರು. ದಂಡನೆಯ ಸುದ್ದಿಯನ್ನೇ ಬಿಟ್ಟು ಸುಮ್ಮನಾದರು. ನನ್ನನ್ನು ಮೆಲ್ಲಗೆ ಅಟ್ಟಿಯೂ ಬಿಟ್ಟರು. ನಿಜಕ್ಕೂ ಗರ್ಭಗುಡಿಯಲ್ಲಿ ನನ್ನ ಆನಂದದ ಮೂರ್ತಿಯಿರಬೇಕು. ಆದರೆ ಇನ್ನು ನನ್ನನ್ನು ಅವರು ದೇವಾಲಯದ ಒಳಕ್ಕೆ ಬಿಡುವುದುಂಟೆ? ಅದನ್ನು ಪ್ರವೇಶಿಸದೆ ನನ್ನ ಮೂರ್ತಿಯ ದರ್ಶನವೂ ಆಗಲಾರದು. ಏನು ಮಾಡಲಿ? ಯಾವುದರಿಂದ ಅವರನ್ನು ಒಲಿಸಲಿ? ಕಾಂಚನಕ್ಕೆ ಮರಳಾಗುವವರವರು. ಇವರ ಜನ್ಮವೇ ಹೊನ್ನಿಗಾಗಿ ಆಯಿತು. ಇವರು ಬಯಸುವಷ್ಟು ಹೊನ್ನನ್ನು ಇವರ ಬೆನ್ನಮೇಲೆ ಹೊರಿಸಿದರೆ ಬೇಕಾದುದನ್ನು ಮಾಡಬಹುದು. ಆದರೆ ಇದೇ ವೇಷದಿಂದ ಅವರು ನನ್ನನ್ನು ಬಳಿಗೆ ಕರೆಯಿಸಿಕೊಳ್ಳರಲ್ಲ . . . ಏನು ಮಾಡುವುದು? ಇಲ್ಲ, ಪ್ರಸಂಗ ಬಂದರೆ ಹೊನ್ನನ್ನಾದರೂ ಕೊಟ್ಟು, ನನ್ನ ವೇಷವನ್ನಾದರೂ ಬದಲಿಸಿ ನನ್ನ ದೇವನನ್ನು ಇವರ ಸೆರೆಮನೆಯಿಂದ ಬಿಡಿಸಬೇಕು.

(ಹೀಗೆಂದು ಯೋಚಿಸುತ್ತ ಅಶ್ವತ್ಥದ ಕಟ್ಟೆಯ ಮೇಲೆ ಕುಳಿತುಕೊಳ್ಳುವನು. ಮುದಿ ಹೊಲೆಯನೊಬ್ಬನು ಪ್ರವೇಶಿಸುವನು.)

**ಮುದುಕ:**— ಅಯ್ಯೋ ದೇವರೆ! ಯಾರು ಕಾಯಬೇಕಪ್ಪ. ಊರಿಂದ ಊರೇ ಬರಿದಾಗುತ್ತದೆಯೋ ಏನೋ. ಇದ್ದೊಂದು ಮಗುವೂ ಹಾಸುಗೆ ಹಿಡಿಯಿತಲ್ಲ. ಇನ್ನೇನು ಮಾಡಲಿ. ಮೊನ್ನೆಯೇ ಸಾಯುವುದಿತ್ತು, ಆ ಪುಣ್ಯಾತ್ಮರು ಉಳಿಸಿದರು. ಇನ್ನು ಉಳಿಯುವಂತಿಲ್ಲ. ಅಯ್ಯೋ ಈ ಮುದುಕನ ಮುಂದೆ ಅವನ ಮೊಮ್ಮಗನು ಸಾಯಬೇಕೆ? ಎಲ್ಲರೂ ಜ್ವರ ಹಿಡಿದು

6*

ಹೋದರು. ಇದೊಂದು ಮರಿಯಾದರೂ ಉಳಿದೀತು, ಸಾಯು ವಾಗ ಸುಖದಿಂದ ಸತ್ತೇನು - ಎಂದು ಯೋಚಿಸಿದರೆ ಈಗ ಅದೂ ಹೋಗುವಂತೆ ಕಾಣುತ್ತದೆ. ಇನ್ನೇನು ಮಾಡಲಿ? ಬ್ರಾಹ್ಮ ಣರು ಹೇಳಿದರೆಂದು ಮಾರಿಗೆ ಹರಕೆ ಹೊತ್ತಾಯಿತು. ಅದರ ಮೇಲೆ ಎರಡು ಸಾವಾಯಿತು. ಸಾಯಂಕಾಲದೊಳಗೆ ಕೇರಿಗೆ ಕೇರಿಯೇ ಬರಿದಾಗುತ್ತದೆಂದು ಕಾಣುವುದು. ಕೊನೆಗೆ ಸತ್ತ ವರನ್ನು ಹೊರುವವರಿಲ್ಲವೆಂದಾಗುತ್ತದೆ. ಎಲ್ಲಿಗೆ ಹೋಗಲಿ, ಯಾರನ್ನು ಕೇಳಲಿ? ಹೋ — ಈ ದೇವರು ನಿಂತಿದ್ದಾರೆ ಬೇಡ, ಅವರು ಬ್ರಾಹ್ಮಣರು ಅವರಿಂದಲೇ ಇಷ್ಟೆಲ್ಲಾ ಆಯಿತೆನ್ನು ತ್ತಾನೆ, ಬಾಂಕು.

**ಕಾಶ್ಯಪ:** — ಯಾಕೆ ಮುದುಕ, ಅಳುತ್ತ ನಿಂತಿದ್ದೀ?

**ಮುದುಕ:** — ದೇವರು, ನೀವು ಕಾಪಾಡಿದ ಹುಡುಗನು ಈಗ ಕೈ ಬಿಡುವ ಹಾಗಿದೆ

**ಕಾಶ್ಯಪ:** — ಏನು ವಾಂತಿಭೇದಿಯೇ?

**ಮುದುಕ:** — ಅಹುದು ಬುದ್ಧಿ . . . . ಇಷ್ಟು ಹೊತ್ತಿಗೆ ನಾಲ್ಕಾರು ಸಾವಾಯಿತು. ತಿರುಗಿ ಹೋಗುವುದರಲ್ಲಿ ಎಷ್ಟಾಗುತ್ತದೆ ಯೋ ಏನೋ . . . . . ಮಾರಿಗೆ ಹರಕೆ ಹೊತ್ತಾಯಿತು, ಎಲ್ಲ ಆಯಿತು.

**ಕಾಶ್ಯಪ:** — ಎಲ್ಲಿಗೆ ಹೊರಟೆ?

**ಮುದುಕ:** — ಎಲ್ಲಿಗನ್ನಲಿ? ಹೊರಟೆ, ಎಲ್ಲಿಗೆಂತಿಲ್ಲ . . . . ಎಲ್ಲಾ ದರೂ ಬೇಡಿ ಇಷ್ಟು ಮದ್ದು ತರುವ ಎಂದು.

**ಕಾಶ್ಯಪ:** — ನಾನು ಕೊಡಲೇ? ಒಬ್ಬರನ್ನೀಗ ಬರುವುದು ಬೇಡ ವೆಂದು ಕಳುಹಿಸಿದಿರಂತೆ!

**ಮುದುಕ:**— ಹೌದು, ಅವರಿಂದಲೇ ಇಷ್ಟಾಯಿತೆಂದು ಬ್ರಾಹ್ಮಣರು ಹೇಳಿದರಂತೆ.

**ಕಾಶ್ಯಪ:**— ಹಾಗಾದರೆ ಅವರು ಶಾಂತಮಾಡುವರೇನು?

(ತ್ವರೆಯಿಂದ ಬಾಂಕು ಓಡಿಬರುವನು.)

**ಬಾಂಕು:**—(ಪ್ರವೇಶ) ಅಪ್ಪಾ, ಓಡಿಬಾ, ಮಗು ಕೂಗುತ್ತದೆ. ಕೈ ಕಾಲು ತಣ್ಣಗಾಗುತ್ತ ಬಂದಿದೆ. ಈಚೆ ಮನೆಯಲ್ಲಿ ಇನ್ನೆರಡು ಮಕ್ಕಳಿಗೆ . . . .

**ಮುದುಕ:**— ದಮ್ಮಯ್ಯ ಬುದ್ಧಿ ಏನಾದರೂ ಮಾಡಿ ಉಳಿಸಿ ನಮ್ಮನ್ನು ಕುಲಕ್ಕೆ ಕುಲವೇ ಹೋಗುತ್ತದೆ ಬುದ್ಧಿ. ಕಾಲಿಗೆ ಬೀಳುತ್ತೇನೆ

**ಬಾಂಕು:**— ಅವರು ಬ್ರಾಹ್ಮಣರಲ್ಲವೇನಪ್ಪ?

**ಮುದುಕ:**— ಸುಮ್ಮನಿರು ಹುಚ್ಚ. ಜೀವ ಮೊದಲು ಉಳಿದು ಕೊಳ್ಳಲಿ ಬ್ರಾಹ್ಮಣರು ಜೀವ ಉಳಿಸದಿದ್ದ ಮೇಲೆ ಇವರ ಕಾಲು ಹಿಡಿದುದರಲ್ಲಿ ತಪ್ಪೇನು? ಬನ್ನಿ ಬುದ್ಧಿ, ನಿಮ್ಮಿಂದಲಾದರೂ ನಮ್ಮ ಗುಡಿಸಲಿನ ದೀಪ ಉಳಿಯಲಿ.

(ಎಲ್ಲರೂ ತೆರಳುವರು. ಏಕಾಕ್ಷಿ, ಭಾನುಕೋಟಿಯರು ತೀರ ವಿಚಾರ ಮಗ್ನರಾಗಿ ಪ್ರವೇಶಿಸುವರು.)

**ಏಕಾಕ್ಷಿ:**— ಅಲ್ಲ, ಸ್ವಾಮಿರಾಯರಿಗೆ ಮರಳು ಎಂದು ಕಾಣುತ್ತದೆ. ಒಬ್ಬ ಹುಚ್ಚ, ಪರದೇಶಿ, ಗರ್ಭಗುಡಿಯಲ್ಲಿ ನಿಧಿಯಿದೆ ಅಂದರೆ, ಇವರು ಗುಡಿಯನ್ನೆಲ್ಲಾ ತಿರುವಿ ಹಾಕಿಸುವುದೆಂದರೆ ಏನು ಅರ್ಥ? ಆ ಮೂಲೆಯಲ್ಲಿ, ಕತ್ತಲೆಯಲ್ಲಿ ಬಿದ್ದ ವಿಗ್ರಹ ವನ್ನೆಲ್ಲಾ ಕಿತ್ತು ತಲೆ ಕೆಳಗೆ ಮಾಡಿ ಕೊನೆಗೆ ಸಿಕ್ಕಿದ್ದಿಷ್ಟು ಮಣ್ಣು.

**ಭಾನು**:— ನೀನು ಸ್ವಲ್ಪ ಬಾಯಿ ಮುಚ್ಚು. ಸ್ವಾಮಿರಾಯರು, ಅಷ್ಟು ತಿಳಿಯದೆ ಹೇಳಿದರು ಎನ್ನುತ್ತೀಯಾ? ತ್ರಿಕಾಲ ಜ್ಞಾನಿಗಳು ಅವರು. ಅವರ ಯೋಗ್ಯತೆ ನಮಗೆಲ್ಲಿ? ಹಿಂದಿನಿಂದಲೂ ಅಲ್ಲಿ ಚಿನ್ನವಿದೆಯೆಂದು ಪ್ರತೀತಿಯಿದೆ ಎಲ್ಲಿ ಎಂಬುದು ಸ್ಪಷ್ಟ ತಿಳಿದಿಲ್ಲ. ನನ್ನನ್ನು ಕೇಳಿದರೆ—ಆ ಹುಚ್ಚನಿಗೆ ಅದರ ಗುಟ್ಟು ಸರಿಯಾಗಿ ಗೊತ್ತಿರಬೇಕು ಅದನ್ನು ಸ್ಮರಿಸಿಯೇ ಅವನಿಗೆ ಹುಚ್ಚು ಹಿಡಿದಿರಬೇಕು. ಅದಕ್ಕೇ ಅನಾಥಬಂಧು ವಿಗ್ರಹವನ್ನು ಕೇಳುವುದವನು. ಆ ಕರೇ ವಿಗ್ರಹ ಕಂಡೆಯಲ್ಲ, ಅದೇ ಆ ವಿಗ್ರಹವಿರಬೇಕು.

**ಏಕಾಕ್ಷಿ**:— ನನಗೆ ಚೆನ್ನಾಗಿ ನೋಡಲು ಆಗಲಿಲ್ಲ. ಆದರೂ ಗೊಂಬೆ ಮಾತ್ರ ಹಾ - ಎನ್ನುವ ಹಾಗಿತ್ತು.

**ಭಾನು**:— ಅದೇ ಇರಬೇಕು. ನಾನೂ ಅದನ್ನು ಕತ್ತಲಲ್ಲೇ ಕಂಡುದು. ಅನಾಥ ಬಂಧುವಿನ ಹತ್ತಿರ ಹೋದರೆ ಬೇಡಿದ್ದು ಸಿಗುತ್ತದೆ ಎಂದು ಶಾಸ್ತ್ರವೇ ಇದೆ. ಸ್ಥಳ ಪುರಾಣದಲ್ಲೇ ಇದೆಯಲ್ಲ. ಆದರೆ— ನಿಧಿ ಎಲ್ಲಿದೆ, ಏನು, ಎಂದು ವಿಚಾರಿಸದೆ ಅಗೆಯುವುದು ಬೇಡವಿತ್ತು. ಏಕಾಕ್ಷಿ, ಈಗ ನಿನ್ನಿಂದ ಒಂದು ಕೆಲಸವಾಗಬೇಕು

**ಏಕಾಕ್ಷಿ**:—ತಿರುಗಿ ಗರ್ಭಗುಡಿಯನ್ನು ಅಗೆದು ಮಣ್ಣು ಕಿತ್ತು ಹಾಕುವುದೇ ಅಥವಾ ಗೋಡೆ ತಿರುವಿಹಾಕುವುದೇ? ಆಚಾರ್ಯರೇ, ನಿಮಗೆ ಹುಚ್ಚು.

**ಭಾನು**:— ಹಾಗೆಲ್ಲ ಅಲ್ಲ. ಸ್ವಾಮಿರಾಯರ ಅಪ್ಪಣೆಯಾಗಿದೆ . . . ಆ ಮನುಷ್ಯನ ಹೆಸರೇನೆಂದೆ . . . . ?

**ಏಕಾಕ್ಷಿ**:— ಈಗ ನೆನಪಾಯಿತು. ಕಾಶ್ಯಪ ಎಂದಿದ್ದ. ಹಿರಣ್ಯಕಶ್ಯಪುವೋ ಏನೋ! ಹಿರಣ್ಯ ಕೊಡುವುದಾದರೆ ಹಿರಣ್ಯ

ಕಶ್ಯಪು ಆಗಲಿಕ್ಕೂ ಸಾಕು ಇನ್ನು ಪ್ರಹ್ಲಾದ, ನರಸಿಂಹ, ಭೂದೇವಿಯರನ್ನು ಸಂಗ್ರಹಿಸಿಬಿಟ್ಟರೆ ಒಂದು ನಾಟಕವೇ . . .

**ಭಾನು:** — ಸುಮ್ಮನಿರು ಎಲ್ಲವೂ ಚೇಷ್ಟೆ ಎಂದು ತಿಳಿಯಬೇಡ ಹಣ ಸಿಕ್ಕಿದರೆ ನಿನಗೂ ಒಂದು ಪಾಲು ಇದೆ.

**ಏಕಾಕ್ಷಿ:** — ಈಗಲೂ ಪಾಲು ಸಿಗುತ್ತಿತ್ತು — ಮಣ್ಣಿನಲ್ಲಿ. ನಾನೇ ಬೇಡವೆಂದು ಬಿಟ್ಟುಬಂದೆ.

**ಭಾನು:** — ಆಯಿತು. ಹಾಗಾದರೆ ಸುಮ್ಮನಿರು. ನನಗೇನು? ಬೇರೆಯವರು ಸಿಗುವುದಿಲ್ಲವೆಂದು ತಿಳಿಯಬೇಡ. ಬರೇ ಈ ಒಂದು ಚಿಲ್ಲರೆ ಕೆಲಸಕ್ಕೆ ಸ್ವಾಮಿರಾಯರು ನೂರು ರೂಪಾಯಿ ಕೊಡುತ್ತೇನೆ ಅಂದಿದ್ದಾರೆ ನಿನಗೆ.

**ಏಕಾಕ್ಷಿ:** — ನಿಜವೇ?

**ಭಾನು:** — ನಾನು ಸುಳ್ಳೆನ್ನುವವನೇ?

**ಏಕಾಕ್ಷಿ:** — ಅದನ್ನು ಮೊದಲೇ ಅಂದಿದ್ದರೆ ಪಿಟ್ಟೆನ್ನುತ್ತಿದ್ದೆನೇ? ಸ್ವಾಮಿರಾಯರ ಹುಕುಂ ಆದರೆ ಹುಲಿಯ ಹಾಲನ್ನು ತರುತ್ತೇನೆ.

**ಭಾನು:** — ಇದೂ ಅಂಥದೇ ಕೆಲಸ. ನೀನು ಆ ಕಾಶ್ಯಪ ಋಷಿಯ ಸ್ನೇಹ ಮಾಡಬೇಕು.

**ಏಕಾಕ್ಷಿ:** — ಇನ್ನು ನನ್ನನ್ನು ಹತ್ತಿರ ಬಿಡಲಿಕ್ಕಿಲ್ಲ.

**ಭಾನು:** — ನೀನು ಉಪಾಯಮಾಡಿದರೆ ಮದ್ದಾನೆ ಸವಾರಿಮಾಡಬಲ್ಲೆ. ಅದನ್ನು ಬಿಡು, ಇಲ್ಲಿ ಕೇಳು. ಅವನ ಸ್ನೇಹಮಾಡಿಕೊಂಡು ಸ್ವಾಮಿಯವರಲ್ಲಿಗೆ ತರಬೇಕು ಇವತ್ತು ರಾತ್ರಿಯೇ, ತಿಳಿಯಿತೇ? ಅವನು ಗುಟ್ಟನ್ನು ಹೇಳಿದರೆ, ಸರಿ ಅರ್ಧ ಹಣ ಅವನಿಗೆ, ಅನ್ನು.

**ಏಕಾಕ್ಷಿ:** — ಸರಿ ಅರ್ಧ ಅವನಿಗೆ ಕೊಟ್ಟರೆ ನಾವು ಮಣ್ಣು ತಿನ್ನುವುದೇ?

**ಭಾನು:**— ಅಯ್ಯೋ ಮಂಕ, ನೀನು ಅನ್ನುವುದಕ್ಕೇನು? ಅವನು ಪೂರ್ಣ ಹಣ ಒಯ್ಯುವ ಕಾಲ ಉಂಟೇ? ಒಬ್ಬನೇ, ಪರದೇಶಿ! ನಮ್ಮ ಇಷ್ಟವಿಲ್ಲದೆ ಹತ್ತು ಕಾಸು ನಗದಿಯಿಂದ ಒಯ್ಯಲಾರ. ನಡಿ, ನಡಿ, ಮೊದಲು ಅವನಲ್ಲಿಗೆ ಹೋಗು.

**ಏಕಾಕ್ಷಿ:**— ಈ ಬಿಸಲಿನಲ್ಲಿ ಅವನನ್ನು ಎಲ್ಲೆಂದು ಹುಡುಕಲಿ?

**ಭಾನು:**— ಪಸಡ್ಡ ಆಯಿತು. ಹೀಗೆ ಆಲಸ್ಯಮಾಡಿದರೆ ಕೆಲಸ ಆಗುವುದುಂಟೇ? ಇಗೋ, ನೂರರ ನೋಟು ಆಯಿತೇ? ಅವನು ಹೊಲಗೇರಿಗೆ ಹೋದನು ಎಂದು ಯಾರೋ ಅಂದರಲ್ಲ.

**ಏಕಾಕ್ಷಿ:**— ನಾನೂ ಅಲ್ಲಿಗೆ ಹೋಗುವುದೇ?

**ಭಾನು:**— ಹೋಗಯ್ಯ. ಉಳಿದೆಲ್ಲಿಯೂ ಅವನು ಸಿಗಲಿಕ್ಕಿಲ್ಲ. ಸೀದಾ ನಡಿ. ಕೆಲಸವಾಗಬೇಕಾದರೆ ಹೊಲಗೇರಿಯಲ್ಲ, ಪಾತಾಳಕ್ಕೆ ಹೋಗಲು ತಯಾರಿರಬೇಕು

**ಏಕಾಕ್ಷಿ:**— ಅದು ನಿಜವಪ್ಪ. ಆಚೆಯಿಂದ ಹೋಗಲೇ . . . ಈಚೆಯಿಂದ ಹೋಗಲೇ . . .

**ಭಾನು:**— ಈ ಕಡೆಯಿಂದಲೇ ಹೋಗು. ಜನರು ತಿರುಗುವ ರಸ್ತೆಯಲ್ಲ ಇದು. (ತೆರಳುವರು.)

(ಕಾಶ್ಯಪನೂ, ಅವನ ಹಿಂದೆ ಮಾಂಕು, ಬಾಂಕು, ಮುದಿ ಹೊಲೆಯರು ಬರುವರು.

**ಮುದುಕ:**— ಹಾಗಾದರೆ ನಾವಿನ್ನು ಕೇರಿಗೆ ಹೋಗಲೇ? ತಮ್ಮಿಂದಲೆ ನನ್ನ ಮಗುವು ಉಳಿಯಿತು. ನಮ್ಮವರಿಗೆ ಬುದ್ಧಿಯಿದ್ದಿದ್ದರೆ ಇಷ್ಟು ಹಾನಿ ಆಗುತ್ತಿರಲಿಲ್ಲ. ಚಿದಾನಂದರಾಯರೂ ನಮ್ಮ ಸಹಾಯಕ್ಕೆ ಬಂದವರು. ಆದರೆ ನಾವು ಬ್ರಾಹ್ಮಣರ

ಬೆದರಿಕೆಯನ್ನು ಕೇಳಿ ಅಂಜಿದೆವು. ಅನ್ಯಾಯವಾಗಿ ನಾಲ್ಕಾರು ಜೀವಗಳು ಹೋದುವು.

**ಕಾಶ್ಯಪ:**— ಗೆಳೆಯ, ಆಗಿ ಹೋದುದನ್ನು ಚಿಂತಿಸಬಾರದು. ಇನ್ನು ಮುಂದೆ ರಾಯರಂಥವರನ್ನು ಅನುಸರಿಸಿರಿ. ಅವರು ತಮ್ಮ ಸ್ವಾರ್ಥಕ್ಕಾಗಿ ಏನನ್ನೂ ಮಾಡುವವರಲ್ಲ.

**ಮುದುಕ:**— ನಿಜ ಬುದ್ಧಿ, ಇದುವರೆಗೆ ನಮ್ಮಿಂದ ಒಂದು ಕಾಸಿನ ಲಾಭ ಅವರಿಗೆ ಆಗಲಿಲ್ಲ.

**ಕಾಶ್ಯಪ:**— ಲಾಭದ ಬದಲು, ಅವರನ್ನೀಗ ಜಾತಿಯಿಂದಲೇ ತೆಗೆದಿರಿಸಿರುವರು.

**ಮುದುಕ:**— ಏ ಪಾಪವೇ! ಇರಲಿ ಬುದ್ಧಿ . . . . ತಮ್ಮ ಮನೆಯು ಎಲ್ಲಿ ಎಂದು ತಿಳಿದರೆ ಏನಾದರೂ ಆಪತ್ತು ಬಂದಾಗ . . .

**ಕಾಶ್ಯಪ:**— ನನ್ನ ಮನೆಯೇ? ಎಲ್ಲೆಲ್ಲು! ನಾನೊಬ್ಬ ಸನ್ಯಾಸಿಯಂತಿರುವವನು, ಎಲ್ಲಾದರೂ ಇರುವೆನು. ಏನೋ ಕಾರಣದಿಂದ ಇಲ್ಲಿಗೆ ಬಂದೆ . . .

**ಮಾಂಕು:**— ನಿಜವಪ್ಪ, ಈ ಮೊದಲು ನಿಮ್ಮನ್ನು ಕಂಡ ನೆನಪಾಗುವುದಿಲ್ಲ. . . . ನಮಗಾಗಿಯೇ ಬಂದಂತೆ ಬಂದಿರಿ.

**ಕಾಶ್ಯಪ:**— ನಿಮಗಾಗಿಯೇನು ಬರಲಿಲ್ಲ. ಬಂದೆನು, ಏನೋ ಕಾರಣದಿಂದ ಬಂದೆನು . . .

(ಹೊಲೆಯರು ಸರಿಯುವರು ಕಾಶ್ಯಪನು ಅಶ್ವತ್ಥದ ಕಟ್ಟೆಯ ಮೇಲೆ ಕುಳಿತಿರುವನು. ವಿಶಾಕ್ಷಿಯು ಅಲ್ಲಿಗೇ ಬರುವನು.)

**ವಿಶಾಕ್ಷಿ:**— ಇಲ್ಲಿದ್ದಾನೆ ಪುಣ್ಯಾತ್ಮ! ಸುಮ್ಮನೆ ಹೊಲಗೇರಿಗೆ ಸುತ್ತು ಬಂದೆ. ನುಸಿಯಪ್ಪ! ಥೇಟು ನುಸಿ. ನಿಜಕ್ಕೂ ನಮ್ಮ ಸ್ವಾಮಿಯವರಿಗೆ ತಲೆ ಸರಿಯಿಲ್ಲ. ಅಲ್ಲವಾದರೆ ಈ ಹುಚ್ಚ, ರಸ್ತೆಯ

ಮೇಲೆ, ಅಶ್ವತ್ಥದ ಕಟ್ಟೆ ಕಂಡಲ್ಲೆಲ್ಲ ಕುಳಿತಿರುವ ಮನುಷ್ಯನಿಂದ ಗುಪ್ತನಿಧಿ ಅವರಿಗೆ ಸಿಗುವುದುಂಟೇ? ಮರುಳು ಅಂದರೆ ಮರುಳು. ನನಗೇನು? ಹೇಳಿದಷ್ಟು ಕೆಲಸ ಮಾಡುವುದು. ಹೀಗೆ ಇವರ ಹುಚ್ಚು ಹೆಚ್ಚಿದರೆ ಇನ್ನು ಇನ್ನು ಲಾಭವೇ ನನಗೆ. ಇನ್ನೊ ಒಂದು ನೂರು ರೂಪಾಯಿ ಸಿಕ್ಕಿದರೆ ನಮ್ಮ ಚಂದ್ರಿಗೊಂದು ಡಾಬು ಮಾಡಿಸುತ್ತಿದ್ದೆ.

(ಪ್ರ) ಭೋ ಸ್ವಾಮಿ ಋಷೀಶ್ವರರೇ, ತಮ್ಮ ಮಹಿಮೆ ನಮಗೀವರೆಗೂ ತಿಳಿಯದೆ ನಿಮ್ಮನ್ನು ಎರಡೆರಡು ಸಾರಿ ಅಪ ಮಾನಕ್ಕೆ ಗುರಿಪಡಿಸಿದೆವು. ಅದೂ, ಭಾರಿ ಸಭೆಯಲ್ಲಿ ತಾವು ಅದನ್ನು ಮನಸ್ಸಿಗೆ ತೆಗೆದುಕೊಳ್ಳಲಿಕ್ಕಿಲ್ಲ, ಅದು ನನಗೆ ಗೊತ್ತು. (ಆ) ಅಂದರೆ ಗೋರ್ಕಲ್ಲ ಮೇಲೆ ಮಳೆ ಕರೆದಂತೆ (ಪ್ರ) ಆದರೂ ನಾವು ಅನ್ಯಾಯಗಾರರು. ಸ್ವಾಮಿರಾಯರಿಗೂ ಬಹಳ ವ್ಯಸನ ವಾಯಿತು. ಅಂದರೆ ಭಾರಿ ವ್ಯಸನವಾಯಿತು. ನೋಡಿ, ನಿನ್ನೆ ರಾತ್ರಿಯಿಂದ, ಅಲ್ಲಪ್ಪ, ಮಧ್ಯಾಹ್ನದಿಂದಲೇ, ಅಂದರೆ ನೀವು ಹೊರಟರಲ್ಲ, ಆಗಿನಿಂದ ಇಷ್ಟೊ ಅನ್ನ ಮುಟ್ಟಲಿಲ್ಲ. (ಆ) ಬರೇ ಲಾಡು ಜುಲೇಬಿ ಮಾತ್ರ (ಪ್ರ) ತಮ್ಮನ್ನು ಕಾಣದೆ ಏಳು ವುದಾಗಿಲ್ಲ ಎಂದಿದ್ದಾರೆ.

**ಕಾಶ್ಯಪ:**— ನನ್ನಂಥ ತಿರುಕನಿಂದ ಅವರಂಥವರಿಗೆ ಏನು ಲಾಭ ವಾದೀತು? ಅಲ್ಲದೆ ನನ್ನಂಥ ಕರ್ಮಭ್ರಷ್ಟನನ್ನು ನಿಮ್ಮ ಗುಡಿ ಯೊಳಕ್ಕೆ ಬಿಡುವುದೂ ಸರಿಯಲ್ಲ. ದಂಡ ತೆರಲು ನನ್ನಲ್ಲಿ ಹಣವೂ ಇಲ್ಲ.

**ವಿಶಾಕ್ಷಿ:**— ಛೇ, ಛೇ, ತಾವು ಹಾಗೆ ಗ್ರಹಿಸಬಾರದು. ಅಜ್ಞಾನ ದಿಂದ ಆಡಿದ ಮಾತದು. ಅವರಾದರೂ ಅಷ್ಟೆ.

**ಕಾಶ್ಯಪ:**— ಛೇ, ಅವರು ಅಜ್ಞಾನಿಗಳಿರಲಾರರು. ಸಾವಿರಾರು ಅಜ್ಞಾನಿಗಳಿಗೆ ಪ್ರಾಯಶ್ಚಿತ್ತವನ್ನು ವಿಧಿಸುವರು.

**ಏಕಾಕ್ಷಿ:**—(ಆ.) ಇವನಿಗೆಲ್ಲ ನೆನಪು ಉಳಿದಿದೆ. ಇದು ತೀರ ಹುಚ್ಚಲ್ಲ. ಹಾಗಾದರೆ! (ಪ್ರ) ಸ್ವಾಮಿ, ಏನೂ ಇರಲಿ. ಎಷ್ಟು ತಪ್ಪಿದ್ದರೂ ಕ್ಷಮಿಸುವುದು ತಮ್ಮ ಧರ್ಮ ಕ್ಷಮಿಸಿ ಉದ್ಧಾರ ಮಾಡಬೇಕು. ತಮಗೆ ಎಲ್ಲಿಯ ವರೆಗೆ ಹೋಗಬೇಕೋ ದೇವಾಲಯದಲ್ಲಿ, ಅಲ್ಲಿಯ ತನಕ ಹೋಗಬಹುದು. ಅದರಿಂದ ಉಭಯತೋಪಿ ಲಾಭವಾದೀತು—ಅಂದರು. ಅವರೇ ಅಂದರು.

**ಕಾಶ್ಯಪ:**— ಏನು, ಉಭಯತೋಪಿ ಲಾಭವೇ?

**ಏಕಾಕ್ಷಿ:**— ಅಹುದಪ್ಪ, ಕಿಂಚಿತ್‌ಲಾಭ ಈ ಸಂದರ್ಭದಲ್ಲಿ ನನಗೂ ಆಗದಿರಲಿಕ್ಕಿಲ್ಲ. ಬನ್ನಿರಿ, ಹಟಮಾಡಬಾರದು ನಿಮ್ಮ ಕಾಲಿಗೆ ಬೀಳುತ್ತೇನೆ ಪಶ್ಚಾತ್ತಾಪದಿಂದ ನಾನೇ ಕರಗಿ ಸೀರಾಗಿದ್ದೇನೆ. ಇನ್ನು ಅವರ ಅವಸ್ಥೆ ಹೇಗೋ . . . ಬನ್ನಿ . . . . ಬನ್ನಿ . . . .

**ಕಾಶ್ಯಪ:**— ಉಭಯತೋಪಿ ಲಾಭವಾಗುವುದಾದರೆ ಆಗಲಿ . . .

(ಹೊರಡುವರು.)

# ಅಂಕ ೫.

(ಅನಾಥ ಸ್ವಾಮಿಯ ಗರ್ಭಗುಡಿಯ ಮುಂದೆ—ಗುಡಿಯಲ್ಲಿ ನವರತ್ನ ಖಚಿತವಾಗಿರುವ ಉಗ್ರ ವಿಗ್ರಹವೊಂದು ಕಾಣಿಸುತ್ತದೆ—ಎರಡು ಕಡೆಗಳಿಂದ ದೀಪರಾಜಿಗಳು ಉರಿಯುತ್ತವೆ—ಅಶ್ವತ್ಥನು ಗುಡಿಯ ಮುಂದೆ ಅತ್ತಿತ್ತ ತಿರುಗುತ್ತಾನೆ.)

**ಅಶ್ವತ್ಥ**:—ಛೀ, ಹೀಗಾಗುತ್ತ ಬಂದರೆ ನಮ್ಮ ಜಾತಿನೀತಿ ಉಳಿಯುವ ಹಾಗಿಲ್ಲ. ಅವರು ಹೇಗೂ ಜಾತಿಭ್ರಷ್ಟರು ಹೊಲಗೇರಿಗೆ ಹೋದರು. ಇವನು ಬಲ್ಲವ ಅಲ್ಲಿಗೆ ಹೋದನಲ್ಲ! ಏನೆನ್ನಲಿ ನಾನು? ನಾಳೆ ಸುದ್ದಿ ಆ ಚಿದಾನಂದನಿಗೆ ತಿಳಿಯಿತೆಂದರೆ ಊರಲ್ಲೆಲ್ಲ ಹಬ್ಬಿಸದೆ ಬಿಡುತ್ತಾನೆಯೇ? ಇಲ್ಲ, ಇದೇ ಸಂದರ್ಭ; ಸ್ವಾಮಿರಾಯರ ಹತ್ತಿರ ನಾನೇ ಸುದ್ದಿಯನ್ನು ಹೇಳುತ್ತೇನೆ ಈ ಏಕಾಕ್ಷಿ ಬರೇ ಒಂದು ಕಣ್ಣಿನ ಗಿಲೀಟನಿಂದಲೇ ಖಾವಂದರನ್ನು ಮಂಕುಮಾಡಿದ್ದಾನೆ. ನಮ್ಮ ಪಾರುಪತ್ಯಗಾರರಿಗೆ ಅವನೆಂದರೆ ಜೀವ ನಾವು ಇಷ್ಟು ಜನ ಶಿಷ್ಯರಿಲ್ಲವೇ? ಬೇಕಾದರೆ ಜೀವಕೊಡಲಿಕ್ಕೆ ಸಿದ್ಧನಿದ್ದೇನೆ ನಾನು. ನಮ್ಮನ್ನು ಇವರು ಮಾತನಾಡಿಸುವ ಹಾಗೆಯೇ ಇಲ್ಲ. ಒಂದು ಕಡ್ಡಿ ಬೇಕಾದರೂ ಏಕಾಕ್ಷಿಯನ್ನೇ ಕರೆಯುತ್ತಾರೆ. ಅವನ ಕಡೆಯ ಯಾತ್ರಿಕರಿಗೆ ಸಿಗುವ ಆದರ ಸತ್ಕಾರಗಳು ನಮ್ಮ ಕಡೆಯವರಿಗೆ ಸಿಗುವುದಿಲ್ಲ. ನಿನ್ನೆ ಏನಿಲ್ಲ, ನಡುರಾತ್ರಿಯಲ್ಲಿ ಬಂದು ಅವನ ಮನೆಯ ಮುಂದೆ ಕೂಗುತ್ತಿದ್ದರು—"ಏಕಾ, ಏಕಾ"—ಎಂದು. ನಾವೆಲ್ಲ ಸತ್ತ ಹಾಗಾಯಿತಲ್ಲ. ಅಲ್ಲ, ಸ್ವಾಮಿರಾಯರು ಸಹ ಅವನನ್ನು ಕಂಡು ಮರುಳಾದರೆಂದರೆ! ಈಗ ಅವರು ಬರಲಿ,

ಎಲ್ಲಾ ಬಣ್ಣ ಬಿಡಿಸುತ್ತೇನೆ ಇವತ್ತು ನೋಡಿದೆ. . ನಡು ಹಗಲಲ್ಲಿ ಯಾರಿದ್ದಾರೆ ಯಾರಿಲ್ಲ ಎಂಬ ಅಂಜಿಕೆ ಸಹ ಇಲ್ಲದೆ, ಹೊಲಗೇರಿಯ ಬೀದಿ ಬೀದಿ ಸುತ್ತುತ್ತಿದ್ದನು. ಆಯಿತಲ್ಲ, ನಮ್ಮ ಬ್ರಾಹ್ಮಣ ಕುಲಕ್ಕೇ ಮಂಗಳಾರತಿ ಹೋ, ನಮ್ಮ ಮಾಣೇಶ ಬಂದನು. ಅಂತರಂಗದಲ್ಲಿ ಅವನಿಗೂ ನನ್ನನ್ನು ಕಂಡರೆ ಅಷ್ಟಷ್ಟೆ. ಆದರೆ ಈ ಸುದ್ದಿಯನ್ನು ಅವನ ಕಿವಿಯ ಮೇಲೆ ಹಾಕಿಬಿಟ್ಟರೆ ಗಾಳಿಗೆ ಕಸ್ತೂರಿ ಕೊಟ್ಟಹಾಗೆ ಆಯಿತು. ಹಾಗಾದರೆ ಏಕಾಕ್ಷಿಯ ಸವಾರಿ ನಾಲ್ಕು ಮೆಟ್ಟಲು ಇಳಿಯಲೇ ಬೇಕು. ಮಾಣೇಶ... ಏ (ಮಾಣೇಶನು ಅವಸರದಿಂದ ಬರುವನು).

**ಮಾಣೇಶ:**— ಸ್ವಲ್ಪ ತಡೆ, ಮಹಾರಾಯ. ನನ್ನ ಕೆಲಸವಾಯಿತು ನನಗೆ. ನಿನಗಿಲ್ಲಿ ಚೇಷ್ಟೆ.

**ಅಶ್ವತ್ಥ:**— ನಿಲ್ಲು ಮಹಾರಾಯ. ಒಂದು ಗುಟ್ಟು ಹೇಳುತ್ತೇನೆ. ನಿನ್ನ ವೈರಿಯ ವಿಷಯ. ಶುಕ್ರಾಚಾರಿ ಸಂಗತಿಯೋ!

**ಮಾಣೇಶ:**— ಶುಕ್ರಾಚಾರಿ ಹಾಳಾಗಿಹೋಗಲಿ, ನನ್ನ ಸಂಗತಿ ನನಗೆ. ನಮ್ಮ ಪಾರುಪತ್ಯಗಾರರು ಎಲ್ಲಿದ್ದಾರೆ ಮಹಾರಾಯ. ರಾತ್ರೆ ಗುಡಿಗೆ ಬೀಗಮುದ್ರೆ ಮಾಡುವ ಸಮಯವಾಯಿತು ಎಂದು ಬಂದರೆ ಅವರಿಲ್ಲವಲ್ಲ. ಅವರ ಹತ್ತಿರ ಒಂದು ಪ್ರಾಣಾಂತಿಕದ ಕೆಲಸವಿದೆ.

**ಅಶ್ವತ್ಥ:**— ಏನು ಸಂಗತಿ ಮಹಾರಾಯ? ಭಾರಿ ಕಂಗಾಲಾದಂತೆ ಕಾಣುತ್ತದೆ. ಏನು? ಯಾರಿಗೆ ಸೌಖ್ಯವಿಲ್ಲವೋ? ಏನು ಕಥೆ?

**ಮಾಣೇಶ:**- ಹೌದು ಅಶ್ವತ್ಥ, ನನ್ನ ಮಗು ವಾಂತಿಭೇದಿಯಿಂದ ಹಾಸುಗೆ ಹಿಡಿದು ಮಲಗಿದೆ. ಇನ್ನು ಗಳಿಗೆಯೋ ನಿಮಿಷವೋ ಅನ್ನುವ ಹಾಗಿದೆ. ಒಂದು ಸಾರಿ ಆಚಾರ್ಯರು ಸಿಗುವಹಾಗಿದ್ದರೆ.

**ಅಶ್ವತ್ಥ** :— ಅವರೇನು ಮಾಡುತ್ತಾರೆ? ಅವರಿಗೇನು ವೈದ್ಯ ಗೊತ್ತಿದೆಯೇ?

**ಮಾಣೇಶ**:— ಅಲ್ಲ, ಮಹಾರಾಯ. ನಿನ್ನ ಭಾವಾಜಿ ಇದ್ದಾನಲ್ಲ. ಅವನು ಬಹಳ ಒಳ್ಳೆ ಔಷಧ ಕೊಡುತ್ತಾನಂತೆ. ಇಡೀ ಹೊಲಗೇರಿಯಲ್ಲಿ ಇವತ್ತು ವಾಂತಿಭೇದಿ ಎಂಟು ಹೆಣಗಳಾದುವು. ಈ ಭಾವಾಜಿಯು ಹೋಗಿ ಎಲ್ಲವನ್ನೂ ಗುಣಪಡಿಸಿ ಬಂದನಂತೆ. ಪುಣ್ಯಾತ್ಮನನ್ನು ಒಂದು ಸಾರಿ ಕಂಡುಬರುವಾ ಎಂದರೆ. . . .ಅವರೆಂದರೆ, ಮತ್ತೇಕಿಲ್ಲ— ಹೋಗಲಿಕ್ಕೆ ಅಪ್ಪಣೆ ಕೊಡಲಿಕ್ಕೆ. ಭಾವಾಜಿ ಅಲ್ಲೇ ಇದ್ದಾನಂತೆ ಹೊಲಗೇರಿಯಲ್ಲಿ ಹೋದರೆ, ಇವರು ಆಗದು ಎನ್ನಬಾರದಲ್ಲ! ಇಲ್ಲವಾದರೆ ಮಗುವು ಹೋಯಿತೆಂದೇ ಲೆಕ್ಕ

**ಅಶ್ವತ್ಥ**:— ಏನು ಹೊಲಗೇರಿಗೆ ಹೋಗುವುದೇ?

**ಮಾಣೇಶ**:— ಆಪತ್ಕಾಲಕ್ಕೆ ವಿಶ್ವಾಮಿತ್ರ ಮಾಂಸ ತಿನ್ನಲಿಲ್ಲವೇನಯ್ಯ. ಅವರ ಅಪ್ಪಣೆ ಪಡೆದೇ ಹೋಗುತ್ತೇನೆ. ಇಲ್ಲ, ಅವರಿಗಾಗಿ ಕಾದರಾಗದು . . . . . . ಮಗು ಹೋಯಿತೆಂದೇ ಲೆಕ್ಕ . . . ಏ ಅನಾಥಬಂಧು . . .

**ಅಶ್ವತ್ಥ** :— ಅನಾಥಬಂಧು— ಎನ್ನುತ್ತೀಯಾ? ನೀನೂ ಭಾವಾಜಿ ಹಾಗೆಯೇ ಆದೆ. ಅನಾಥಸ್ವಾಮಿಯೆನ್ನುವ ಬದಲು . . .

**ಮಾಣೇಶ**:— ಏನೆಂದನೋ ನನಗೇ ಗೊತ್ತಿದ್ದರೆ . . . ಅಂತು ಅವನೇ ನನ್ನ ಮಗುವನ್ನು ಕಾಪಾಡಬೇಕು. ದೇವರೇ, ಒಂದು ಸಾರಿಗೆ ಆ ಭಾವಾಜಿಯನ್ನು ಕಾಣಿಸಯ್ಯ ನಿನ್ನ ಹೆಸರಿನಲ್ಲಿ ಒಂದು ಸಾರಿ ಮಗು ಉಳಿದುಕೊಳ್ಳಲಿ.

(ಓಡಿ ಹೋಗುವನು)

**ಅಶ್ವತ್ಥ :**— ಹಾಂ-ಸರಿಯಾಯಿತು. ಇವನಿಗೂ ಗ್ರಹಚಾರ ಕೆಟ್ಟಿದೆ. ಇಬ್ಬರೂ ನನ್ನ ಸಂಪಾದನೆಗೆ ಅಡ್ಡ ಬರುವವರು. ಇವನೆಂದರೆ ಥೇಟು ಶೈವ. ಇದೇ ನನ್ನ ಬೇಳೆ ಬೇಯಿಸುವ ಸಮಯ . . .

(ಚಂದ್ರಿಯು ಬರುವಳು.)

**ಚಂದ್ರಿಕೆ :**— ಅಶ್ವತ್ಥ ಭಟ್ಟರೇ, ನಮ್ಮ ಪಾರುಪತ್ಯಗಾರರು ಇನ್ನೂ ಬರಲಿಲ್ಲವೇ? ಬೀಗಮುದ್ರೆ ಸಮಯವಾಯಿತು. ನಿನ್ನೆಯೂ ಅವರ ಸವಾರಿ ಮನೆಯ ಕಡೆ ಬರಲಿಲ್ಲ. ಇಡೀ ದಿವಸ ಸ್ವಾಮಿಯವರ ಹಿಂದೆ ಇದ್ದಾರೆಂದು ಕಾಣುತ್ತದೆ. ಬಡವರ ನೆನಪು ಎಲ್ಲಾಗಬೇಕು . . . ?

**ಅಶ್ವತ್ಥ :**— ನಮ್ಮ ಪಾರುಪತ್ಯಗಾರರೂ ಇಲ್ಲ, ನಿಮ್ಮ ಪಾರುಪತ್ಯಗಾರರೂ ಇಲ್ಲ.

**ಚಂದ್ರಿಕೆ :**— ಏನು, ಚೇಷ್ಟೆ ಮಾಡುತ್ತೀರಿ? 'ನಮ್ಮ ಪಾರುಪತ್ಯಗಾರರು, ನಿಮ್ಮ ಪಾರುಪತ್ಯಗಾರರು' ಎಂದು?

**ಅಶ್ವತ್ಥ :**— ಅಲ್ಲ, ನಿಮಗೂ ನಮಗೂ ಒಬ್ಬರದೇ ಪಾರುಪತ್ಯ ಅಲ್ಲವೇ? ಇಲ್ಲ ಚಂದ್ರಿ, ನಾನೂ ಅವರಿಗಾಗಿಯೇ ಕಾದಿರುವುದು. ಆಗಾಗ ಕೋಣೆಯೊಳಗಿಂದ ಸ್ವಾಮಿರಾಯರ ಧ್ವನಿ ಕೇಳಿ ಬರುತ್ತದೆ. ಬಂದಾರು, ಬಂದಾರು - ಎಂದು ಕಾದು ಕುಳಿತಿದ್ದೇನೆ. (ಆ) ಹೂಂ, ಹಾಳಾಯಿತು. ಈ ಸೂಳೆ ಬಂದ ಮೇಲೆ ಯಾವ ಸುದ್ದಿಯನ್ನು ಬಿಡಿಸಲಿಕ್ಕೂ ಉಪಾಯವಿಲ್ಲ. ಏಕಾಕ್ಷಿ ಎಂದರೆ ಅವಳ ಮಂತ್ರ ಇದ್ದ ಹಾಗೆ. ಅಲ್ಲ, ಆ ಒಕ್ಕಣ್ಣನನ್ನು ಇವಳೇನು ಮೆಚ್ಚಿದಳೋ! (ಪ್ರ) ಚಂದ್ರಿ, ನಾನು ಹೋಗುತ್ತೇನೆ; ಹೊತ್ತಾಯಿತು. ಆಚಾರ್ಯರು ಬರುವ ತನಕ ನೀನು ಇರುತ್ತೀಯಲ್ಲ. ಅಂದರೆ ದೇವರ ಚಿನ್ನವೆಲ್ಲ ಹೊರಗೇ ಇದೆ; ಬೀಗಮುದ್ರೆ ಆಗಿಲ್ಲ.

**ಚಂದ್ರಿ**: — ಆಯಿತು, ನೀವು ಹೋಗಿ. ನಾನಿದ್ದೇನೆ. (ಅಶ್ವತ್ಥನು ಹೊರಡುವನು.) ಇವನು ಚಿನ್ನ ಜಾರಿಸಲಿಕ್ಕೆ ಬಂದಿದ್ದನೋ ಏನೋ. ನಾನು ಬಂದದ್ದರಿಂದ ಹಿಂದಿರುಗಿದನು. ಇಂಥವರಿಗೆಲ್ಲ ದೇವರ ಚಿನ್ನ ಹೋಗುವುದಕ್ಕಿಂತ ನನ್ನ ಮೈಮೇಲಿದ್ದರೆ ಚಂದವಲ್ಲವೆ! ಹೂಂ. . . ಕೊನೆಗೂ ಬಂತು ರಾಯರ ಸವಾರಿ . . . .

(ಭಾನುಕೋಟಿಯು ಬರುವನು)

**ಭಾನು**: — ಯಾರು ಚಂದ್ರಿಯೋ! ಏನು ಒಬ್ಬಳೆ ನಿಂತೆ? ಪ್ರಾಯಶಃ ನಿನ್ನೆ ಬರಲಿಲ್ಲವೇಕೆ ಎಂದು ಕೇಳುವುದಕ್ಕಿರಬೇಕು ನಿನ್ನ ಕೈಯಲ್ಲಿ ಸಿಕ್ಕಿಬಿದ್ದೆನಲ್ಲ ಚಂದ್ರಿ, ಏನೆಲ್ಲ ತಿಳಿದುಕೊಳ್ಳಬೇಡ. ಸ್ವಾಮಿರಾಯರು ಬಂದು ಉಸಿರುಬಿಡಲಿಕ್ಕೆ ಅವಕಾಶವಿಲ್ಲದ ಹಾಗಾಗಿದೆ. ಎಷ್ಟೆಂದರೂ ಗುರುಗಳು, ಯಜಮಾನರು . . . ನೀನೀಗ ಹೋಗು.

**ಚಂದ್ರಿ**: — ನಾನು ಬೇಕಾದರೆ ಹೋಗುತ್ತೇನೆ. ಇನ್ನು ಬರುವುದೇ ಬೇಡವಾದರೂ ಬರುವುದಿಲ್ಲ.

**ಭಾನು**: — ಇದೇನು ನಂಜಿನ ಮಾತು?

**ಚಂದ್ರಿ**: — ನಂಜೇನು? ಇದುವರೆಗೆ ಏನಾದರೂ ಗುಟ್ಟುಗಿಟ್ಟು ಹೇಳುವುದಿದ್ದರೆ ನನ್ನ ಹತ್ತಿರ ಮೊದಲಿಗೇ ಹೇಳುತ್ತಿದ್ದಿರಿ. ಈಗ ನಾನು ಸ್ವಲ್ಪ ದೂರವಾದ ಹಾಗೆ ಕಾಣುತ್ತದೆ.

**ಭಾನು**: — ಯಾವ ಮಾತು ಚಂದ್ರಿ? ನಿನ್ನನ್ನು ಬಿಟ್ಟು ಯಾವ ಕೆಲಸವನ್ನು ಮಾಡಿದ್ದೆ?

**ಚಂದ್ರಿಕೆ**: — ಹೌದು. ನಿನ್ನೆ ರಾತ್ರಿ, ಗರ್ಭಗುಡಿಯನ್ನು ಅಗೆಯುವಾಗ ನನ್ನನ್ನು ಕರೆದುಕೊಂಡು ಬಂದಿದ್ದಿರಿ. ಇವತ್ತೀಗ ಭಾವಾಜಿ ಬರುವ ವಿಷಯ ತಿಳಿಸಿದ್ದಿರಿ. ಹೌದು, ತಿಳಿಸಿದ್ದರೆ

ನಾನು ಪಾಲು ಕೇಳಿದರೆ ಕಷ್ಟವಷ್ಟೆ. ಒಟ್ಟಾರೆ ನಿಮ್ಮ ಬುದ್ಧಿ ವಂತಿಕೆಯಿಂದ ನಿಮಗೇ ನಷ್ಟ.

**ಭಾನು:**— ಸ್ವಾಮಿರಾಯರ ಅಪ್ಪಣೆಯಾಗಿತ್ತು: ಯಾರ ಹತ್ತಿರವೂ ಬಾಯಿಬಿಡಬಾರದು— ಎಂದು ಹಾಗಿದ್ದಮೇಲೆ . . . . ?

**ಚಂದ್ರಿ:**— ಹೌದು, ಸ್ವಾಮಿರಾಯರಿರುವಾಗ ನಾನೇಕೆ? ಅವರನ್ನೇ ಕಟ್ಟಿಕೊಳ್ಳಿ.

**ಭಾನು:** - ಚಂದ್ರಿ, ಸಿಟ್ಟುಮಾಡಬೇಡ. ಒಂದು ತಪ್ಪು ಕೆಲಸವಾಯಿತು. ಏನು ಪ್ರಾಯಶ್ಚಿತ್ತ?

**ಚಂದ್ರಿ:**— ಸಾಕು, ದೊಡ್ಡಸ್ತಿಕೆ ಮಾತುಗಳೆಲ್ಲ ನಾನೆನ್ನುವುದನ್ನು ಕೇಳಿರಿ—ಆ ಭಾವಾಜಿಯು ಬಂದು ಚಿನ್ನವನ್ನು ತೆಗೆದು, ಅವನೂ ಇವರೂ ಹಂಚಿಕೊಂಡರೆ ನಡುವೆ ನಿಮಗೇನು ಲಾಭವಾಯಿತು? ನೀವು ಇಷ್ಟು ದಿನ ಸರ್ಪದಂತೆ ನಿಧಿಯನ್ನು ಕಾದುದಕ್ಕೆ ಲಾಭವೇನಾಯಿತು?

**ಭಾನು:**— ಏನುಮಾಡಬೇಕು ಎನ್ನುತ್ತೀ?

**ಚಂದ್ರಿ:**— ಅನ್ನುವುದೇನಿಲ್ಲ; ಹೇಳಿದ ಹಾಗೆ ಮಾಡುತ್ತೀರೇನು?

**ಭಾನು:**— ನಿನ್ನ ಮಾತು ಯಾವುದನ್ನು ತೆಗೆದುಹಾಕಿದ್ದೆ? ಇರಲಿ, ನಿನಗೆ ಯಾರು ಈ ಸುದ್ದಿಯನ್ನು ಹೇಳಿದರು?

**ಚಂದ್ರಿ:**— ಅದು ನಿಮಗೆ ಏಕೆ? ಅಂತು ನನಗೆ ತಿಳಿದು ಬಂದದ್ದು ನಿಮಗೆ ಸಮಾಧಾನವಿಲ್ಲವೆ?

**ಭಾನು:**— ನೀನು ಹಾಗೆ ಹಂಗಿಸಬಾರದು ಏನು ಮಾಡುವುದೆಂದು ಬೇಗನೆ ಹೇಳು. ಈಗ ಸ್ವಾಮಿರಾಯರೂ ಬರಬಹುದು.

**ಚಂದ್ರಿ:**— ನನಗೆ ಎಲ್ಲಾ ಸಂಗತಿ ಗೊತ್ತಿದೆ. ಈಗ ಸ್ವಾಮಿರಾಯರೂ ಬರುತ್ತಾರೆ; ಭಾವಾಜಿಯೂ ಬರುತ್ತಾನೆ. ಅವನು ನಿಧಿತೋರಿ

7

ಸುತ್ತಾನೆ, ನೀವು ಹರಡುತ್ತೀರಿ. ಅವರಿಗೂ ಭಾವಾಜಿಗೂ ಸರಿ ಪಾಲು ಸಿಗುವುದು. ನಿಮಗೆ ನಿಧಿ ಹೂಳಿಟ್ಟ ಹೊಂಡ. ನಾನನ್ನುವು ದನ್ನು ಕೇಳಿ: ಸ್ವಾಮಿರಾಯರು ಅವರ ಪಾಲನ್ನು ತೆಗೆದುಕೊಂಡು ಸತ್ತುಕೊಳ್ಳಲಿ. ಈ ಭಾವಾಜಿಯಾದರೆ ಗತಿಯಿಲ್ಲದ ಪರದೇಶಿ. ಯಾವ ಊರೋ ಏನೋ. ಆದುದರಿಂದ—'ರಾತ್ರಿ ನಿಧಿ ತೆಗೆದುಕೊಂಡು ಒಬ್ಬನೇ ಇರುವುದು ಅಪಾಯಕರ, ಮನೆಗೆ ಹೋಗುವ,' ಎಂದು ನಮ್ಮ ಮನೆಗೆ ಕರೆದುಕೊಂಡು ಬನ್ನಿ. ಮುಂದಿನ ಕೆಲಸವನ್ನು ನಾನು ಮಾಡುತ್ತೇನೆ; ನಿಮಗೆ ಬೇಡ ಹಾಗೆ ಮಾಡಿದರೆ ಉಳಿದ ಅರ್ಧವಾದರೂ ಸಿಕ್ಕೀತಲ್ಲ.

**ಭಾನು:**— ಏನು, ಅವನನ್ನು ಕೊಲ್ಲುವುದೇ?

**ಚಂದ್ರಿ:**— ಅಷ್ಟನ್ನು ಮಾಡುವುದು ಬೇಡವಾದೀತು. ಅವನು ಹಟ ಹಿಡಿದರೆ ಅದನ್ನೂ ಮಾಡುವ. ಯಾರದೋ ಕಾಲುಸಪ್ಪಳ ಕೇಳಿಸುತ್ತದೆ.

**ಭಾನು:**— ಸ್ವಾಮಿರಾಯರು! ನಡಿ, ನಡಿ . . . ಅವರು ಬರುವಾಗ ನೀನಿಲ್ಲಿರಬಾರದು; ಬೈದಾರು. ಎದುರಿಗಾದರೂ ಸಂಭಾವಿತ ನಾಗಿರಬೇಕಲ್ಲ.

**ಚಂದ್ರಿ:**— ಹಾಗಾದರೆ ಹೇಳಿದ್ದು ತಲೆಗೆ ಹೋಯಿತಲ್ಲ.

**ಭಾನು:**— ಹೋಯಿತಮ್ಮ ಹೋಯಿತು!

(ಚಂದ್ರಿಯು ಸಡಗರದಿಂದ ಸರಿಯುವಳು. ಶ್ರೀಪಾದಂಗಳವರ ಪ್ರವೇಶ.)

**ಶ್ರೀಪಾದ:**—ನಾರಾಯಣ, ನಾರಾಯಣ.

**ಭಾನು:**— ನಾರಾಯಣ, ನಾರಾಯಣ.

**ಶ್ರೀಪಾದ:**— ಭಾನು, ಏಕಾಕ್ಷಿಯೇನು ಬರಲಿಲ್ಲ? 'ಬರುತ್ತೇನೆ, ಕರೆದುಕೊಂಡೇ ಬರುತ್ತೇನೆ'— ಎಂದು ಹೇಳಿ ಕಳುಹಿಸಿರುವ

ನೆಂದೆಯಲ್ಲ. ಇನ್ನೂ ಇಲ್ಲ. ಅವನಿಗೆ ಅವರ ಭೇಟಿಯಾದದ್ದು ನಿಜವೇ?

**ಭಾನು:**—ಅಹುದಹುದು. ನಾನೇ ಅಂದೆ—ಸರಿ ಕತ್ತಲೆಯಾದ ಹೊರತು ತರಕೂಡದು—ಎಂದು. ಅಂದರೆ, ನಿನ್ನೆ ದಿನ ಅವನನ್ನು ಬಹಿರಂಗದಲ್ಲಿ ಅಷ್ಟು ಗದರಿಸಿ, ಈಗ ನಾವೇ ಕರೆದ ಸಂಗತಿ ಜನರಿಗೆ ತಿಳಿದರೆ . . . .

**ಶ್ರೀಪಾದ:**—ಅದು ನಿಜ.

**ಭಾನು:**—ಹೂಂ, ಸದ್ದಾಯಿತು ಏಕಾಕ್ಷಿ ಬಂದಿರಬೇಕು. ಸರಿ, ಸಂಕೇತವಾಯಿತಲ್ಲ ಕರೆಯಲೇ?

**ಶ್ರೀಪಾದ:**—ಕರೆ, ಕರೆ ಕಾರಣ, ನಿಧಿಯನ್ನು ಅಗೆಯಲು ಎಷ್ಟು ಸಮಯ ಬೇಕಾದೀತೋ ಏನೋ ಬೆಳಗಾಗುವುದರೊಳಗೆ ಎಲ್ಲವನ್ನು ಸಾಗಿಸಿ ಮೊದಲಿನಂತೆಯೇ ಮಾಡಿ ಇರಿಸಬೇಕಲ್ಲ. ಭಾನು, ಸುಮಾರು ಎಷ್ಟು ನಿಧಿ ಇರಬಹುದು? ತೀರ ಹೆಚ್ಚಿದ್ದರೆ ಸಾಗಿಸುವ ಬಗೆಯಾವುದು? ಒಂದು ಸಾರಿ ತೆಗೆದ ಮೇಲೆ ಚೂರನ್ನು ಇಲ್ಲಿರಿಸಬಾರದು.

**ಭಾನು:**—ಈ ಹೊರಗಿನ ಆಡಂಬರಗಳನ್ನೆಲ್ಲ ನೋಡುವಾಗ ಬಂಡಿಗಟ್ಟಲೆ ಚಿನ್ನ ಇರಬೇಕು ಎಂದು ಕಾಣುತ್ತದೆ. ಆ ಅಂದಾಜಿನ ಮೇಲೆಯೇ, 'ರಾತ್ರಿ ಸುಮಾರು ಎರಡು ಘಂಟೆಯ ಸಮಯಕ್ಕೆ, ನಾಲ್ಕು ಮೋಟಾರು ಲಾರಿಗಳು ತಯಾರಾಗಿರಬೇಕು. ಸ್ವಾಮಿರಾಯರು ಚಂಡಿಕಾ ಪರ್ವತಕ್ಕೆ ಹೋದರೂ ಹೋಗಬಹುದು'-ಎಂದು ಹೇಳಿದ್ದೇನೆ. ಇರಲಿ, ಅವನನ್ನು ಕರೆಯಲೇ?

**ಶ್ರೀಪಾದ:**—ಇರಲಿ, ಉಳಿದರ್ಧವನ್ನು ಭಾವಾಜಿಗೆ ಏತಕ್ಕೆ ಬಿಡಬೇಕು? ಅವನಿಗೇಕೆ ಅಷ್ಟು ಹಣ? ಹೇಳುವುದಕ್ಕೇನೋ

7*

'ಅರ್ಧಕ್ಕರ್ಧ, ಸರಿಪಾಲು' — ಅಂದಿದ್ದೇವೆ. ಆದರೆ, ಅವನು ನಿಧಿಯನ್ನು ತೋರಿಸಿದ ಮೇಲೆ, ಪೂರ್ಣ ಒಳಗೆ ಸೇರಿಸಿಕೊಂಡು ಅದೇ ಹೊಂಡವನ್ನು ಅವನಿಗೆ ಕಾಣಿಸಬಾರದೇಕೆ?

**ಭಾನು:** — (ಆ) ಹೋ, ಹೀಗಾದರೆ ಚಂದ್ರಿಯು ಹೇಳಿದ ಹಾಗೆಯೂ ಮಾಡುವುದಕ್ಕಿಲ್ಲ.

**ಶ್ರೀಪಾದ:** — ಏನು ಯೋಚನೆ ನಿನ್ನದು?

**ಭಾನು:** — ಯೋಚನೆಯಿಲ್ಲ. ನೋಡುವುದಕ್ಕೆ ಅವನು ಹಾಗಿದ್ದರೂ ತನ್ನ ಅರ್ಧವನ್ನು ಸಾಗಿಸಲಿಕ್ಕೆ ಸಿದ್ಧತೆ ಇಲ್ಲದೆ ಎಂದಿಗೂ ಬರಲಿಕ್ಕಿಲ್ಲ. ಹಾಗಿದ್ದರೆ ಅವನ ಜನರಿಂದ ಅಪಾಯವೇ ಬಂದೀತು. ಸಿಗುವುದೂ ಕೈತಪ್ಪೀತು.

**ಶ್ರೀಪಾದ:** — ಹಾಗೂ ಇರಬಹುದೇ?

**ಭಾನು:** — ಭಾವಾಜಿಯವನು! ಅದ್ಭುತ ಶಕ್ತಿಯಿರಬಹುದು. ಅಷ್ಟಿಲ್ಲದಿದ್ದರೆ ಅವನಿಗೆ ಗರ್ಭಗುಡಿಯಲ್ಲಿ ನಿಧಿಯಿರುವ ವಿಚಾರವೇ ತಿಳಿಯಲಿಕ್ಕಿಲ್ಲ.

**ಶ್ರೀಪಾದ:** — ಹಾಗಾದರೆ ಬೇಡ. ಸಿಕ್ಕಿದಷ್ಟು ಮಕ್ಕಳ ಪುಣ್ಯ ಹೂಂ, ಏಕಾಕ್ಷಿ ಬರಲಿ.

(ಭಾನುವು ಸಂಕೇತಮಾಡುವನು, ಏಕಾಕ್ಷಿಯೊಬ್ಬನೇ ಬರುವನು.)

**ಏಕಾಕ್ಷಿ:** — ಖಾವಂದರ ಅಪ್ಪಣೆ ಮೇರೆಗೆ ಕರೆದುತಂದು ತಯಾರು ಮಾಡಿ ನಿಲ್ಲಿಸಿದ್ದೇನೆ. ಅಪ್ಪಣೆಯಾದರೆ ಬರಮಾಡುವೆ.

**ಶ್ರೀಪಾದ:** — ಕರೆದು ತರಲಿಕ್ಕೆ ಏನು ಅಡ್ಡಿ?

**ಏಕಾಕ್ಷಿ:** — ಅಡ್ಡಿಯೇನಿಲ್ಲ. ನನ್ನ ಬಾಬತು ರ . . . ಅದನ್ನು ಕೊಡುತ್ತೀರಿ. ಆದರೆ ಭಾವಾಜಿಯು ಒಂದು ಮಾತನ್ನು ಕೇಳಿ ಬಾ ಎಂದಿದ್ದಾನೆ.

**ಶ್ರೀಪಾದ:** — ಏನು ಮಾತು?

**ಭಾನು:** — ಇಸ್ಸ್ಯ್, ನಿಷ್ಕರ್ಷೆ ಮಾಡಲಿಲ್ಲವೇ?

**ಏಕಾಕ್ಷಿ:** — ನೀವು ಅವಸರ ಮಾಡಬೇಡಿ. ಅವನೆನ್ನುತ್ತಾನೆ — ತಾನು ಒಳಗೆ ಬಂದೊಡನೆಯೇ ಶರ್ತಗಳ ನಿರ್ಣಯವಾಗಬೇಕೆಂದು. ಅದರಂತೆ ನಡೆಯಲೇ ಬೇಕಂತೆ.

**ಶ್ರೀಪಾದ:** — ಅದಕ್ಕೇನು ತೊಂದರೆ? ಅವನು ನಿಧಿಯನ್ನು ತೋರಿಸುವುದು ನಿಶ್ಚಯವೇ?

**ಏಕಾಕ್ಷಿ:** — ಇನ್ನು ಕಾಣಲಾರಿರಿ ಎಂಬಷ್ಟು ದ್ರವ್ಯ ತೋರಿಸಬಹುದು ಎಂದಿದ್ದಾನೆ.

**ಶ್ರೀಪಾದ:** — ಹಾಗಾದರೆ ಅವನ ಶರ್ತವೇನು? ಅರ್ಧಕ್ಕಿಂತ ಹೆಚ್ಚಿಗೆ ಬೇಡುತ್ತಾನೆಯೇ?

**ಏಕಾಕ್ಷಿ:** — ಅದು ನನಗೂ ತಿಳಿಯಲಿಲ್ಲ. ಒಮ್ಮೆ ಬೇಡಿದರೂ "ಇಲ್ಲ" ಎನ್ನಬಾರದು ನೀವು. ನಿಧಿ ಒಂದು ಸಾರಿ ಹೊರಕ್ಕೆ ಬೀಳಲಿ. ಆ ಮೇಲೆ ಅವನ ಪಾಲನ್ನು ಸಾಗಿಸುವಾಗ ನೋಡಿಕೊಂಡರಾಯಿತು.

**ಶ್ರೀಪಾದ:** — ಅದು ಸರಿಯಾದ ಮಾತು.

**ಭಾನು:** — ಆದರೆ ಅವನು ಅರ್ಧಕ್ಕೆ ಒಪ್ಪಿಕೊಂಡರೆ ತೊಂದರೆ ಇಲ್ಲವಷ್ಟೆ.

**ಶ್ರೀಪಾದ:** — ಅಷ್ಟನ್ನು ಕೊಡು . . . ವ.

**ಭಾನು:** — ಹಾಗಾದರೆ ಏಕಾಕ್ಷಿ, ಭಾವಾಜಿಯನ್ನು ಬರಮಾಡು. ಬರುತ್ತ ಹೊರಗಿನ ಕದವನ್ನು ಹಾಕಿ ಬಂದುಬಿಡು.

**ಏಕಾಕ್ಷಿ:** — ಆಯಿತು. ಆದರೆ ಬಡವನನ್ನು ಕೆಲಸವಾದ ಮೇಲೆ ಮರೆಯಬಾರದು. ಭಾವಾಜಿಯ ಹತ್ತಿರವೂ ಹಾಗೆಯೇ ಕೇಳಿದ್ದೇನೆ. ಅವನೂ ನಕ್ಕನು.

**ಶ್ರೀಪಾದ:**— ಇಗೋ, ನಿನಗೆ ಒಂದು ಹೇರು ಚಿನ್ನ ಸಂದರೂ ನನಗೆ ವ್ಯಥೆಯಿಲ್ಲ.

**ಏಕಾಕ್ಷಿ :**— ಮುಖ್ಯ, ಖಾವಂದರ ಅನುಗ್ರಹ. (ತೆರಳುವನು.)

**ಶ್ರೀಪಾದ:**— ಅದಾಯಿತಲ್ಲ, ನಿಧಿಯನ್ನು ತುಂಬಿಸಲಿಕ್ಕೆ ಪೆಟ್ಟಿಗೆ ಇಲ್ಲವೆ ಚೀಲಗಳನ್ನು ಸಂಗ್ರಹಿಸಲೇ ಇಲ್ಲ. ಅವಿಲ್ಲದೆ ನಾಣ್ಯಗಳನ್ನು ಸಾಗಿಸುವುದು ಸಾಧ್ಯವೇ?

**ಭಾನು:**— ಖಾವಂದರೇ, ಅದನ್ನು ನಾನು ಮೊದಲೇ ಸಂಗ್ರಹಿಸಿಟ್ಟಿರುವೆನು. ಪೆಟ್ಟಿಗೆಗಳಿಗಿಂತ ಚೀಲಗಳೇ ಲೇಸೆಂದು ಅವನ್ನು ಕೂಡಿಸಿದ್ದೇನೆ; ತರಲೇ?

**ಶ್ರೀಪಾದ:**— ಬೇಗ ತಾ ಭಾವಾಜಿಯು ಬರುವ ಸಮಯವಾಯಿತು. ತುಂಬಾ ಚೀಲಗಳನ್ನು ತಾ. ಕೊನೆಗೆ ಚೀಲಗಳೇ ಕಡಿಮೆಯಾಗಬಾರದು.

**ಭಾನು:**— ಇಲ್ಲಿಲ್ಲ, ಬೇಕಾದಷ್ಟು ಚೀಲಗಳಿವೆ.

(ಚೀಲಗಳನ್ನು ತರಲು ಹೋಗುವನು.)

**ಶ್ರೀಪಾದ:**— ಎಲ್ಲವೂ ಸಿದ್ಧವಾದ ಹಾಗಾಯಿತು. ಇನ್ನು ಯಾವ ಕೊರತೆಯೂ ಇಲ್ಲ. ಸಾವಿರಾರು ಜನರಲ್ಲಿ ಭಿಕ್ಷೆ ಬೇಡಿ ಬದುಕುವ ಬದಲು ಒಂದೇ ಬಾರಿಗೆ ಸಂಪತ್ತಿನ ಧೊರೆಯಾಗಬಹುದು. ಆದರೆ ಈ ಏಕಾಕ್ಷಿಗೂ, ಭಾನುವಿಗೂ ಎಷ್ಟು ಬಹುಮಾನ ಕೊಡಬೇಕಾದೀತು? ಏಕಾಕ್ಷಿಗೆ ೧೦೦ ರೂಪಾಯಿ ಕೊಡುವೆನೆಂದಿದ್ದೇನೆ. ಅದರಿಂದ ಅವನಿಗೆ ತೃಪ್ತಿಯಾಗಬಹುದೇ? ಛೇ, ಚೀಲಗಟ್ಟಲೆ ದ್ರವ್ಯ ಕಾಣುವಾಗ ನೂರು ರೂಪಾಯಿಗಳಿಂದ ಏನು ತೃಪ್ತಿಯಾದೀತು? ಒಂದು ಚೀಲವನ್ನು ಬೇಡಿಯಾನೆ? ಇನ್ನು ಭಾನುಕೋಟಿಯ ಪಾಲು ಎಷ್ಟು ದೊಡ್ಡದೋ! ಎಲ್ಲವನ್ನೂ

ನನ್ನ ಪಾಲಿನಿಂದಲೇ ಕೊಡಬೇಕೆಂದು ಭಾವಾಜಿ ಹೇಳಿದರೆ ಮತ್ತೂ ಕಷ್ಟ ಇಲ್ಲ, ಅವರೆಲ್ಲರಿಗೆ ಕೊಡುವುದನ್ನು ಕೊಟ್ಟೇ ಸರಿ ಅರ್ಧವನ್ನು ನಾನು ಪಡೆಯಬೇಕು. ಅದೇ ನಿರ್ಣಯ ವನ್ನು ಮುಂಚಿತವಾಗಿ ಮಾಡುವ. ಅವನೂ ಒಪ್ಪದಿರಲಾರನು. ಕಾರಣ, ನಾವು ಒಡಂಬಡದಿದ್ದರೆ ಅವನಿಗೆ ಗರ್ಭಗುಡಿಯಲ್ಲಿ ಕಾಲಿಡುವ ಅಧಿಕಾರ ಸಹ ಇಲ್ಲವಲ್ಲ

(ಭಾನುವು ಚೀಲಗಳನ್ನು ತಂದು ಕೆಡಹುವನು.)

**ಭಾನು:** — ನಾಕೇ ಇಷ್ಟು ಚೀಲಗಳು? ೭೫ ಇವೆ.

**ಶ್ರೀಪಾದ:** — ಅದಕ್ಕೂ ಮಿಕ್ಕಿ ಬೇಕಾದರೆ —

**ಭಾನು:** — ಅಹುದು. ಬೇಕಾದರೂ ಆಗಬಹುದು. ಅಲ್ಲದೆ ಅವ ನಿಗೂ ಚೀಲಗಳನ್ನು ನಾವೇ ಒದಗಿಸಿಕೊಡಬೇಕಾದೀತು.

**ಶ್ರೀಪಾದ:** — ಅವನ ಚೀಲಗಳನ್ನು ಅವನೇ ತರಬೇಕು.

(ಏಕಾಕ್ಷಿಯು ಬರುವನು.)

**ಶ್ರೀಪಾದ:** — ಬಂದನೇ?

**ಭಾನು:** — ಬಂದನೇ?

**ಏಕಾಕ್ಷಿ:** — ಈಗ ಬರುವೆನೆಂದನು.

**ಶ್ರೀಪಾದ:** — ಇನ್ನೂ ಬರಲಿಲ್ಲವೆ? ಕರೆದು ತಾರೆಂದೆನಲ್ಲ.

**ಏಕಾಕ್ಷಿ:** — ಕರೆದು ತರುವುದರಲ್ಲಿಯೇ ಇದ್ದೆನು. ಅಷ್ಟರಲ್ಲಿ ಅವನಿಗೆ ಇನ್ನೊಂದು ಕರೆ ಬಂದಿತು.

**ಶ್ರೀಪಾದ:** — ಅಯ್ಯೋ ವಿಘ್ನವೇ! ನೀನೇಕೆ ಅವನನ್ನು ಬಿಟ್ಟೆ?

**ಏಕಾಕ್ಷಿ:** — ಹಾಗೆ ಆಗ್ರಹ ಪಡಿಸಿದರೆ ನಮ್ಮ ರಹಸ್ಯವು ಹೊರ ಬಿದ್ದೀ ತೆಂದು.

**ಶ್ರೀಪಾದ:** — ಅದೂ ನಿಜವೆ ಯಾರಪ್ಪ ಅವನನ್ನು ಕರೆದೊಯ್ದವರು?

**ಏಕಾಕ್ಷಿ:**— ಅದು ನಮ್ಮ ಮಾಣೇಶ. ಅಪಶಕುನವೆಲ್ಲಿ! ಅವನ ಮಗನಿಗೆ ಕಾಯಿಲೆ ಏನಿಲ್ಲ ಬರಿ ವಾಂತಿಭೇದಿ. ಹೊಲಗೇರಿಯಲ್ಲಿ ಅದು ತೊಡಗಿ ಈಗ ಬ್ರಾಹ್ಮಣರ ಬೀದಿಗೂ ಹಬ್ಬಿದೆ ಈ ಭಾವಾಜಿಯು ಹೋಗಿ ಹೊಲಗೇರಿಯಲ್ಲಿ ಅದನ್ನು ಗುಣಪಡಿಸಿ ಬಂದನಂತೆ. ಮಾಣೇಶನು ಅದಕ್ಕಾಗಿ ಇವನನ್ನು ಒಯ್ದನು. "ಮಗನು ಸಾಯುತ್ತಾನೆ ಬನ್ನಿ"— ಎಂದನು.

**ಶ್ರೀಪಾದ:**— ಸತ್ತರೆ ಸತ್ತನು ಎಂಥ ಕತ್ತೆಯಿವನು! ನಮಗಿಲ್ಲಿ ಬೆಳಗಾದರೆ ಎಲ್ಲಾ ಬಣ್ಣ ಮಸಿನುಂಗಿತು.

**ಏಕಾಕ್ಷಿ:**— ಇಲ್ಲಿಲ್ಲ, ಭಾವಾಜಿಯು ಅಷ್ಟು ಭರವಸೆಯನ್ನು ಕೊಟ್ಟಿದ್ದಾನೆ ಅಲ್ಲಿಯ ತನಕ ಅವನು ಹೋಗುವುದಿಲ್ಲವಂತೆ. ಇಲ್ಲಿಂದಲೇ ಏನೋ ಔಷಧ ಕೊಟ್ಟು ಬರುವೆನೆಂದನು. ಅರೇ, ಬಂದನಲ್ಲ. ಋಷಿವರ್ಯರೇ, ಹೀಗೆ ದಯಮಾಡಿಸಬೇಕು.

(ಕಾಶ್ಯಪನು ಆಗಮಿಸುವನು. ಎಲ್ಲರೂ ಅವನಿಗೆ ಉದ್ದಂಡ ನಮಸ್ಕರಿಸುವರು.)

**ಕಾಶ್ಯಪ:**— ಛೀ, ಪರರಿಂದ ಸಾಷ್ಟಾಂಗವೆರಗಿಸಿಕೊಳ್ಳುವ ನೀವು ನನ್ನಂಥ ಭಾವಾಜಿಯ ಕಾಲಿಗೆರಗುವುದೇ?

**ಶ್ರೀಪಾದ:**— ಭಾವಾಜಿಯವರೇ, ತಾವು ಮಹಾತ್ಮರೆಂದು ತಿಳಿದಿರಲಿಲ್ಲ.

**ಕಾಶ್ಯಪ:**— ನನ್ನದೆಂಥ ಮಹಾತ್ಮೆ? ಹೊಲೆಗೇರಿಯ ಮಹಾತ್ಮೆ.

**ಭಾನು:**— ಋಷಿಗಳೇ, ತಾವು ಹಾಗೆ ಸಿಟ್ಟಾಗಬಾರದು. ತಮ್ಮಂಥವರು ಹೊಲಗೇರಿಯಲ್ಲಿದ್ದರೂ ಪವಿತ್ರರೇ ನಮ್ಮಂಥವರಿಗೆ ಮಾತ್ರ ಸ್ಪೃಶ್ಯಾಸ್ಪೃಶ್ಯ ಭೇದವಲ್ಲದೆ ಚಿನ್ನಕ್ಕೇನು ದೋಷ? ಇರಲಿ, ನಾವೀಗ . . . .

**ಏಕಾಕ್ಷಿ:**— ಹೌದು ಮಹಾಸ್ವಾಮಿ, ಖಾವಂದರು ಹಿಂದಾದ ಸಂಗತಿಗಳನ್ನು ಮರೆಯಬೇಕು ಎಂದಿದ್ದಾರೆ. ತಾವು ಗರ್ಭಗುಡಿಯನ್ನು ಪ್ರವೇಶಿಸುವುದಕ್ಕೆ ಅಡ್ಡಿಯೇ ಇಲ್ಲ. ಮುಖ್ಯ, ನಿಧಿಯ ವಿಷಯದಲ್ಲಿ ತಮ್ಮ ಅಭಿಪ್ರಾಯ ಹೇಗೆ?

**ಶ್ರೀಪಾದ:**— ತಾವು ಹೇಳಿದಂತೆ ನಡೆದುಕೊಳ್ಳುವುದರಲ್ಲಿ ನನ್ನ ಆಕ್ಷೇಪವಿಲ್ಲ. ಸರಿ, ಅರ್ಧಾಂಶವಾದರೆ ಇಬ್ಬರಿಗೂ ಸಂತೋಷವಷ್ಟೆ.

**ಕಾಶ್ಯಪ:**— ಸ್ವಾಮಿಯವರೇ, ನನ್ನ ಶರ್ತವು ಹೆಚ್ಚಿಲ್ಲ. ಮೊದಲು . . . ನಿಮಗೆ ಎಷ್ಟು ದ್ರವ್ಯಬೇಕು?

**ಶ್ರೀಪಾದ:**— ಛೇ, ತಾವು ಹಾಗೆ ಹೇಳಿದರಾಗದು. ಯಾವತ್ತು ನಿಧಿಯನ್ನು ತಾವು ಹೊರಗೆ ತೆಗೆದು ಪಾಲುಮಾಡಿದರೆ . . .

**ಕಾಶ್ಯಪ:**— ಪಾಲು ಮಾಡುವ. ಆದರೆ ಇಲ್ಲಿ ಕೇಳಿರಿ— ನನ್ನ ಶರ್ತವು ವಿಚಿತ್ರವಾಗಿದೆ. ನನಗಿದರಲ್ಲಿ ಪಾಲು ಬೇಡ. ನನ್ನ ಪಾಲಿನ ಬದಲು ಮಾಣೇಶನಿಗೂ ಏಕಾಕ್ಷಿಗೂ ಹಂಚಿಕೊಡಿರಿ. ನಿಮ್ಮೆಲ್ಲರಿಗೂ ನೀವು ತೃಪ್ತಿಪಡುವಷ್ಟು ನಿಧಿಯನ್ನು ಕೊಡಿಸುವೆನು. ಆದರೆ ನನ್ನ ಶರ್ತವನ್ನು ಮಾನಿಸಲೇ ಬೇಕು.

**ಶ್ರೀಪಾದ:**— ನೀವು ಅಷ್ಟು ಅನುಗ್ರಹಿಸುವುದಾದರೆ ನಿಮ್ಮ ಶರ್ತಗಳನ್ನು ನಾವು ಮಾನಿಸುವೆವು ಆದರೆ ಭಾವಾಜಿ, ಏಕಾಕ್ಷಿಗೆ, ಏಕಾಕ್ಷಿಗಿರಲಿ, ಅಷ್ಟೆಲ್ಲ ಶ್ರಮವಹಿಸಿದ್ದಾನೆ— ಮಾಣೇಶನಿಗೆ ಪಾಲುಕೊಡುವುದೇಕೆಂದು ತಿಳಿಯದಲ್ಲ.

**ಕಾಶ್ಯಪ:**— ನೀವೇಕೆ ಅಷ್ಟು ಆಸೆಮಾಡಬೇಕು? ಅವನಿಗೂ ಹಣದಾಸೆ ತುಂಬ. ಅಂಥದನ್ನು ನಾನು ಹೋಗಲಾಡಿಸಬೇಡವೇ? ನಿಮ್ಮ ಪಾಲಿಗೆ ಕೊರತೆಯಿಲ್ಲವಾದರೆ ಸರಿಯಷ್ಟೆ.

**ಶ್ರೀಪಾದ:**— ಏನು ಮಾಡಲಿ, ಭಾನು?

**ಭಾನು:**— ಈಗ ಒಪ್ಪಿಕೊಳ್ಳಿರಿ, ಮುಂದೆ ನೋಡುವ.

**ಶ್ರೀಪಾದ:**— ಭಾವಾಜಿಯವರ ಇಚ್ಛೆಯಂತಾಗಲಿ.

(ಮಾಣೇಶನು ಹಿಗ್ಗಿನಿಂದ ಬರುವನು.)

**ಮಾಣೇಶ:**— ಭಾವಾಜಿ, ನಿಮ್ಮ ಕೃಪೆಯಿಂದ ಮಗುವಿಗೆ ಆರೋಗ್ಯವಾಯಿತು. (ನಮಸ್ಕರಿಸಿ ನಿಲ್ಲುವನು.)

**ಶ್ರೀಪಾದ:**— ಕದವನ್ನಿಕ್ಕಿ ಬರಲಿಲ್ಲವೇ? ಏಕಾಕ್ಷಿ, ಓಡು, ಬಾಗಿಲನ್ನು ಹಾಕಿ ಬಾ . . . (ಏಕಾಕ್ಷಿ ತೆರಳುವನು.)

**ಕಾಶ್ಯಪ:**— ಸ್ವಾಮಿಯವರೇ, ನನ್ನ ಶರ್ತವು ಹೀಗಿದೆ . . . ನೀವು ಬಯಸುವಷ್ಟು ಹೊನ್ನನ್ನು ಕೊಡಿಸುತ್ತೇನೆ; ನಿಮಗೆ ತೃಪ್ತಿಯಾಗುವಷ್ಟು . . .

**ಶ್ರೀಪಾದ:**— ಎಷ್ಟು ಕೇಳುವೆವೋ ಅಷ್ಟನ್ನೂ . . . ?

**ಕಾಶ್ಯಪ:**— ಅಷ್ಟನ್ನೂ.

**ಶ್ರೀಪಾದ:**— ಪ್ರತಿಯಾಗಿ ನಾವೇನು ಮಾಡಬೇಕು?

**ಕಾಶ್ಯಪ:**— ನೀವು ಈ ಎರಡರಲ್ಲಿ ಒಂದನ್ನು ಕೇಳಬೇಕು ಈ ಗುಡಿಯಲ್ಲಿ ನಗನಾಣ್ಯಗಳನ್ನು ಒಯ್ದರೆ ಉಳಿಯುವುವು ಏತಕ್ಕೂ ಬಾರದ ಕಲ್ಲುಗಳಲ್ಲವೇನು?

**ಶ್ರೀಪಾದ:**— ಅಷ್ಟೇ ಸರಿ.

**ಕಾಶ್ಯಪ:**— ಅದನ್ನೇ ನೀವು ದೇವರೆಂದು ಕರೆಯುತ್ತಿರಬಹುದು. ಆದರೆ ನಿಮ್ಮ ಅನಾಥಸ್ವಾಮಿಯ ವಿಗ್ರಹವು ಚಿನ್ನದ್ದು. ಅದನ್ನು ಇಲ್ಲವೆ ನೀವು ಬಯಸುವಷ್ಟು ದ್ರವ್ಯ— ಇವುಗಳಲ್ಲಿ ಯಾವುದಾದರೊಂದನ್ನು ಕೇಳಿರಿ. ಯೋಚನೆಗೆ ಅವಕಾಶವಿತ್ತಿರುವೆ.

**ಶ್ರೀಪಾದ:**— ಇದು ಚೇಷ್ಟೆಯಲ್ಲವಷ್ಟೆ?

**ಕಾಶ್ಯಪ:**— ನಾನೀವರೆಗೆ ಚೇಷ್ಟೆಮಾಡಿದವನಲ್ಲ.

**ಶ್ರೀಪಾದ:**— ಹಾಗಾದರೆ ಭಾನು, ಇಲ್ಲಿ ಬಾ; ಏಕಾ ಇಲ್ಲಿ ಬಾ . . .

(ಮೂವರೂ ಕಲೆತು ಯೋಚಿಸುವರು.)

**ಕಾಶ್ಯಪ:**— ಮಾಣೇಶನನ್ನು ಏಕೆ ಬಿಡುವಿರಿ? ಅವನನ್ನೂ ಸೇರಿಸಿ ಕೊಳ್ಳಿರಿ. (ಅಂತೆಯೇ ಮಾಡುವರು.)

**ಶ್ರೀಪಾದ:**— ಏನು? ನಾವು ಬೋಳುಗುಡಿಯ ಯಜಮಾನ ರಾಗುವುದು ಹಿತವೇ? ಇಲ್ಲವೆ ದ್ರವ್ಯವನ್ನು ಪಡೆಯುವುದು ಒಳಿತೇ?

**ಭಾನು:**— ಭಾವಾಜಿಯ ಹೇಳಿಕೆಯಂತಾದರೆ, ನಾವು ಚಿನ್ನವನ್ನು ಹೊತ್ತುಕೊಂಡು ಇಲ್ಲಿಂದ ಹೊರಡಲೇಬೇಕೆಂಬ ತಾತ್ಪರ್ಯ ವಾಗುವುದು

**ಶ್ರೀಪಾದ:**— ಅದೇನಾದರೆ ನಮಗೇನು? ಅಷ್ಟೊಂದು ದ್ರವ್ಯ ಸಿಗುವು ದಾದರೆ ನಾವೇಕೆ ಊರನ್ನು ಬಿಡಬಾರದು? ಇಲ್ಲಿಯೇ ಇದ್ದರೆ, ದೇವರನ್ನು ಮಾರಿದೆವು—ಎಂದು ಪುಂಡ ಜನರು ಹೇಳ ಬಹುದು.

**ಭಾನು:**— ಛೇ, ಈ ಯೋಚನೆಗೆ ಚಂದ್ರಿಯಿರುತ್ತಿದ್ದರೆ . . .

**ಏಕಾಕ್ಷಿ:**— ನಾವು ಹೊರಡುವುದಾದರೆ ಅವಳನ್ನು ಒಯ್ಯಬೇಕು.

**ಶ್ರೀಪಾದ:**— ಮಾಣೇಶ, ನಿನ್ನ ಅಭಿಪ್ರಾಯವೇನು?

**ಮಾಣೇಶ:**— ನನಗೇನು ತಿಳಿಯುವುದು? ಅಂತು ದಿನನಿತ್ಯ ಯಾತ್ರಿ ಕರ ಬಾಲ ಹಿಡಿಯುವ ಬದಲು, ಒಂದೇ ಬಾರಿಗೆ ನಿಧಿಯು ಸಿಕ್ಕಿ ದರೆ, ಮುಂದೆ ಯಾವ ಚಿಂತೆಯೂ ಇಲ್ಲ.

**ಶ್ರೀಪಾದ:**— ಹಾಗಾದರೆ ಇದೇ ನಿರ್ಧಾರವನ್ನು ಭಾವಾಜಿಗೆ ಹೇಳೋ ಣವೆ?

**ಭಾನು:**— ಹೇಳಬಹುದೆಂದು ಕಾಣುತ್ತದೆ. ಈಗ ನೋಡುವಾಗ, ಗುಡಿಯಲ್ಲಿ ಮತ್ತೂ ಹೆಚ್ಚು ನಿಧಿಯಿರಬೇಕೆಂದು ನನಗೆ ಸಂಶಯ ವಾಗುವುದು.

**ಶ್ರೀಪಾದ:**— ಹಾಗಿದ್ದರೆ — 'ನೀನು ಒಂದೇ ಒಂದು ಚಿನ್ನದ ಮೊಳೆ ಯನ್ನು ಸಹ ಇರಿಸಿಕೊಳ್ಳಬಾರದು'— ಎನ್ನುವ

**ಭಾನು:**— ಸರಿ ಅದೇ ನಿಶ್ಚಯ. ಭಾವಾಜಿಯವರೇ, ನಿರ್ಧರಿಸಿರು ವೆವು.

**ಕಾಶ್ಯಪ:**— ಏನು ನಿರ್ಧಾರವಾಯಿತು?

**ಭಾನು:**— ನಾವು ಕೇಳಿದಷ್ಟು ದ್ರವ್ಯವನ್ನು ತಾವು ಕೊಡಬೇಕು; ಅಲ್ಲದೆ ತಾವು ಒಂದು ತಾಮ್ರದ ಕಾಸನ್ನೂ ಇರಿಸಿಕೊಳ್ಳ ಬಾರದು.

**ಕಾಶ್ಯಪ:**— ನನ್ನ ಅಭಿಪ್ರಾಯವೂ ಅದೇ. ಹಾಗಾದರೆ — 'ಅನಾಥ ಬಂಧು, ನನಗೆ ನೀನು ಬೇಕಿಲ್ಲ; ಬದಲು, ಬೇಕೆನ್ನುವಷ್ಟು ಚಿನ್ನ ವನ್ನು ಕೊಡು' — ಎಂದು ಪ್ರತಿಯೊಬ್ಬರೂ ಬೇಡಲಿ.

**ಶ್ರೀಪಾದ.**— ಹಾಗೆ ಬೇಡಲು . . . .

**ಕಾಶ್ಯಪ:** — ದ್ರವ್ಯವು ಬೇಕಾದರೆ —

**ಭಾನು:**— ಖಾವಂದರೇ, ಕೇಳಲು ಏನು ಸಂಕೋಚ? ಕಲ್ಲಿನ ಬೊಂಬೆಯ ಮುಂದೆ ಏನೆಂದರೇನು?

**ಏಕಾಕ್ಷಿ:**— ಕೇಳುವ.

**ಮಾಣಿಕೇಶ:**— ಕೇಳುವ.

**ಶ್ರೀಪಾದ:**— 'ಅನಾಥ ಬಂಧು, ನನಗೆ ನೀನು ಬೇಡ. ಬೇಕೆನ್ನು ವಷ್ಟು ದ್ರವ್ಯವನ್ನು ಮಾತ್ರ ಕೊಡು.'

(ಎಲ್ಲರೂ ಧ್ವನಿಗೂಡಿಸುವರು.)

**ಕಾಶ್ಯಪ:**—ಹಾಗಾದರೆ ಗರ್ಭಗುಡಿಯ ಮುಂದೆ, ಕೈಜೋಡಿಸಿ ನಾಲ್ಕು ಮೂಲೆಗೆ ನಾಲ್ವರು ನಿಂತಿರಿ. ದೇವಾ, ನಿನ್ನ ದರ್ಶನಕ್ಕೆ ಬಂದಿರುವೆ, ಬೇಡಿದವರ ಇಷ್ಟಾರ್ಥವನ್ನು ಕೊಡು.

(ಹೀಗೆಂದು ಅನಾಥಸ್ವಾಮಿಯ ವಿಗ್ರಹವನ್ನು ಕೀಳಲು ಹೋಗುವನು.)

**ಶ್ರೀಪಾದ:**—ಅದನ್ನು ಕಿತ್ತರೆ . . . . .

**ಕಾಶ್ಯಪ:**—ನಿಮಗೇನು? ಅದನ್ನು ನಿಮಗೇ ಕೊಡುವೆನು. ಚಿನ್ನವದು, ನನಗೆ ಬೇಡ. ಈಗ ಹಿಡಿಯಿರಿ, ಎಷ್ಟು ಬೇಕೋ ಅಷ್ಟು ದ್ರವ್ಯವನ್ನು ಹಿಡಿಯಿರಿ.

(ತಾನು ನಿಂತಲ್ಲಿಂದ ಬೊಗಸೆಬೊಗಸೆಯಾಗಿ ಚಿನ್ನವನ್ನೆಸೆಯುವನು.)

**ಎಲ್ಲರು:**—ಚಿನ್ನ, ಚಿನ್ನ, ಚಿನ್ನ . . . . ಇನ್ನೂ ಚಿನ್ನ, ಇನ್ನೂ ಚಿನ್ನ.

(ಕಾಶ್ಯಪನು ಹೆಚ್ಚುಹೆಚ್ಚಾಗಿ ಎಸೆಯುವನು. ದ್ರವ್ಯದ ರಾಶಿಯೇ ಬೀಳುವುದು.)

ಚಿನ್ನ, ಚಿನ್ನ, ಚಿನ್ನ . . . .

**ಕಾಶ್ಯಪ:**—ಸಾಕೇ? ಸಾಕೇ?

**ಎಲ್ಲರು:**—ಚಿನ್ನ, ಚಿನ್ನ, ಚಿನ್ನ . . . .

**ಕಾಶ್ಯಪ:**—ಸಾಕೇ?

**ಎಲ್ಲರು:**—ಸಾಕು. ಸಾಕು. ಹೊರಲಾರೆವು; ಸಾಕು. ಚಿನ್ನ. ಚಿನ್ನ. ಚಿನ್ನ

(ಹೀಗೆಂದು ಆ ನಿಧಿಯ ರಾಶಿಯ ಮುಂದೆ ಎದೆಯೊಡೆದು ಕಂಭದಂತೆ ನಿಂತುಬಿಡುವರು. ಕಾಶ್ಯಪನು, ಹಿಂದೆ ಕಾಣಿಸಿಬರುವ ಅನಾಥಬಂಧು ವಿಗ್ರಹಕ್ಕೆ ನಮಸ್ಕಾರ ಮಾಡುವನು.)

**ಕಾಶ್ಯಪ:**—ನನ್ನ ಅನಾಥ ಬಂಧುವಿವನು! ಅನಾಥ ಬಂಧುವಿವನು! ದೇವಾ, ನಿನ್ನೆದುರಿಗೆ ಚಿನ್ನದ ಗೋಡೆಯನ್ನು ಕಟ್ಟಿ ಜಗವನ್ನು ವಂಚಿಸಿದ್ದರಲ್ಲ. ಕಾಂಚನಕ್ಕಾಗಿ ಬಡಿದಾಡುವವರಿವರು.

ಒಮ್ಮೆ ಇವರ ಹಸಿವನ್ನು ಹಿಂಗಿಸು ಎಲುಬು ಮಾಂಸಗಳುಳ್ಳ ಮಕ್ಕಳನ್ನು ಅವರಿಗೆ ಕೊಡುವ ಬದಲು ಚಿನ್ನದ ಮಕ್ಕಳನ್ನು ಕೊಡಿಸು. ಆ ಮಕ್ಕಳಿಗೆ ವಜ್ರದ ಕಣ್ಣುಗಳಿರಲಿ. ಅವರು ಆ ಗೊಂಬೆಗಳನ್ನೆತ್ತಿ ಮನದಣಿಯಲಿ. ಇಲ್ಲವಾದರೆ ನನ್ನೊಡೆಯ, ನಿನ್ನ ವಿಗ್ರಹದ ಸುತ್ತ, ಅವರು ಚಿನ್ನದ ಗೋಡೆಯನ್ನು ಕಟ್ಟಿ, ನಿನ್ನ ಕಣ್ಣುಗಳಿಗೆ ವಜ್ರದ ಮೊಳೆಯನ್ನು ಹೊಡೆಯುವರು

ದೇವಾ, ಅನಾಥಬಂಧು, ಎಂಥ ಪ್ರಿಯವಾದ ದರ್ಶನವು ಇದು! ಇಷ್ಟು ದಿನ ನಿನ್ನನ್ನು ಚಿನಿವಾರ ಕಟ್ಟೆಯ ಕಾವಲುಗಾರ ನನ್ನಾಗಿ ಮಾಡಿದ್ದರಲ್ಲ. ನಿನ್ನ ದಯೆಯಿಂದ ಅವರನ್ನೋಡಿ ಸಿರುವೆ. ಅನಾಥಬಂಧು—ಸ್ವೀಕರಿಸೀಗ, ಮೊದಲಿನಂತೆ ಅನಾಥರನ್ನು ಸ್ವೀಕರಿಸು. ಮೇಲು ಕೀಳೆನ್ನದೆ, ದರಿದ್ರ ಶ್ರೀ ಮಂತರೆನ್ನದೆ, ಎಲ್ಲರನ್ನೂ ಸ್ವೀಕರಿಸು. ಶರಣು ಬಂದವರನ್ನು ಉದ್ಧರಿಸು.

ಬನ್ನಿರಿ ನನ್ನ ಗೆಳೆಯರೇ, ಬನ್ನಿರಿ ಅನಾಥರೇ, ಬನ್ನಿರಿ. ದಾರಿದ್ರ್ಯವೈಷಮ್ಯಗಳಿಂದ ಆಳಾಗಿ ನರಳಿದವರೇ, ನೂರಾರು ವರುಷಗಳ ಕಟ್ಟಲೆಯ ಕಡು ಬಂಧದಲ್ಲಿ ಸಿಲುಕಿ ಅಂಧರಾಗಿ ಬಾಳಿದವರೇ, ಮಾನವನ ಅಹಂಕಾರಕ್ಕೆ ಸಿಲುಕಿ ಪತಿತರಾಗಿ ಬಾಳಿದವರೇ, ಪುರುಷನ ಕಾಮಾಗ್ನಿಗೆ ಸಿಲುಕಿ ಶರೀರವನ್ನು ಕ್ರೀಡಾವನವನ್ನಾಗಿ ಮಾಡಿಕೊಂಡವರೇ, ಬನ್ನಿ . . . . ಈ ಅನಾಥ ಬಂಧುವಿನ ಗುಡಿಯು ಸದಾ ತೆರೆದಿರುವುದು. ಬಾಗಿಲು ಗಳೇ, ತೆರೆಯಿರಿ. (ತೆರೆಯುವುವು.) ಗರ್ಭ ಗುಡಿಯ ಬಾಗಿಲು ಇಂದು ಜಗತ್ತಿಗೇ ತೆರೆದಿರುವುದು. ಅಂತರಂಗವು ಶುದ್ಧವುಳ್ಳವರಿಗೆ, ಆರ್ತಿಗಳಿಗೆ, ಮಾನವ ಸರ್ವಸ್ವರಿಗೆ ಇಲ್ಲಿ

ಬರುವ ಸ್ವಾತಂತ್ರ್ಯವಿದೆ. ಅನಾಥರಿಗಾಗಿಯೇ ಕಾದಿರುವನು ಅವನು.

ಮೊದಲು ಇದು ಚಿನ್ನದ ದೇಗುಲವಾಗಿತ್ತು; ಅದಕ್ಕೆ ಕಲ್ಲಿನ ಒಡಲಿತ್ತು. ಈಗ ಕಲ್ಲಿನ ದೇಗುಲವಿದು; ಚಿನ್ನದ ಒಡಲು ಬಂದಿದೆ.

(ಪತಿತರು, ಉತ್ತಮರು, ಎಂಬ ವ್ಯತ್ಯಾಸವಿಲ್ಲದೆ ಜನಸಮುದಾಯವು ನೆರೆಯುವುದು. ಎಲ್ಲರೂ ಆನಂದ ಆಶ್ಚರ್ಯಗಳಿಂದ ತುಂಬಿರುವರು.)

ಅನಾಥಬಂಧುವಿನ ಕಂದಮ್ಮಗಳೇ, ತೆರೆಯಿರಿ ನಿಮ್ಮ ಒಡಲನ್ನು. ನನ್ನ ದೇವನಿಗಾಗಿ ತೆರೆದಿಡಿ; ಸಂಪೂರ್ಣ ತೆರೆದಿಡಿ. ಅವನು ದೇಗುಲದ ಗರ್ಭಗುಡಿಯನ್ನು ನಿಮಗಾಗಿ ತೆರೆದಿರುವನು.

ಜೈ ಅನಾಥಬಂಧು! ಜೈ ಆನಂದ ಪುರುಷ!

(ಅಂತ್ಯವಿಲ್ಲದ ಜಯಘೋಷವಾಗುವುದು . . . . ಘಂಟೆ ಶಂಖಗಳ ಮಂಗಳ ಧ್ವನಿಯಾಗುವುದು.)